# ಸಮಾಜ ವಿಜ್ಞಾನ

ಭಾಗ - 2

PART - 2

ತರಗತಿ VIII

STD VIII

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2025

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲಿ ನನ್ನ ಆನಂದವಿದೆ.

# 8

# ಸಮಾಜ ವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಸಮಾಜ ವಿಜ್ಞಾನ ಕಲಿಕೆಯ ಮೂಲಕ ವಿಶಾಲವಾದ ಪ್ರಪಂಚದ ಕುರಿತು ಹಾಗೂ ವೈವಿಧ್ಯಪೂರ್ಣವಾದ ಸಾಮಾಜಿಕ ಜೀವನದ ಕುರಿತು ಅನೇಕ ವಿಚಾರಗಳನ್ನು ಹಿಂದಿನ ತರಗತಿಗಳಲ್ಲಿ ನಾವು ಮನದಟ್ಟು ಮಾಡಿಕೊಂಡಿದ್ದೇವೆ. ಸಮಾಜದ ಚರಿತ್ರೆ ಮತ್ತು ಬದಲಾವಣೆಗಳನ್ನು ಆಳವಾಗಿ ಅರ್ಥೈಸಿಕೊಳ್ಳಲಿರುವ ಅವಕಾಶಗಳು ಇಲ್ಲಿ ಲಭಿಸುತ್ತವೆ. ತಾಯ್ನಾಡಿನ ಗತಕಾಲದ ಕುರಿತಾದ ನವೀನ ಅರಿವುಗಳು ನಮ್ಮ ಇತಿಹಾಸ ಜ್ಞಾನದಲ್ಲಿ ಹೊಸ ಪ್ರಕಾಶವನ್ನು ಬೀರುತ್ತವೆ.

ರಾಷ್ಟ್ರೀಯ ಚಳುವಳಿಯು ಕೇರಳದಲ್ಲಿ ಬಲಗೊಂಡ ರೀತಿ, ವಿದೇಶಿ ಅಧಿಪತ್ಯಕ್ಕೆದುರಾಗಿ ದೇಶೀಯ ರಾಜ್ಯಗಳು ನಡೆಸಿದ ಹೋರಾಟಗಳು, ಸಾಮಾಜಿಕ ಕೆಡುಕುಗಳಿಗೆದುರಾಗಿ ರೂಪುಗೊಂಡ ಸುಧಾರಣ ಚಳುವಳಿಗಳು, ನಾಗರಿಕ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳು ಮತ್ತು ಐಕ್ಯ ಕೇರಳದ ರೂಪೀಕರಣವನ್ನು ಇಲ್ಲಿ ಕಲಿಕಾ ವಿಷಯವನ್ನಾಗಿಸಲಾಗಿದೆ.

ಅಲ್ಲದೆ ಜಾಗತಿಕ ಸಂಸ್ಕೃತಿಗಳನ್ನು ಪರಿಚಯಿಸಲು, ಯುರೋಪಿನಲ್ಲಿ ಅಸ್ತಿತ್ವದಲ್ಲಿದ್ದ ಫ್ಯೂಡಲ್ ವ್ಯವಸ್ಥೆಯ ವಿಶೇಷತೆಗಳನ್ನು ಗುರುತಿಸಲು ಮತ್ತು ವಿವಿಧ ಜಾಗತಿಕ ದೇಶಗಳ ರೂಪೀಕರಣದ ಕುರಿತು ತಿಳಿಯಲು ಈ ಪಠ್ಯಪುಸ್ತಕವು ನಿಮಗೆ ಸಹಾಯಕವಾಗಿದೆ. ಯುರೋಪಿನ ಹವಾಗುಣ, ಸಾಮಾಜಿಕ ಜೀವನ, ಕೃಷಿ, ಕೈಗಾರಿಕೆ ಮೊದಲಾದವುಗಳನ್ನು ಇಲ್ಲಿ ವಿವರವಾಗಿ ಪ್ರತಿಪಾದಿಸಲಾಗಿದೆ. ಜಾಗತಿಕ ಜೀವನಕ್ರಮಕ್ಕೆ ಸಂಬಂಧಿಸಿದ ನಿಗಮನಗಳಿಗೆ ತಲುಪಲು, ವಿಶ್ವಪೌರನೆಂಬ ದೃಷ್ಟಿಕೋನವನ್ನು ರೂಪಿಸಲು ಸಾಧ್ಯವಾಗುವ ಪಾಠಭಾಗಗಳೂ ಇವೆ.

ಪ್ರಜಾಪ್ರಭುತ್ವದ ಅರ್ಥ, ವ್ಯಾಪ್ತಿ, ಮೂಲಭೂತ ಘಟಕಗಳು ಮೊದಲಾದವುಗಳ ಕುರಿತು ಆಳವಾಗಿ ತಿಳಿಯಲು ಈ ಪಠ್ಯಪುಸ್ತಕವು ಉಪಯುಕ್ತವಾಗಿದೆ. ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದ ಪಕ್ಷ ವ್ಯವಸ್ಥೆಯ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕೃಷಿಯು ಒಂದು ಸಂಸ್ಕೃತಿಯಾಗಿ ಬೆಳೆಯಬೇಕಾದುದು ಅನಿವಾರ್ಯವಾಗಿದೆ. ಕೃಷಿ ವಲಯದಲ್ಲಿ ಉಂಟಾದ ನೂತನ ಒಲವುಗಳು ಮತ್ತು ಅನುಬಂಧ ಕೃಷಿ ರೀತಿಗಳನ್ನು ಪರಿಚಯಿಸುವುದರ ಮೂಲಕ ಕೃಷಿ ಸಂಸ್ಕೃತಿಯೊಂದಿಗೆ ಹೆಚ್ಚು ಹೊಂದಿಕೊಳ್ಳಲೂ, ಪೌರ ಪ್ರಜ್ಞೆಯನ್ನು ಎತ್ತಿ ಹಿಡಿಯಲು ನಿಮಗೆ ಸಾಧ್ಯವಾಗಬಹುದೆಂದು ಭಾವಿಸುತ್ತೇನೆ.

ರಾಷ್ಟ್ರಪ್ರಜ್ಞೆಯನ್ನು ವೃದ್ಧಿಸಲು, ಸ್ವಯಂ ಅರ್ಥೈಸಲು ಮತ್ತು ಸಮಾಜವನ್ನು ತಿಳಿದುಕೊಂಡು ನೂತನ ದೃಷ್ಟಿಕೋನಗಳನ್ನು ರೂಪಿಸಲು ಸಮಾಜವಿಜ್ಞಾನ ಕಲಿಕೆಯು ಸಹಾಯಕವಾಗಿದೆ. ಪ್ರಪಂಚದ ಆಗುಹೋಗುಗಳನ್ನು ತಿಳಿದುಕೊಂಡು ಸಕ್ರಿಯ ಪ್ರಜೆಗಳಾಗಲು ಸಾಧ್ಯವಾಗುವ ರೀತಿಯಲ್ಲಿ ಉತ್ತಮ ಕಲಿಕಾನುಭವಗಳ ಆಧಾರದಲ್ಲಿ ರೂಪೀಕರಿಸಲ್ಪಟ್ಟಿರುವ ಎಂಟನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕ ಭಾಗ 2, ಚರಿತ್ರೆಯನ್ನು ಉತ್ಸಾಹದಿಂದ ಸಮೀಪಿಸಲು ಮತ್ತು ಹೊಸ ಜ್ಞಾನವನ್ನು ಪಡೆಯಲು ಸಹಾಯಕವಾಗಬಹುದೆಂದು ಖಚಿತಪಡಿಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

**Advisor**

**Dr. K. N. Ganesh**
Chairman, Kerala Council for Historical Research

**Chairperson**

**Dr. V. Shaharban**
Associate Professor & Head,
Department of Economics, Kannur University

**Experts**

**Dr. Aneesh V. R.**
Assistant Professor,
Department of Political Science, SARBTM Govt. College Koyilandy

**Bino P. Jose**
Assistant Professor,
Department of History,
St. Dominic's College, Kanjirappally

**Dr. Jayarajan K.**
Associate Professor & Head,
Department of Geography,
Govt. College, Chittur, Palakkad

**Members**

**Dr. Anjana V. R. Chandran**
Research Officer, SCERT, Kerala

**Dr. Akhil S.**
HSST Geography, GHSS Thazhathuvadakara, Kottayam

**Ashraf M.**
Principal (Retd), GGHSS Adoor, Pathanamthitta

**V. Kripalaj**
HST Social Science, VMHSS Vadavannoor, Palakkad

**Leena P. S.**
HST Social Science, SNHSS Uzhamalakkal, Nedumangad, Thiruvananthapuram

**Dr. Priyanka P. U.**
HST Social Science, GHSS Neyyardam, Thiruvananthapuram

**Pradeep Kumar L.**
HSST Political Science, GVHSS Pattazhi, Kollam

**P. C. Radhakrishnan**
HSST Sociology, GHSS Munnoorcode, Palakkad

**Renjith Vellalloor**
HST Social Science, GHSS Kilimanoor, Thiruvananthapuram

**Riju Kumar K. C.**
HSST History, GHSS Avitanallur, Kozhikode

**Shareena K.**
HST Social Science, GHSS Perinthalmanna, Malappuram

**Sreejith M Muthadath**
HST Social Science, CNNGHS Cherpu, Thrissur

**Dr. Usha Rani K.**
Asst. Professor, Govt. College of Teacher Education, Thiruvananthapuram

**Kannada Version**

**Language Expert**

**Radhakrishna M.**
Retd. Headmaster

**Subject Expert**

**Mahesha Y.**
HSST History, SSHSS Katukukke

**Participants**

**Ganesh Kumar S.**
HST (SS), Retd. SGKHS Kudlu

**Bhanu A. C.**
HST (SS), GVHSS Mulleria

**Praveena V.**
HST (SS), SNHS Perla

**Aruna K. C.**
HST (SS), SVVHSS Miyapadavu

**Raviraja**
HST (SS), GHSS Adoor

**Radhakrishna M.**
HST (SS), GHS Soorambail

Academic Co-ordinator

**Dr. Anil D.**
Research Officer, SCERT, Kerala

**State Council of Educational Research and Training (SCERT)**
Vidyabhavan, Poojappura, Thiruvananthapuram 695 012

# ಅನುಕ್ರಮಣಿಕೆ


| | | |
|---|---|---|
| 8. | ರಾಷ್ಟ್ರೀಯ ಚಳುವಳಿಗಳು ಮತ್ತು ಕೇರಳ | 127-146 |
| 9. | ಪ್ರಜಾಪ್ರಭುತ್ವ : ಅರ್ಥ ಮತ್ತು ವ್ಯಾಪ್ತಿ | 147-164 |
| 10. | ಜಾಗತಿಕ ಭೂಪಟದಲ್ಲಿ ಯುರೋಪು | 165-184 |
| 11. | ಫ್ಯೂಡಲಿಸಂ ಮತ್ತು ಮಧ್ಯಕಾಲದ ಜಗತ್ತು | 185-194 |
| 12. | ಕೃಷಿವಲಯ ಹಾಗೂ ನೂತನ ಒಲವುಗಳು | 195-210 |
| 13. | ಹೊಸ ರಾಷ್ಟ್ರಗಳು ಉದಯವಾಗುತ್ತಿವೆ | 211-228 |


ಈ ಪಾಠಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು ಬಳಸಲಾಗಿದೆ.


ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ


ಕಲಿಕಾ ಚಟುವಟಿಕೆ


ಮುಂದುವರಿದ ಚಟುವಟಿಕೆಗಳು


ನಾವು ಓದುವ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ಅಧ್ಯಾಯ 8

# ರಾಷ್ಟ್ರೀಯ ಚಳುವಳಿಗಳು ಮತ್ತು ಕೇರಳ





ಚಿತ್ರ 8.1

ತಿರುವನಂತಪುರದ ಪಾಂಗೋಡಿನ ಸೈನಿಕ ಶಿಬಿರದಲ್ಲಿ ಸ್ಥಾಪಿಸಿರುವ ಓರ್ವ ವೀರ ಸೇನಾನಿಯ ಪ್ರತಿಮೆಯನ್ನು ಚಿತ್ರ 8.1 ರಲ್ಲಿ ನೀಡಲಾಗಿದೆ. 1741 ರಲ್ಲಿ ಕುಳಚ್ಚಲ್ ನಲ್ಲಿ ತಿರುವಿದಾಂಕೂರು ಸೇನೆಯು ಡಚ್ಚರನ್ನು ಪರಾಜಯಗೊಳಿಸಿದುದರ ನೆನಪಿಗಾಗಿ ಇದನ್ನು ಸ್ಥಾಪಿಸಲಾಗಿದೆ.

ಭಾರತಕ್ಕೆ ಯುರೋಪಿಯನ್ನರ ಆಗಮನ ಮತ್ತು ಸ್ಥಳೀಯರೊಂದಿಗಿನ ಆರಂಭಕಾಲದ ಪ್ರತಿಭಟನೆಗಳನ್ನು ಹಿಂದಿನ ಅಧ್ಯಾಯದಲ್ಲಿ ನಾವು ಚರ್ಚಿಸಿದ್ದೇವಲ್ಲವೇ.

ಯುರೋಪಿನ ವಿವಿಧ ದೇಶಗಳಿಂದ ವ್ಯಾಪಾರಕ್ಕಾಗಿ ಕೇರಳಕ್ಕೆ ಬಂದವರು ದೇಶಿಯ ರಾಜ್ಯಗಳನ್ನು ವಶಪಡಿಸಿಕೊಂಡು ರಾಜಕೀಯ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಕೇರಳದಲ್ಲಿ ಅಧಿಪತ್ಯವನ್ನು ಸ್ಥಾಪಿಸಲು ಯುರೋಪಿಯನ್ನರ ನಡುವೆ ನಡೆದ ಸ್ಪರ್ಧೆಯಲ್ಲಿ ಬ್ರಿಟಿಷರು ಮೇಲುಗೈ ಸಾಧಿಸಿದರು.

ಯುರೋಪಿಯನ್ನರ ಆಗಮನದ ಕಾಲದಲ್ಲಿ ವಿವಿಧ ದೇಶೀಯ ರಾಜ್ಯಗಳು ಕೇರಳದಲ್ಲಿದ್ದುವು. ನಂತರ ಮಲಬಾರ್ ಪ್ರದೇಶವು ಬ್ರಿಟಿಷರ ನೇರ ಆಳ್ವಿಕೆಗೂ ಕೊಚ್ಚಿ, ತಿರುವಿದಾಂಕೂರು ಎಂಬೀ ದೇಶಿಯ ರಾಜ್ಯಗಳು ಬ್ರಿಟಿಷ್ ಪ್ರಭುತ್ವವನ್ನು ಒಪ್ಪಿಕೊಂಡ ರಾಜಾಡಳಿತದ ಅಧೀನಕ್ಕೂ ಒಳಪಟ್ಟವು. ಕೇರಳದಲ್ಲಿ ಬ್ರಿಟಿಷರ ವಿರುದ್ಧ ಮೊದಲು ಹೋರಾಡಿದವರು ಯಾರು? ಅದರ ಕಾರಣಗಳು ಮತ್ತು ಪರಿಣಾಮಗಳನ್ನು ನಾವು ಪರಿಶೀಲಿಸೋಣ.

## ಯುದ್ಧ ಸಿದ್ಧತೆಯ ಕಹಳೆ ಮೊಳಗುತ್ತಿದೆ

*"ಒಟ್ಟುಂ ಮರನ್ನಿಲ್ಲ ಇಾಂಕಳಿಂನ್ನುಂ ನೇಡುಮ್*
*ಕೋಟ್ಟಯಂ ನಾಟ್ಟಿಲೆ ಕೇಸರಿ ವೀರನೆ!*
*ಹೃತ್ತಿಲೇಚೆಂಜೋರ ನೀರಿಲೀ ಸ್ವಾತಂತ್ರ್ಯ -*
*ವಿತ್ತು ಮುಳಪಿಚ್ಚ ಕರ್ಷಗ ವೀರನೆ,*
*ಸ್ವಾತಂತ್ರ್ಯ ಲಬ್ದಿತನ್..- ಲಹರಿಯಿಲ್ -*
*ಪ್ಪಾಡೇ ಮರನ್ನು - ಮಲೆಯಾಳಿಯೆಂಗಿಲುಂ"*
*ಪಿ ಕುಂಇಿರಾಮನ್ ನಾಯರ್*
*'ಪುರಳಿಮಲೆಯಿಲೆ ಪೂಮರಂಜಳ್'*

ಮಲಬಾರು




*ಚಿತ್ರ 8.2 • ಮಲಬಾರು ಜಿಲ್ಲೆ 1800 CE*

ಮೇಲಿನ ಸಾಲುಗಳು ಕೇರಳದಲ್ಲಿ ಬ್ರಿಟಿಷರಿಗೆದುರಾಗಿ ಹೋರಾಡಿದ ಕೇರಳವರ್ಮ ಪಳಶ್ಶಿರಾಜನ ಕುರಿತು ಪ್ರತಿಪಾದಿಸುತ್ತವೆ.

ಕೇರಳವರ್ಮ ಪಳಶ್ಶಿರಾಜನು ಉತ್ತರ ಮಲಬಾರಿನ ಕೋಟ್ಟಯಂ ರಾಜಮನೆತನದ ಸದಸ್ಯನಾಗಿದ್ದನು. ಅವನು ಆರಂಭಕಾಲದಲ್ಲಿ ಮೈಸೂರು ಆಡಳಿತಾಧಿಕಾರಿಗಳಿಗೆದುರಾಗಿ ಮಲಬಾರಿನಲ್ಲಿ ಬ್ರಿಟಿಷರಿಗೆ ಸಹಾಯಮಾಡಿದ್ದನು. ಇದಕ್ಕೆ ಪ್ರತಿಫಲವಾಗಿ ಕೋಟ್ಟಯಂ ಪ್ರದೇಶದ ತೆರಿಗೆ ಸಂಗ್ರಹಿಸುವ ಅಧಿಕಾರವನ್ನು ಪಳಶ್ಶಿಗೆ ನೀಡುವುದಾಗಿ ಅವರು ಒಪ್ಪಂದವನ್ನು ಮಾಡಿಕೊಂಡಿದ್ದರು. ಆದರೆ ಶ್ರೀರಂಗಪಟ್ಟಣ ಒಪ್ಪಂದದಂತೆ ಮಲಬಾರು ಪ್ರದೇಶವು ಬ್ರಿಟಿಷರ ಅಧೀನಕ್ಕೊಳಗಾಗುವುದರೊಂದಿಗೆ ಪರಿಸ್ಥಿತಿ ಬದಲಾಯಿತು. ಕೋಟ್ಟಯಂ ಪ್ರದೇಶದ ತೆರಿಗೆ ಸಂಗ್ರಹಾಧಿಕಾರವನ್ನು ಬ್ರಿಟಿಷರು ತಮಗೆ ವಿಧೇಯನಾಗಿದ್ದ ಪಳಶ್ಶಿರಾಜನ ಮಾವನಾದ ಕುರುಂಬ್ರನಾಡಿನ ರಾಜನಾದ ವೀರವರ್ಮನಿಗೆ ನೀಡಿದರು. ಈ ಅವಗಣನೆಗೆದುರಾಗಿ ಪ್ರತಿಭಟಿಸಿದ ಪಳಶ್ಶಿರಾಜನು ನೂತನ ಆಡಳಿತಾಧಿಕಾರಿಗೆ ತೆರಿಗೆ ನೀಡದಿರುವಂತೆ ಜನರಿಗೆ ಆಹ್ವಾನವಿತ್ತನು. ಇದರೊಂದಿಗೆ ಪಳಶ್ಶಿ ಮತ್ತು ಬ್ರಿಟಿಷರ ನಡುವೆ ಸಂಘರ್ಷವು ಆರಂಭಗೊಂಡಿತು.

ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಗೆದುರಾಗಿ ಪಳಶ್ಶಿ ಕೈಗೊಂಡ ಹೋರಾಟ ತಂತ್ರಗಳು ಯಾವುವೆಂದು ನೋಡೋಣ.

- ನೆಲೆಯನ್ನು ವಯನಾಡಿಗೆ ಬದಲಾಯಿಸಲಾಯಿತು
- ಪ್ರಾದೇಶಿಕ ಜನವಿಭಾಗಗಳನ್ನು ಜೊತೆಗೆ ಸೇರಿಸಲಾಯಿತು
- ಗೆರಿಲ್ಲಾ ಯುದ್ಧತಂತ್ರವನ್ನುಪಯೋಗಿಸಿದರು (Guerilla warfare)

ಕುರಿಚಿಯಾ ನಾಯಕರಾದ ತಲಕ್ಕಲ್ ಚಂದು, ನಾಯರ್ ಪಡೆಯನ್ನು ಮುನ್ನಡೆಸಿದ ಎಡಚ್ಚೇನ ಕುಂಗನ್, ಕೈತೇರಿ ಅಂಬು, ಕಣ್ಣವತ್ತ್ ಶಂಕರನ್, ಪಳ್ಳೂರ್ ಎಮ್ಮನ್ ಮೊದಲಾದವರು ಪಳಶ್ಶಿಗೆ ಪ್ರಬಲವಾದ ಸೈನಿಕ ಬೆಂಬಲವನ್ನು ನೀಡಿದರು.

ಕಾಡು ಮತ್ತು ಗಿರಿ ಕಂದರಗಳಿಂದ ಕೂಡಿದ ವಯನಾಡಿನಲ್ಲಿ ಜನರ ಬೆಂಬಲದೊಂದಿಗೆ ಪ್ರತಿರೋಧವನ್ನು ಒಡ್ಡಿದ ಪಳಶ್ಶಿಯನ್ನು ಸೋಲಿಸುವುದು ಸುಲಭವಲ್ಲವೆಂದು ಬ್ರಿಟಿಷರು ಅರಿತುಕೊಂಡರು. ಅವರು ಪಳಶ್ಶಿಗೆದುರಾಗಿ ವಿವಿಧ ರೀತಿಯ ಕ್ರಮಗಳನ್ನು ಕೈಗೊಂಡರು.

- ಆಯಕಟ್ಟಿನ ಸ್ಥಳಗಳಲ್ಲಿ ಸೈನಿಕ ನೆಲೆಗಳನ್ನು ಸ್ಥಾಪಿಸಿದರು.
- ಹೊಸ ರಸ್ತೆಗಳನ್ನು ನಿರ್ಮಿಸಿದರು.
- ವಯನಾಡಿಗೆ ಅಕ್ಕಿ ಪೂರೈಕೆಯನ್ನು ನಿರ್ಬಂಧಿಸಿದರು.
- ದಂಗೆಯಲ್ಲಿ ಪಾಲ್ಗೊಳ್ಳುವವರನ್ನು ಸೆರೆಹಿಡಿದು ಕೊಡುವವರಿಗೆ ಪಾರಿತೋಷಕವನ್ನು ಘೋಷಿಸಿದರು.

### *ಶ್ರೀರಂಗಪಟ್ಟಣಂ ಒಪ್ಪಂದ*

*ಶ್ರೀರಂಗಪಟ್ಟಣ ಒಪ್ಪಂದವು ಮೂರನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಮೈಸೂರು ಪರಾಜಯಗೊಂಡ ನಂತರ ಮೈಸೂರಿನ ಆಡಳಿತಾಧಿಕಾರಿ ಟಿಪ್ಪು ಸುಲ್ತಾನ ಮತ್ತು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ನಡುವೆ 1792 ಮಾರ್ಚ್ 18 ರಂದು ಸಹಿ ಹಾಕಿದ ಒಪ್ಪಂದವಾಗಿದೆ. ಈ ಒಪ್ಪಂದದ ಪ್ರಕಾರ ಟಿಪ್ಪುವಿನ ನಿಯಂತ್ರಣದಲ್ಲಿದ್ದ ಮಲಬಾರು, ಕೊಡಗು/ಕೂರ್ಗ್ ಎಂಬೀ ಪ್ರದೇಶಗಳು ಬ್ರಿಟಿಷರಿಗೆ ಲಭಿಸಿತು.*

*ಪಳಶ್ಶಿ ಮತ್ತು ಗುಂಪಿಗೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಘೋಷಿಸಿದ ಬೆಲೆಯನ್ನು ಗಮನಿಸಿರಿ. ಸೆರೆಹಿಡಿದು ನೀಡಿದರೆ ಪೂರ್ತಿ ಪಗೋಡವೂ ಮಾಹಿತಿಗಳನ್ನು ನೀಡಿದವರಿಗೆ ಅರ್ಧ ಪಗೋಡವೂ ನೀಡಲಾಗುತ್ತಿತ್ತು.*

| | | |
|---|---|---|
| 1. | ಕೇರಳವರ್ಮ ಪಳಶ್ಶಿರಾಜ | 3000 |
| 2. | ವೀರವರ್ಮ ರಾಜ | 1000 |
| 3. | ರವಿವರ್ಮ ರಾಜ | 1000 |
| 4. | ಪಳ್ಳೂರ್ ಎಮ್ಮನ್ | 1000 |
| 5. | ಪಳ್ಳೂರ್ ರೇರಪ್ಪನ್ | 300 |
| 6. | ಎಡಚ್ಚೇನ ಕುಂಗನ್ | 1000 |

*( ಪಗೋಡ ಎಂಬುದು ಅಂದಿನ ವಿನಿಮಯ ನಾಣ್ಯವಾಗಿತ್ತು )*
*ಕೃಪೆ : ಡಾ. ಕೆ.ಕೆ.ಎನ್. ಕುರುಪ್ಪ್, "ಪಳಶ್ಶಿ ಸಮರಂಗಳ್"*

ಕಂಪೆನಿಯ ಆಡಳಿತಕ್ಕೆ ಸವಾಲೆಸೆದ ಪಳಶ್ಶಿಯನ್ನು ಎದುರಿಸಲು ಸಮರ್ಥರಾದ ಸೇನಾಧಿಕಾರಿಗಳನ್ನು ನೇಮಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ತಲಶ್ಶೇರಿಯ ಸಬ್ ಕಲೆಕ್ಟರಾಗಿ ನೇಮಿಸಲ್ಪಟ್ಟ ಥೋಮಸ್ ಹಾರ್ವೆ ಬೇಬರ್ ಪಳಶ್ಶಿಯ ಪ್ರಬಲರಾಗಿದ್ದ ಸೇನಾ ನಾಯಕರನ್ನು ವಧಿಸಿ ಆತನ ನೆಲೆಗಳನ್ನು ಕಂಡುಹಿಡಿದು ಪಳಶ್ಶಿಗೆ ಮತ್ತಷ್ಟು ಪ್ರತಿರೋಧವನ್ನೊಡ್ಡಿದನು. 1805 ನವೆಂಬರ್ 30 ರಂದು ವಯನಾಡಿನ ಮಾವಿಲಂತೋಡ್ ಎಂಬಲ್ಲಿ ಕಂಪೆನಿಯ ಸೇನೆಯೊಂದಿಗೆ ನಡೆದ ಹೋರಾಟದಲ್ಲಿ ಅವನು ವೀರಮರಣವನ್ನಪ್ಪಿದನು.




*ಚಿತ್ರ 8.3 • ಮಾವಿಲಂತೋಡಿನಲ್ಲಿರುವ ಪಳಶ್ಶಿಯ ಪ್ರತಿಮೆ.*

*“ಅವನೊಬ್ಬ ದಂಗೆಗಾರನಾಗಿದ್ದರೂ ಈ ದೇಶದ ನೈಸರ್ಗಿಕ ನಾಡುವಾಳಿಗಳಲ್ಲೊಬ್ಬನೆಂಬ ನೆಲೆಯಲ್ಲಿ ಶರಣಾದ ಶತ್ರುವಿಗಿಂತ ಭಿನ್ನವಾಗಿ ಅವನನ್ನು ಪರಿಗಣಿಸಬೇಕೆಂದು ನಾನು ಭಾವಿಸಿದೆ...”*

ಇದು ಪಳಶ್ಶಿಯ ದೇಹವನ್ನು ಔದ್ಯೋಗಿಕ ಗೌರವಗಳೊಂದಿಗೆ ಮಾನಂದವಾಡಿಯಲ್ಲಿ ಸಮಾಧಿ ಮಾಡಿದುದರ ಕುರಿತು ಬೇಬರ್ ಅಂದಿನ ಮಲಬಾರ್ ಪ್ರಿನ್ಸಿಪಲ್ ಕಲೆಕ್ಟರ್ ಥಾಮಸ್ ವಾರ್ಡನ್‌ಗೆ ಬರೆದ ಪತ್ರದ ಒಂದು ಭಾಗವಾಗಿದೆ (1805 ಡಿಸೆಂಬರ್ 31).

*ಸ್ಥಳೀಯರನ್ನು ತನ್ನೊಂದಿಗೆ ಸೇರಿಸಿ ಬ್ರಿಟಿಷರಿಗೆದುರಾಗಿ ಪಳಶ್ಶಿ ಕೈಗೊಂಡ ಪ್ರತಿಭಟನಾ ತಂತ್ರಗಳು ಮತ್ತು ಬ್ರಿಟಿಷರು ಪಳಶ್ಶಿಗೆದುರಾಗಿ ಕೈಗೊಂಡ ಕ್ರಮಗಳನ್ನು ತರಗತಿಯಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ಘೋಷಣೆಯನ್ನು ಹೊರಡಿಸಿದ ದಳವ



*ಚಿತ್ರ 8.4 • ವೇಲುತಂಬಿ ದಳವ*

18ನೇ ಶತಮಾನದಲ್ಲಿ ಆಟ್ಟಿಂಗಲಿನಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟದ ಕುರಿತು ಮತ್ತು ಕುಳಚ್ಚಲ್ ಬಂದರಿನಲ್ಲಿ ಡಚ್ಚರ ಪರಾಜಯದ ಕುರಿತು ನಾವು ಹಿಂದಿನ ಪಾಠ ಭಾಗದಲ್ಲಿ ಚರ್ಚಿಸಿದ್ದೇವಲ್ಲವೆ? ತಿರುವಿದಾಂಕೂರಿನ ಇತಿಹಾಸದಲ್ಲಿ ಈ ಎರಡು ನಿರ್ಣಾಯಕ ಘಟನೆಗಳ ನಂತರ ಇಲ್ಲಿ ಬ್ರಿಟಿಷರಿಗೆದುರಾಗಿ ನಡೆದ ಇನ್ನೊಂದು ಪ್ರತಿಭಟನೆಯನ್ನು ನಾವು ಪರಿಚಯಿಸೋಣ.

ವೇಲುತಂಬಿಯು ತಿರುವಿದಾಂಕೂರನ್ನು ಆಳುತ್ತಿದ್ದ ಬಾಲರಾಮವರ್ಮ ಮಹಾರಾಜನ ದಳವ ಅಥವಾ ಪ್ರಧಾನಮಂತ್ರಿಯಾಗಿದ್ದನು. 1805 ರಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಮತ್ತು ತಿರುವಿದಾಂಕೂರಿನ ರಾಜನ ನಡುವೆ ಸಹಿ ಹಾಕಿದ ಒಪ್ಪಂದದಿಂದಾಗಿ ತಿರುವಿದಾಂಕೂರಿನ ರಾಜಕೀಯ ಸ್ವಾತಂತ್ರ್ಯವು ನಷ್ಟವಾಗುವುದರೊಂದಿಗೆ ಆಡಳಿತವು ಬ್ರಿಟಿಷ್ ರೆಸಿಡೆಂಟನಾದ ಮೆಕಾಲೆಯ ನಿಯಂತ್ರಣದಲ್ಲಾಯಿತು. ದಳವನಾಗಿದ್ದ ವೇಲುತಂಬಿಯ ಆಜ್ಞೆಗಳನ್ನು ಮೆಕಾಲೆ ರದ್ದುಗೊಳಿಸಿದುದು ಹಾಗೂ ಕಂಪೆನಿಗೆ ನೀಡಬೇಕಾಗಿದ್ದ ಬಾಕಿ ತೆರಿಗೆಯನ್ನು ತಕ್ಷಣ ಪಾವತಿಸುವಂತೆ ನಿರ್ಬಂಧಿಸಿದುದು, ವೇಲುತಂಬಿ ಮತ್ತು ಬ್ರಿಟಿಷರ ನಡುವಿನ ಸಂಘರ್ಷಕ್ಕೆ ಕಾರಣವಾಯಿತು.

ಕೊಚ್ಚಿಯ ಪ್ರಧಾನಮಂತ್ರಿಯಾದ ಪಾಲಿಯತ್ತಚ್ಚನೂ ಕೂಡ ಮೆಕಾಲೆಯಿಂದ ಇದೇ ರೀತಿಯ ಅನುಭವಗಳನ್ನು ಎದುರಿಸಿದ್ದನು. ವೇಲುತಂಬಿಯು ಪಾಲಿಯತ್ತಚ್ಚನೊಂದಿಗೆ ರಹಸ್ಯ ಒಪ್ಪಂದವನ್ನು ಮಾಡಿಕೊಂಡನಲ್ಲದೆ ತಿರುವಿದಾಂಕೂರು ಮತ್ತು ಕೊಚ್ಚಿಯ ಸಂಯುಕ್ತ ಸೈನ್ಯವು ಕೊಚ್ಚಿಯಲ್ಲಿನ ಮೆಕಾಲೆಯ ಶಿಬಿರವನ್ನು ಆಕ್ರಮಿಸಿತು. ಆದರೆ ಮೆಕ್ಕಾಲೆಯು ಈ ಆಕ್ರಮಣದಿಂದ ಪಾರಾದನು.

1809 ಜನವರಿ 11 ರಂದು ತಿರುವಿದಾಂಕೂರಿನ ಕುಂಡರದಲ್ಲಿ ಒಂದು ಘೋಷಣೆಯ ಮೂಲಕ ಬ್ರಿಟಿಷ್ ಅಧಿಪತ್ಯಕ್ಕೆದುರಾಗಿ ಸಶಸ್ತ್ರ ಹೋರಾಟಕ್ಕೆ ಅಣಿಯಾಗುವಂತೆ ವೇಲುತಂಬಿಯು ಜನರಿಗೆ ಆಹ್ವಾನವಿತ್ತನು. ಈ ಘೋಷಣೆಯನ್ನು ‘ಕುಂಡರ ಘೋಷಣೆ’ ಎಂದು ಕರೆಯುತ್ತಾರೆ.

ದಳವನ ಇಂತಹ ತೀರ್ಮಾನಗಳು ತಿರುವಿದಾಂಕೂರು ರಾಜನಿಗೆ ಇಷ್ಟವಾಗದಿದ್ದರೂ ಸ್ಥಳೀಯರನ್ನು ತನ್ನೊಂದಿಗೆ ಸೇರಿಸಿಕೊಂಡು ವೇಲುತಂಬಿಯು ಬ್ರಿಟಿಷರೊಂದಿಗೆ ಹೋರಾಟವನ್ನು ಮುಂದುವರಿಸಿದನು. ಕಂಪೆನಿಯ ಸೈನ್ಯದೊಂದಿಗಿನ ಸೋಲು ಮತ್ತು ಸಹಚರನಾದ ಪಾಲಿಯತ್ತಚ್ಚನ್ ಮೈತ್ರಿಯಿಂದ ಹಿಂದೆ ಸರಿದುದು ದಳವನಿಗೆ ಹಿನ್ನಡೆಯಾಯಿತು. ರಾಜನು ಅವನನ್ನು ದಳವ ಪದವಿಯಿಂದ ಉಚ್ಚಾಟಿಸಿದನು. ತಿರುವಿದಾಂಕೂರಿನ ಮತ್ತು ಕಂಪೆನಿಯ ಸಂಯುಕ್ತ ಸೈನ್ಯವು ವೇಲುತಂಬಿ ಆಶ್ರಯ ಪಡೆದಿದ್ದ ಮಣ್ಣಡಿ ಎಂಬಲ್ಲಿರುವ ಮನೆಗೆ ಮುತ್ತಿಗೆ ಹಾಕಿದಾಗ ವಿದೇಶಿ ಶಕ್ತಿಗೆ ಶರಣಾಗಲು ಬಯಸದೆ ಅವನು ಪ್ರಾಣತ್ಯಾಗ ಮಾಡಿದನು.

## ಕೊಚ್ಚಿ ಮತ್ತು ಪಾಲಿಯತ್ತಚ್ಚನ್

ಕೊಚ್ಚಿಯ ಪ್ರಧಾನಮಂತ್ರಿಯಾಗಿದ್ದ ಪಾಲಿಯತ್ತಚ್ಚನ್ ತಿರುವಿದಾಂಕೂರಿನೊಂದಿಗೆ ರೂಪಿಸಿದ ಮೈತ್ರಿಯ ಕುರಿತು ನಾವು ಚರ್ಚಿಸಿದೆವಲ್ಲವೆ? ಬ್ರಿಟಿಷರಿಗೆದುರಾಗಿ ಹೋರಾಡಲು ಅವರನ್ನು ಪ್ರೇರೇಪಿಸಿದ ಸನ್ನಿವೇಶಗಳು ಯಾವುವೆಂದು ನಾವು ಪರಿಶೀಲಿಸೋಣ.

ಬ್ರಿಟಿಷ್ ರೆಸಿಡೆಂಟಾದ ಮೆಕಾಲೆಯು ಕೊಚ್ಚಿಯ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಪಾಲಿಯತ್ತಚ್ಚನು ವಿರೋಧಿಸಿದ್ದನು. ಇದಲ್ಲದೆ ಪಾಲಿಯತ್ತಚ್ಚನ ಶತ್ರುವಿಗೆ ಮೆಕಾಲೆಯು ಆಶ್ರಯ ನೀಡಿದ್ದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿತು. ಅನಂತರ ತಿರುವಿದಾಂಕೂರಿನ ದಳವನಾದ ವೇಲುತಂಬಿಯೊಂದಿಗೆ ಸೇರಿಕೊಂಡು ಪಾಲಿಯತ್ತಚ್ಚನು ಬ್ರಿಟಿಷರಿಗೆದುರಾದ ಹೋರಾಟವನ್ನು ಆರಂಭಿಸಿದನು. ಬ್ರಿಟಿಷರೊಂದಿಗೆ ಪ್ರಬಲವಾಗಿ ಹೋರಾಡಿದರೂ ಅಂತಿಮವಾಗಿ ಬ್ರಿಟಿಷರು ಅವನನ್ನು ಮದ್ರಾಸಿಗೆ ಗಡಿಪಾರು ಮಾಡಿದರು.

### ಕುಂಡರ ಘೋಷಣೆ

*(ಕೊಲ್ಲಂ ಶಕ 948, ಮಕರ 1)*
*ತಿರುವಿದಾಂಕೂರಿನ ಸಂರಕ್ಷಕರೆಂದು ಹಕ್ಕೊತ್ತಾಯಿಸುವ ಬ್ರಿಟಿಷರು ನಾಡನ್ನು ಲೂಟಿಗೈಯುತ್ತಿದ್ದಾರೆಂದೂ ಅವರು ಮುಂದುವರಿದರೆ ನಾಡು ನಾಶವಾಗುವುದೆಂದೂ ರಾಜಭಕ್ತರು ಮತ್ತು ದೇಶಭಕ್ತರು ಇವರಿಗೆದುರಾಗಿ ಸಶಸ್ತ್ರ ಹೋರಾಟಕ್ಕೆ ಸಿದ್ಧರಾಗಬೇಕೆಂದೂ ಈ ಘೋಷಣೆಯ ಮೂಲಕ ತಿರುವಿದಾಂಕೂರಿನ ದಳವನಾದ ವೇಲುತಂಬಿಯು ಆಹ್ವಾನವಿತ್ತನು.*



*ಚಿತ್ರ 8.5 • ಪಾಲಿಯತ್ತಚ್ಚನ್*

### ಪಾಲಿಯತ್ತಚ್ಚನ್

*ಕೊಚ್ಚಿ ರಾಜ್ಯದ ಪಾಲಿಯಂ ಎಂಬ ನಾಯರ್ ತರವಾಡಿನ ಮುಖ್ಯಸ್ಥರನ್ನು ಪಾಲಿಯತ್ತಚ್ಚನ್ ಎಂದು ಕರೆಯಲಾಗುತ್ತಿತ್ತು. ಪಾಲಿಯತ್ತಚ್ಚನರು ಕೊಚ್ಚಿ ರಾಜ್ಯದ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಪದವಿಯನ್ನು ವಹಿಸುತ್ತಿದ್ದರು.*

*ಪಾಲಿಯತ್ತಚ್ಚನ್ ಮತ್ತು ವೇಲುತಂಬಿ ದಳವನನ್ನು ಬ್ರಿಟಿಷರ ವಿರುದ್ಧ ಒಟ್ಟಾಗಿ ಹೋರಾಡಲು ಪ್ರೇರೇಪಿಸಿದ ಸನ್ನಿವೇಶಗಳು ಯಾವುವು? ಚರ್ಚಿಸಿ ತರಗತಿಯಲ್ಲಿ ಮಂಡಿಸಿರಿ.*

## ಕುರಿಚಿಯಾ ದಂಗೆ-ಪ್ರತಿಭಟನೆಯ ವೀರಗಾಥೆ

ಪರಂಪರಾಗತ ಆಯುಧಗಳೊಂದಿಗೆ ಬ್ರಿಟಿಷರಿಗೆದುರಾಗಿ ಹೋರಾಡುವ ಬುಡಕಟ್ಟು ಜನತೆಯನ್ನು ಚಿತ್ರ 8.6 ರಲ್ಲಿ ಚಿತ್ರಿಸಲಾಗಿದೆ. ಬುಡಕಟ್ಟು ಜನರು ಬ್ರಿಟಿಷರಿಗೆ ಎದುರಾಗಿ ಹೋರಾಡಲು ಕಾರಣವೇನಾಗಿರಬಹುದು? ನಾವು ಪರಿಶೀಲಿಸೋಣ.



*ಚಿತ್ರ 8.6 • ಕುರಿಚಿಯಾ ದಂಗೆಯ ರೇಖಾಚಿತ್ರ*

ಕುರುಚಿಯರು ಮತ್ತು ಕುರುಂಬ್ರರು ವಯನಾಡಿನ ಬುಡಕಟ್ಟು ವಿಭಾಗಗಳಾಗಿವೆ. ಪಳಶ್ಶಿರಾಜನಿಗೆ ಹೋರಾಟದಲ್ಲಿ ಸಹಕರಿಸಿದ್ದ ಇವರನ್ನು ನಂತರ ಬ್ರಿಟಿಷರು ಶತ್ರುಗಳಾಗಿ ಪರಿಗಣಿಸಿದರು. ಕುರಿಚಿಯರಿಗೆ ಮತ್ತು ಕುರುಂಬ್ರರಿಗೆದುರಾಗಿ ಬ್ರಿಟಿಷರು ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದರೆಂದು ಗಮನಿಸಿರಿ.

- ಬುಡಕಟ್ಟು ಜನರ ತುಂಡು ಭೂಮಿಗಳನ್ನು ವಶಪಡಿಸಿದರು.
- ಪರಂಪರಾಗತ ಕೃಷಿ ರೀತಿಗಳನ್ನು ನಿಷೇಧಿಸಿದರು.
- ತೆರಿಗೆಯನ್ನು ವಸ್ತುಗಳಿಗೆ ಬದಲಾಗಿ ಹಣದ ರೂಪದಲ್ಲಿ ನೀಡಬೇಕೆಂದು ಒತ್ತಾಯಿಸಿದರು.

ಕುರಿಚಿಯಾ ದಂಗೆಯು 1812 ರಲ್ಲಿ ಆರಂಭವಾಯಿತು. ವಯನಾಡಿಗಿರುವ ರಸ್ತೆಗಳ ನಿಯಂತ್ರಣವನ್ನು ಕೈವಶಪಡಿಸಿಕೊಂಡು ಪ್ರಾದೇಶಿಕ ಸಹಾಯಗಳನ್ನು ಗಳಿಸಿ ಬುಡಕಟ್ಟು ಜನರು ಬ್ರಿಟಿಷರಿಗೆದುರಾಗಿ ಹೋರಾಡಿದರು.ರಾಮನಂಬಿ ಅಥವಾ ರಾಮ ಮೂಪನ್ ಅವರ ನೇತಾರನಾಗಿದ್ದನು. ಸುಲ್ತಾನ್ ಬತ್ತೇರಿ ಮತ್ತು ಮಾನಂದವಾಡಿಯಲ್ಲಿದ್ದ ಬ್ರಿಟಿಷ್ ಸೈನಿಕರನ್ನು ಅವರು ನೇರವಾಗಿ ಆಕ್ರಮಿಸಿದರು. ಆದರೆ ಬ್ರಿಟಿಷರು ಇತರೆಡೆಗಳಿಂದ ಹೆಚ್ಚಿನ ಸೈನಿಕರನ್ನು ಕರೆತಂದು ಕುರುಚಿಯರ ದಂಗೆಯನ್ನು ದಮನಿಸಿದರು.

*ವಯನಾಡಿನ ಬುಡಕಟ್ಟು ಜನರನ್ನು ದಂಗೆಯ ಕಡೆಗೆ ಕೊಂಡೊಯ್ದ ಸನ್ನಿವೇಶಗಳು ಯಾವುವೆಂದು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.*

## ಕೃಷಿಕರ ಅಸಂತೃಪ್ತಿಯೂ ಗಲಭೆಗೆ ಕಾರಣವಾಗುತ್ತಿದೆ

*"1836 ರಿಂದ 1853 ರ ವರೆಗಿನ ಹದಿನೆಂಟು ವರ್ಷಗಳೆಡೆಯಲ್ಲಿ ಮಲಬಾರಿನಲ್ಲಿ ಇಪ್ಪತ್ತೆರಡರಷ್ಟು ಪ್ರಬಲವಾದ ದಂಗೆಗಳು ನಡೆದಿದ್ದವು"*

*ಸಿ. ಎ ಇನ್ನಸ್, 'ಮಲಬಾರ್ ಗಜೆಟಿಯರ್' Vol II, 1951.*

ಹತ್ತೊಂಬತ್ತನೇ ಶತಮಾನದಲ್ಲಿ ಮಲಬಾರಿನ ವಿವಿಧ ಭಾಗಗಳಲ್ಲಿ ಸರಣಿ ದಂಗೆಗಳು ನಡೆದವು. ಬ್ರಿಟಿಷ್ ಸರಕಾರದ ತೆರಿಗೆ ನೀತಿಗಳು, ಭೂಮಾಲೀಕರ ಶೋಷಣೆ ಮತ್ತು ಒಕ್ಕಲೆಬ್ಬಿಸುವಿಕೆಯು ದಂಗೆಗಳಿಗೆ ಕಾರಣವಾದುವೆಂದು ಮಲಬಾರ್ ಜಿಲ್ಲಾ

ಕಲೆಕ್ಟರ್ ಆಗಿದ್ದ ವಿಲ್ಯಂ ಲೋಗನ್ ತನ್ನ ತನಿಖಾ ವರದಿಯಲ್ಲಿ ದಾಖಲಿಸಿದ್ದಾನೆ. ಶೋಷಣೆಗಾರರಾದ ಭೂಮಾಲೀಕರಿಗೆದುರಾಗಿ ಮತ್ತು ಬ್ರಿಟಿಷ್ ಸರಕಾರದ ವಿರುದ್ಧ ರೈತರ ಪ್ರತಿಭಟನೆ ಮತ್ತು ಆಕ್ರಮಣಗಳುಂಟಾದವು. ಇದರಲ್ಲಿ ಪಾಲ್ಗೊಂಡವರಲ್ಲಿದ್ದ ಹೆಚ್ಚಿನವರೂ ಕೃಷಿಕರೂ ದಕ್ಷಿಣ ಮಲಬಾರಿನ ಮಾಪ್ಪಿಳ್ಳೆ ಕೃಷಿಕರಾಗಿದ್ದ ಕಾರಣ ಬ್ರಿಟಿಷ್ ಅಧಿಕಾರಿಗಳು ಮತ್ತು ಸಾಮ್ರಾಜ್ಯಶಾಹಿ ಇತಿಹಾಸಗಾರರು ಈ ದಂಗೆಗಳನ್ನು "ಮಾಪ್ಪಿಳ್ಳೆ ದಂಗೆ" ಎಂದು ಬಣ್ಣಿಸಿದ್ದಾರೆ.




*ಚಿತ್ರ 8.7 • ಮಲಬಾರ್ ಮಾನ್ವೆಲ್*

*ಜಮೀನ್ದಾರರು ಮತ್ತು ಬ್ರಿಟಿಷ್ ಸರಕಾರದ ವಿರುದ್ಧ ಕೃಷಿಕರು ಪ್ರತಿಭಟಿಸಲು ಕಾರಣವೇನು? ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

*ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಪ್ರತಿಭಟನೆಗಳು | ನಡೆದ ಪ್ರದೇಶ | ಸನ್ನಿವೇಶ |
|---|---|---|
| | ಕೋಟ್ಟಯಂ, ವಯನಾಡು | |
| | | ಆಂತರಿಕ ವಿಷಯಗಳಲ್ಲಿ ಬ್ರಿಟಿಷರ ಹಸ್ತಕ್ಷೇಪ |
| | ಕೊಚ್ಚಿ | |
| ಕುರಿಚಿಯಾ ದಂಗೆ | | |
| | | ತೆರಿಗೆ ಹೆಚ್ಚಳ ಮತ್ತು ಒಕ್ಕಲೆಬ್ಬಿಸುವಿಕೆ |

## ಸಾಮಾಜ ಸುಧಾರಣ ಚಳುವಳಿಗಳು

*"ನಾಲ್ಕಾಲಿಗಳೇಕ್ಕಾಳುಂ ತಾಯೆಯಾಣೋ*
*ಇಕ್ಕಾಣುಂ ಮನುಷ ಸೋದರನ್ಮಾರ್?*
*ಇಕ್ಕಾಲತ್ತಿರುಪದಾಂ ನೂಟ್ಟಾಂಡಿಲುಮಿದು*
*ನಿಕ್ಕಾರಾಯಿಲ್ಲಲ್ಲೋ ಯೋಗಪ್ಪೆಣ್ಣೆ!*
*ಎಂದೊರಾಳ್ಕಾರಾಣ್ ನಿಂಙಳ್ ಜ್ಞಾನ ಪೆಣ್ಣೇ!"*

*ಪಂಡಿತ್ ಕೆ ಪಿ ಕರುಪ್ಪನ್, 'ಜಾತಿಕ್ಕುಮ್ಮಿ'*

ಮೇಲೆ ನೀಡಿರುವ ಸಾಲುಗಳನ್ನು ಗಮನಿಸಿದಿರಲ್ಲವೇ...

ಇವುಗಳಿಂದ ಯಾವ ಯಾವ ಆಶಯಗಳನ್ನು ನಿಮಗೆ ಅರ್ಥೈಸಿಕೊಳ್ಳಬಹುದು? ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಸ್ಥಿತಿಯನ್ನು ಈ ಸಾಲುಗಳು ಪ್ರತಿಪಾದಿಸುತ್ತವೆ.

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಸಾಮಾಜಿಕ ಸ್ಥಿತಿಯ ಕುರಿತು ನಾವು ಪರಿಶೀಲಿಸೋಣ.

ನಾವಿಂದು ಕಾಣುವ ಸಮಾನತೆ ಮತ್ತು ಸಮತ್ವವನ್ನು ಅಂದಿನ ಸಾಮಾಜಿಕ ಜೀವನದಲ್ಲಿ ಕಾಣಲು ಅಸಾಧ್ಯವಾಗಿತ್ತು. ಅದು ಮೂಢನಂಬಿಕೆಗಳು ಮತ್ತು ಅನಾಚಾರಗಳು ತುಂಬಿದ್ದ ಸಮಾಜವಾಗಿತ್ತು. ಜನಿಸಿದ ಜಾತಿಯ ಆಧಾರದಲ್ಲಿ ಒಬ್ಬ ವ್ಯಕ್ತಿಯ ಸಾಮಾಜಿಕ ಪದವಿಯನ್ನು ನಿರ್ಧರಿಸಲಾಗುತ್ತಿತ್ತು. ಜಾತಿ ತಾರತಮ್ಯದ ಭಾಗವಾಗಿ ಸ್ಪರ್ಶಿಸದಿರುವಿಕೆ, ಸೋಕದಿರುವಿಕೆ, ಸಂಚಾರ ಸ್ವಾತಂತ್ರ್ಯ ನಿಷೇಧ ಮೊದಲಾದ ಅನೇಕ ಸಾಮಾಜಿಕ ಅನಾಚಾರಗಳು ಕೇರಳದಲ್ಲಿ ಅಸ್ತಿತ್ವದಲ್ಲಿದ್ದವು.

*ಇನ್ನಿತರ ಯಾವ ಯಾವ ಸಾಮಾಜಿಕ ಅನಾಚಾರಗಳ ಕುರಿತು ನೀವು ಕೇಳಿರುವಿರಿ?*

- *ಸಹಪಂಕ್ತಿ ಭೋಜನ ನಿಷೇಧ*
-
-

ಸಮಾಜದಲ್ಲಿ ನೆಲೆನಿಂತಿದ್ದ ಇಂತಹ ಯುಕ್ತಿರಹಿತ ಅನಾಚಾರಗಳಿಗೆದುರಾಗಿ ಸಾಮಾಜ ಸುಧಾರಕರು ಹೋರಾಡಿದರು. ಆಧುನಿಕ ವಿದ್ಯಾಭ್ಯಾಸದ ಪ್ರಚಾರ ಮತ್ತು ನವೋತ್ಥಾನ ಚಿಂತನೆ ಮೊದಲಾದವು ಇವರ ಚಟುವಟಿಕೆಗಳಿಗೆ ಶಕ್ತಿಯನ್ನು ನೀಡಿತು. ನಮ್ಮ ನಾಡು ಅನೇಕ ಮಂದಿ ಸಮಾಜ ಸುಧಾರಕರಿಗೆ ಜನ್ಮವನ್ನಿತ್ತಿದೆ.

## ಸಮಾಜ ಸುಧಾರಕರು ಮತ್ತು ಅವರ ಪ್ರಮುಖ ಚಟುವಟಿಕೆಗಳು



*ಚಿತ್ರ 8.8 • ವೈಕುಂಠ ಸ್ವಾಮಿಗಳು*

### ವೈಕುಂಠ ಸ್ವಾಮಿಗಳು

ಕೇರಳದ ಆರಂಭಕಾಲದ ಸಾಮಾಜ ಸುಧಾರಕರಲ್ಲಿ ಒಬ್ಬರಾಗಿದ್ದರು. ವಿಗ್ರಹ ಆರಾಧನೆಯ ಔಚಿತ್ಯವನ್ನು ಪ್ರಶ್ನಿಸಿಕೊಂಡು ದಕ್ಷಿಣ ಭಾರತದಲ್ಲಿ ಮೊದಲಿಗೆ 'ಕನ್ನಡಿ ಪ್ರತಿಷ್ಠೆ'ಯನ್ನು ನಡೆಸಿದರು.

*ಸಂಘಟನೆ: ಸಮತ್ವ ಸಮಾಜ*



*ಚಿತ್ರ 8.10 • ಕುರ್ಯಾಕೋಸ್ ಏಲಿಯಾಸ್ ಚಾವರ*

### ಕುರ್ಯಾಕೋಸ್ ಏಲಿಯಾಸ್ ಚಾವರ

ಸಮಾಜ ಸುಧಾರಕರು ಮತ್ತು ಶೈಕ್ಷಣಿಕ ಕಾರ್ಯಕರ್ತರಾಗಿದ್ದರು. ನಿರ್ಗತಿಕರಾದ ಜನ ವಿಭಾಗಗಳಿಗಾಗಿ ಅನಾಥಾಲಯಗಳನ್ನು ಮತ್ತು ವಿದ್ಯಾಲಯಗಳನ್ನು ಸ್ಥಾಪಿಸಿದರು.



*ಚಿತ್ರ 8.9 • ಶ್ರೀ ನಾರಾಯಣ ಗುರು*

### ಶ್ರೀ ನಾರಾಯಣ ಗುರು

ಕೇರಳದಲ್ಲಿ ಸಾಮಾಜಿಕ ಬದಲಾವಣೆಗಾಗಿ ಕಾರ್ಯನಿರ್ವಹಿಸಿದ ಸುಧಾರಕರಲ್ಲಿ ಪ್ರಥಮ ಸ್ಥಾನಿ. ಮೂಢನಂಬಿಕೆಗಳು ಮತ್ತು ಜಾತಿ ತಾರತಮ್ಯಗಳಿಗೆದುರಾಗಿ ಹೋರಾಡಿದರು. 'ವಿದ್ಯೆಯಿಂದ ಪ್ರಬುದ್ಧರಾಗಿ' ಎಂದು ಘೋಷಿಸಿದರು. ಅರುವಿಪ್ಪುರದಲ್ಲಿ ಶಿವ ಪ್ರತಿಷ್ಠೆಯನ್ನು ನಡೆಸಿ, ಜಾತಿಭೇದ ಮತ್ತು ಮತದ್ವೇಷವಿಲ್ಲದೆ ಎಲ್ಲರೂ ಸಹೋದರತೆಯಿಂದ ಬಾಳುವ ಮಾದರಿ ಸ್ಥಾನವೆಂದು ಈ ಕ್ಷೇತ್ರವನ್ನು ಬಣ್ಣಿಸಿದರು.
ಸಹೋದರನ್ ಅಯ್ಯಪ್ಪನ್, ಮಹಾಕವಿ ಕುಮಾರನಾಶಾನ್, ಡಾ. ಪಿ. ಪಲ್ಪು, ಟಿ ಕೆ ಮಾಧವನ್ ಮೊದಲಾದ ಸುಧಾರಕರ ಮೇಲೆ ಅವರ ತತ್ವಗಳು ಪ್ರಭಾವ ಬೀರಿದವು.

*ಸಂಘಟನೆ: ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ*



ಚಿತ್ರ 8.11 • ಚಟ್ಟಂಬಿ ಸ್ವಾಮಿಗಳು

### ಚಟ್ಟಂಬಿ ಸ್ವಾಮಿಗಳು

ಜಾತಿ ವ್ಯವಸ್ಥೆ ಮತ್ತು ಯುಕ್ತಿರಹಿತ ಆಚಾರಗಳನ್ನು ವಿರೋಧಿಸಿದರು. ಅವರ ಕೃತಿಗಳು ಮಲಯಾಳ ಭಾಷೆ ಮತ್ತು ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.



ಚಿತ್ರ 8.13 • ವಕ್ಕಂ ಅಬ್ದುಲ್ ಖಾದರ್ ಮೌಲವಿ

### ವಕ್ಕಂ ಅಬ್ದುಲ್ ಖಾದರ್ ಮೌಲವಿ

ಮುಸ್ಲಿಂ ಸಮುದಾಯದ ಸಾಂಸ್ಕೃತಿಕ ನವೋತ್ಥಾನಕ್ಕಾಗಿ ಕಾರ್ಯನಿರ್ವಹಿಸಿದರು. ರಾಜಾಡಳಿತದ ಮಿಥ್ಯೆಗಳನ್ನು ಬಯಲು ಮಾಡಲು ಸ್ವದೇಶಾಭಿಮಾನಿ ಪತ್ರಿಕೆಯನ್ನು ಆರಂಭಿಸಿದರು.

*ಸಂಘಟನೆ: ತಿರುವಿದಾಂಕೂರ್ ಮುಸ್ಲಿಂ ಮಹಾಸಭಾ*



ಚಿತ್ರ 8.15 • ಪೊಯ್ಕಯಿಲ್ ಯೋಹನ್ನಾನ್

### ಪೊಯ್ಕಯಿಲ್ ಯೋಹನ್ನಾನ್

ಜಾತಿಪದ್ಧತಿ, ಗುಲಾಮಗಿರಿ ಮೊದಲಾದ ಸಾಮಾಜಿಕ ಅನಾಚಾರಗಳಿಗೆದುರಾಗಿ ಹೋರಾಡಿದರು.

*ಸಂಘಟನೆ: ಪ್ರತ್ಯಕ್ಷರಕ್ಷಾ ದೈವ ಸಭಾ*



ಚಿತ್ರ 8.17 • ವಿ. ಟಿ. ಭಟ್ಟತ್ತಿರಿಪ್ಪಾಡ್

### ವಿ. ಟಿ. ಭಟ್ಟತ್ತಿರಿಪ್ಪಾಡ್

ನಂಬೂದಿರಿ ಸಮುದಾಯ ಸುಧಾರಕ, ಸಮಾಜ ಸುಧಾರಕ, ಬರಹಗಾರರು ಎಂಬೀ ವಲಯಗಳಲ್ಲಿ ಗುರುತಿಸಲ್ಪಟ್ಟರು. 'ಅಡುಕ್ಕಳೆಯಿಲ್ ನಿನ್ನ್ ಅರಂಜತ್ತೇಕ್' ಎಂಬ ಪ್ರಸಿದ್ಧವಾದ ನಾಟಕವನ್ನು ರಚಿಸಿದರು.

*ಸಂಘಟನೆ: ಯೋಗಕ್ಷೇಮಸಭಾ.*



ಚಿತ್ರ 8.12 • ಅಯ್ಯಂಕಾಳಿ

### ಅಯ್ಯಂಕಾಳಿ

ಹಿಂದುಳಿದ ಜನವಿಭಾಗಗಳ ಹಕ್ಕುಗಳಿಗೆ, ಸ್ವಾಭಿಮಾನಕ್ಕೆ, ಸಂಚಾರ ಸ್ವಾತಂತ್ರ್ಯ ಮತ್ತು ವಿದ್ಯಾಭ್ಯಾಸಕ್ಕಾಗಿ ಹೋರಾಡಿದರು. ವಿಲ್ಲುವಂಡಿ ಹೋರಾಟ ಮತ್ತು ಕಲ್ಲುಮಾಲೆ ಹೋರಾಟಗಳು ಅವರು ನೇತೃತ್ವ ನೀಡಿದ ಪ್ರಧಾನ ಹೋರಾಟಗಳಾಗಿವೆ.

ಸಂಘಟನೆ : ಸಾಧುಜನ ಪರಿಪಾಲನಾ ಸಂಘ



ಚಿತ್ರ 8.14 • ಮನ್ನತ್ತ್ ಪದ್ಮನಾಭನ್

### ಮನ್ನತ್ತ್ ಪದ್ಮನಾಭನ್

ನಾಯರ್ ಸಮುದಾಯದ ಸಾಮಾಜಿಕ ಉನ್ನತಿ ಮತ್ತು ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸಿದರು. ಕೇರಳದಲ್ಲಿ ನಾಗರಿಕ ಹಕ್ಕುಗಳಿಗಾಗಿರುವ ಹೋರಾಟಗಳಿಗೆ ನೇತೃತ್ವವನ್ನು ನೀಡಿದರು.

*ಸಂಘಟನೆ: ನಾಯರ್ ಸರ್ವಿಸ್ ಸೊಸೈಟಿ*



ಚಿತ್ರ 8.16 • ಪಂಡಿತ್ ಕೆ. ಪಿ. ಕರುಪ್ಪನ್

### ಪಂಡಿತ್ ಕೆ. ಪಿ. ಕರುಪ್ಪನ್

ಕವಿ ಮತ್ತು ನಾಟಕಕಾರರಾಗಿದ್ದ ಕರುಪ್ಪನ್, ಹಿಂದುಳಿದ ವಿಭಾಗಗಳ ಉನ್ನತಿಗಾಗಿ ಶ್ರಮಿಸಿದರು.

*ಸಂಘಟನೆ: ಅರಯ ಸಮಾಜ*



ಚಿತ್ರ 8.18 • ವಾಗ್ಭಟಾನಂದ

### ವಾಗ್ಭಟಾನಂದ

ಯುಕ್ತಿಯಾಧಾರಿತವಾದ ವಿಮರ್ಶಾತ್ಮಕ ಚಿಂತನೆಗಳನ್ನು ಪ್ರೋತ್ಸಾಹಿಸಿದರು. ಆಚಾರ ಅನುಷ್ಠಾನಗಳಲ್ಲಿ ಕಾಲಕ್ಕನುಗುಣವಾದ ಸುಧಾರಣೆಗಳನ್ನು ತರಲು ಪ್ರಯತ್ನಿಸಿದರು.

*ಸಂಘಟನೆ: ಆತ್ಮ ವಿದ್ಯಾಸಂಘ*

ಇವರಲ್ಲದೆ ಇನ್ನೂ ಅನೇಕ ಸಮಾಜ ಸುಧಾರಕರು ಕೇರಳದಲ್ಲಿದ್ದರು. ದಾಕ್ಷಾಯಿಣಿ ವೇಲಾಯುಧನ್, ಪಾರ್ವತಿ ನೆನ್ಮೇನಿಮಂಗಲಂ, ಆರ್ಯಾ ಪಳ್ಳಂ, ಕಾಳಿಕುಟ್ಟಿ ಆಶಾಟ್ಟಿ ಮೊದಲಾದವರು ಮಹಿಳೆಯರ ಸಾಮಾಜಿಕ ಉನ್ನತಿಗಾಗಿ ಪ್ರಯತ್ನಿಸಿದವರಾಗಿದ್ದಾರೆ.

ಸಮಾಜ ಸುಧಾರಕರ ಕಾರ್ಯಚಟುವಟಿಕೆಗಳು ಸಾಮಾಜಿಕವಾಗಿ ಹಿಂದುಳಿದವರ ಮತ್ತು ಮಹಿಳೆಯರ ಹಕ್ಕುಗಳು ಮತ್ತು ಶೈಕ್ಷಣಿಕ ಪ್ರಗತಿಗೆ ಕಾರಣವಾದವು. ಸಾಮಾಜಿಕ ನೀತಿಯಲ್ಲಿ ಹುದುಗಿಕೊಂಡಿರುವ ಒಂದು ಹೊಸ ಸಮಾಜವನ್ನು ಸೃಷ್ಟಿಸಲು ಮತ್ತು ಕೇರಳ ಸಮಾಜದಲ್ಲಿ ನವೋತ್ಥಾನವನ್ನು ಉಂಟುಮಾಡಲು ಸಮಾಜ ಸುಧಾರಕರಿಗೆ ಸಾಧ್ಯವಾಯಿತು.

*"ಸಮಾಜ ಸುಧಾರಕರ ಆಶಯಗಳು ಕೇರಳ ನವೋತ್ಥಾನದಲ್ಲಿ ವಹಿಸಿದ ಪಾತ್ರ" ಎಂಬ ವಿಷಯದಲ್ಲಿ ವಿಚಾರಗೋಷ್ಠಿಯನ್ನು ನಡೆಸಿರಿ.*

## ನಾಗರಿಕ ಸ್ವಾತಂತ್ರ್ಯಕ್ಕಾಗಿರುವ ಹೋರಾಟಗಳು

### ಮೇಲುಡುಗೆ ಹೋರಾಟ

*"ಎಲ್ಲಾ ಮತದಲ್ಲಿರುವ ಶಿಶು ಶುಶ್ರೂಷಕರು ದಪ್ಪವಾದ ಬಟ್ಟೆಗಳನ್ನು ಧರಿಸುವುದಕ್ಕೋ ಮೇಲ್ಜಾತಿಯ ಸ್ತ್ರೀಯರಂತಲ್ಲದೆ ಇತರ ಯಾವುದಾದರೂ ರೀತಿಯಲ್ಲಿ ಎದೆಯನ್ನು ಮುಚ್ಚಿಕೊಳ್ಳಲು ಯಾವುದೇ ಅಭ್ಯಂತರವಿಲ್ಲ - ಮಾಹಿತಿಯನ್ನು ಎಲ್ಲರೂ ತಿಳಿದು ಅನುಸರಿಸುವುದು."*

ಇದು ಸ್ತ್ರೀಯರಿಗೆ ಮೇಲುಡುಗೆಯನ್ನು ಧರಿಸಲಿರುವ ಹಕ್ಕನ್ನು ನೀಡಿ ತಿರುವಿದಾಂಕೂರು ಮಹಾರಾಜರಾದ ಉತ್ರಂ ತಿರುನಾಳ್ ಮಾರ್ತಾಂಡವರ್ಮ ಹೊರಡಿಸಿದ ಘೋಷಣೆಯ ಒಂದು ಭಾಗವಾಗಿದೆ.

ಈ ಘೋಷಣೆಗೆ ಕಾರಣವಾದ 'ಮೇಲುಡುಗೆ ಹೋರಾಟ'ದ ಕುರಿತು ಹಿಂದಿನ ತರಗತಿಗಳಲ್ಲಿ ನೀವು ಚರ್ಚಿಸಿದ್ದೀರಲ್ಲವೇ.

ದಕ್ಷಿಣ ತಿರುವಿದಾಂಕೂರಿನ ಚನ್ನಾರ್ ಸಮುದಾಯದ ಮಹಿಳೆಯರಿಗೆ ಉನ್ನತ ವಿಭಾಗವೆಂದು ಪರಿಗಣಿಸಲ್ಪಟ್ಟಿರುವ ಮಹಿಳೆಯರಂತೆ ಮೇಲುಡುಗೆಯನ್ನು ಧರಿಸುವ ಅಧಿಕಾರವಿರಲಿಲ್ಲ. ಕ್ರೈಸ್ತ ಮಿಷನರಿಗಳ ಬೆಂಬಲದೊಂದಿಗೆ ಮೇಲುಡುಗೆಯನ್ನು ಧರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಂಡ ಚನ್ನಾರ್ ಮಹಿಳೆಯರನ್ನು ಉನ್ನತ ವಿಭಾಗವೆಂದು ಪರಿಗಣಿಸಲ್ಪಟ್ಟವರು ಆಕ್ರಮಿಸಿದರಲ್ಲದೆ ಅವರ ಮೇಲುಡುಗೆಯನ್ನು ಹರಿದು ಹಾಕಿದರು. ಅನಂತರ ದಕ್ಷಿಣ ತಿರುವಿದಾಂಕೂರಿನ ಹಲವೆಡೆಗಳಲ್ಲಿ ಗಲಭೆಗಳುಂಟಾದುವು. 1859 ಜುಲೈ 26 ರಂದು ತಿರುವಿದಾಂಕೂರು ಮಹಾರಾಜರು ಚನ್ನಾರ್ ಮಹಿಳೆಯರಿಗೆ ಎದೆ ಮುಚ್ಚುವುದಕ್ಕಿರುವ ನಿಯಂತ್ರಣಗಳನ್ನು ಕೊನೆಗೊಳಿಸಿ ಆಜ್ಞೆಯನ್ನು ಹೊರಡಿಸಿದರು.

*ಮೇಲುಡುಗೆಯನ್ನು ಧರಿಸುವ ಹಕ್ಕುಗಳಿಗಾಗಿರುವ ಹೋರಾಟಕ್ಕೆ ಕಾರಣವಾದ ಸಾಮಾಜಿಕ ಸನ್ನಿವೇಶಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ವೈಕ್ಕಂ ಸತ್ಯಾಗ್ರಹ




ವೈಕ್ಕಂ ದೇವಸ್ಥಾನದ 100 ಮೀಟರ್ ದೂರದಲ್ಲಿ ಸ್ಥಾಪಿಸಲಾಗಿದ್ದ ಒಂದು ಫಲಕದಲ್ಲಿ ಈ ರೀತಿ ಬರೆಯಲಾಗಿತ್ತು.

ವೈಕಂ ಸತ್ಯಾಗ್ರಹವು ರಾಷ್ಟ್ರೀಯ ಚಳುವಳಿಗಳು ಪ್ರಬಲವಾಗಿದ್ದ ಕಾಲದಲ್ಲಿ ಸಂಚಾರ ಸ್ವಾತಂತ್ರ್ಯಕ್ಕಾಗಿ ಕೇರಳದಲ್ಲಿ ನಡೆದ ಪ್ರಧಾನ ಹೋರಾಟವಾಗಿದೆ. ವೈಕ್ಕಂ ದೇವಾಲಯದ ಸುತ್ತಲಿನ ರಸ್ತೆಯಲ್ಲಿ ಕೆಳಜಾತಿಯವರೆಂದು ಪರಿಗಣಿಸಲಾದವರಿಗೆ ಸಂಚರಿಸಲು ಅನುಮತಿ ಇರಲಿಲ್ಲ. ಈ ತಾರತಮ್ಯಕ್ಕೆದುರಾಗಿ 1924 ಮಾರ್ಚ್ 30ರಂದು ಸತ್ಯಾಗ್ರಹವನ್ನು ಆರಂಭಿಸಿದರು.

ಟಿ.ಕೆ. ಮಾಧವನ್, ಕೆ. ಕೇಳಪ್ಪನ್, ಕೆ.ಪಿ. ಕೇಶವ ಮೆನನ್ ಮೊದಲಾದವರು ಈ ಸತ್ಯಾಗ್ರಹದ ನೇತೃತ್ವವನ್ನು ವಹಿಸಿದ್ದರು. ರಾಷ್ಟ್ರದ ಗಮನವನ್ನು ಸೆಳೆದ ವೈಕ್ಕಂ ಸತ್ಯಾಗ್ರಹವು ಮಹಾತ್ಮಾ ಗಾಂಧಿಯವರ ಮಧ್ಯಸ್ಥಿಕೆಯಲ್ಲಿ ಕೊನೆಗೊಂಡಿತು. 1925 ನವಂಬರ್ 23 ರಂದು ದೇವಾಲಯದ ಮೂರು ದಿಕ್ಕುಗಳಲ್ಲಿರುವ ರಸ್ತೆಗಳನ್ನು (ಪೂರ್ವ ದ್ವಾರಕ್ಕಿರುವ ಎರಡು ದಾರಿಗಳನ್ನು ಹೊರತುಪಡಿಸಿ) ಹಿಂದೂ ಧರ್ಮದ ಎಲ್ಲಾ ವಿಭಾಗಗಳಿಗೂ ಪ್ರವೇಶಾನುಮತಿಯನ್ನು ನೀಡಿದರು.

*ವೈಕ್ಕಂ ಸತ್ಯಾಗ್ರಹಕ್ಕೆ ಸಂಬಂಧಿಸಿದ ಪತ್ರಿಕಾವಾರ್ತೆಯನ್ನು ತಯಾರಿಸಿರಿ.*

## ಗುರುವಾಯೂರು ಸತ್ಯಾಗ್ರಹ

ಗುರುವಾಯೂರು ಸತ್ಯಾಗ್ರಹವು ಹಿಂದೂ ಧರ್ಮದಲ್ಲಿನ ಎಲ್ಲಾ ವಿಭಾಗಗಳ ಜನರಿಗೂ ಗುರುವಾಯೂರು ಕ್ಷೇತ್ರಕ್ಕೆ ಪ್ರವೇಶದ ಅನುಮತಿಯನ್ನು ನೀಡಬೇಕೆಂಬ ಬೇಡಿಕೆಯನ್ನು ಮುಂದೊಡ್ಡಿ ನಡೆದ ಹೋರಾಟವಾಗಿದೆ.

ಕೆ. ಕೇಳಪ್ಪನ್, ಮನ್ನತ್ತ್ ಪದ್ಮನಾಭನ್ ಮೊದಲಾದವರ ನೇತೃತ್ವದಲ್ಲಿ ಸಮಿತಿಯನ್ನು ರೂಪಿಸಿ 1931 ನವಂಬರ್ 1 ರಂದು ಸತ್ಯಾಗ್ರಹವು ಆರಂಭವಾಯಿತು. ಹೋರಾಟವು ತೀವ್ರಗೊಂಡಾಗ ಅಧಿಕಾರಿಗಳಿಗೆ ಒಂದು ತಿಂಗಳವರೆಗೆ ಕ್ಷೇತ್ರವನ್ನು ಮುಚ್ಚಬೇಕಾಗಿ ಬಂತು. ಹೋರಾಟದ ಸ್ವಯಂಸೇವಕ ಮುಂದಾಳುಗಳಾದ ಎ.ಕೆ. ಗೋಪಾಲನ್ ಮತ್ತು ಪಿ. ಕೃಷ್ಣ ಪಿಳ್ಳೆಯವರ ಸತ್ಯಾಗ್ರಹವನ್ನು ವಿರೋಧಿಗಳು ಕ್ರೂರವಾಗಿ ಆಕ್ರಮಿಸಿದರು. ಕೆ. ಕೇಳಪ್ಪನ್ ದೇವಸ್ಥಾನದ ಮುಂಭಾಗದಲ್ಲಿ 'ಅಮರಣಾಂತ ಉಪವಾಸ'ವನ್ನು ಆರಂಭಿಸಿದಾಗ, ವಿವಿಧ ಪ್ರದೇಶಗಳಿಂದ ಇದಕ್ಕೆ ಬೆಂಬಲವನ್ನು ನೀಡಿ ಅನೇಕರು ತಲುಪಿದರು. ಕೊನೆಗೆ ಗಾಂಧೀಜಿಯ ಸೂಚನೆಯಂತೆ ಉಪವಾಸವನ್ನು ಕೊನೆಗೊಳಿಸಿದರು. ಕ್ಷೇತ್ರ ಪ್ರವೇಶದ ಕುರಿತು ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಪೊನ್ನಾನಿ ತಾಲೂಕಿನಲ್ಲಿ ಕಾಂಗ್ರೆಸ್ ಒಂದು ಜನಾಭಿಪ್ರಾಯ ಸಂಗ್ರಹವನ್ನು ನಡೆಸಿದಾಗ ಹೆಚ್ಚಿನವರು ಅದನ್ನು ಬೆಂಬಲಿಸಿದರು. ಹೀಗೆ ಎಲ್ಲಾ ಹಿಂದೂಗಳಿಗೂ ಕ್ಷೇತ್ರ ಪ್ರವೇಶಕ್ಕೆ ಅನುಕೂಲಕರವಾದ ವಾತಾವರಣವೊಂದನ್ನು ಸೃಷ್ಟಿಸಲು ಗುರುವಾಯೂರು ಸತ್ಯಾಗ್ರಹಕ್ಕೆ ಸಾಧ್ಯವಾಯಿತು.

### *ಸವರ್ಣಜಾಥ*

*ವೈಕ್ಕಂ ಸತ್ಯಾಗ್ರಹಕ್ಕಿರುವ ಬೆಂಬಲವನ್ನು ವ್ಯಕ್ತಪಡಿಸಲು ಮನ್ನತ್ತ್ ಪದ್ಮನಾಭನ್‌ರವರ ನೇತೃತ್ವದಲ್ಲಿ ವೈಕ್ಕಂನಿಂದ ತಿರುವನಂತಪುರಕ್ಕೆ ಮೆರವಣಿಗೆಯನ್ನು ನಡೆಸಿದರು. ಇದನ್ನು 'ಸವರ್ಣಜಾಥ' ಎಂದು ಕರೆಯುತ್ತಾರೆ.*



*ಚಿತ್ರ 8.19 • ಟಿ.ಕೆ. ಮಾಧವನ್*



*ಚಿತ್ರ 8.20 • ಕೆ. ಕೇಳಪ್ಪನ್*



*ಚಿತ್ರ 8.21 • ಎ.ಕೆ. ಗೋಪಾಲನ್*



*ಚಿತ್ರ 8.22 • ಪಿ. ಕೃಷ್ಣಪಿಳ್ಳೈ*



*ಚಿತ್ರ 8.24 • ಸಿ. ಕೇಶವನ್*

## *ಆಧುನಿಕ ಕಾಲದ ಮಹಾದ್ಭುತ*

*[Miracle of modern times]*



*ಚಿತ್ರ 8.23 • ಚಿತ್ತಿರ ತಿರುನಾಳ್ ಬಾಲರಾಮವರ್ಮ*

*1936 ನವೆಂಬರ್ 12 ರಂದು ತಿರುವಿದಾಂಕೂರಿನ ಆಡಳಿತಾಧಿಕಾರಿಯಾಗಿದ್ದ ಚಿತ್ತಿರ ತಿರುನಾಳ್ ಬಾಲರಾಮವರ್ಮರು ಕ್ಷೇತ್ರ ಪ್ರವೇಶ ಘೋಷಣೆಯನ್ನು ಹೊರಡಿಸಿದರು. ಇದರೊಂದಿಗೆ ತಿರುವಿದಾಂಕೂರಿನ ದೇವಸ್ಥಾನಗಳಿಗೆ ಎಲ್ಲಾ ಹಿಂದೂಗಳಿಗೂ ಪ್ರವೇಶಾನುಮತಿಯನ್ನು ನೀಡಲಾಯಿತು. ಗಾಂಧೀಜಿಯು ಈ ಘೋಷಣೆಯನ್ನು 'ಆಧುನಿಕ ಕಾಲದ ಮಹಾದ್ಭುತ' ಎಂದು ಬಣ್ಣಿಸಿದರು.*

## ಪಾಲಿಯಂ ಸತ್ಯಾಗ್ರಹ

1947-48 ರಲ್ಲಿ ನಡೆದ ಪಾಲಿಯಂ ಸತ್ಯಾಗ್ರಹವು ಕೇರಳದಲ್ಲಿ ಅಸ್ಪೃಶ್ಯತಾ ನಿವಾರಣೆಗಾಗಿ ನಡೆದ ಮತ್ತೊಂದು ಹೋರಾಟವಾಗಿದೆ. ಕೊಚ್ಚಿಯ ಚೆನ್ನಮಂಗಲದಲ್ಲಿರುವ ಪಾಲಿಯತ್ತಚ್ಚನ ವಸತಿಯ ಮುಂಬಾಗದಲ್ಲಿರುವ ರಸ್ತೆಯಲ್ಲಿ ಅವಗಣಿಸಲ್ಪಟ್ಟ ಜನ ವಿಭಾಗಗಳಿಗೆ ಸಂಚರಿಸಲು ಅನುಮತಿಯಿರಲಿಲ್ಲ. ಪಾಲಿಯಂ ಸತ್ಯಾಗ್ರಹವು ಇದಕ್ಕೆದುರಾಗಿ ರಾಜಕೀಯ ಪಕ್ಷಗಳು ಮತ್ತು ಸಮುದಾಯ ಸಂಘಟನೆಗಳು ಒಟ್ಟಾಗಿ ನಡೆಸಿದ ಹೋರಾಟವಾಗಿದೆ. ಪಿ ಕೇಶವನ್ ಮತ್ತು ಇತರರು ನೇತೃತ್ವ ನೀಡಿದ ಸತ್ಯಾಗ್ರಹವನ್ನು ಎದುರಿಸಲು ಸರಕಾರವು ಬಂಧನ ಮತ್ತು ಥಳಿತದಂತಹ ಕ್ರಮಗಳನ್ನು ಬಳಸಿತು. 1948 ರಲ್ಲಿ ಕೊಚ್ಚಿಯ ಎಲ್ಲಾ ದೇವಾಲಯಗಳಿಗೆ ಜಾತಿಭೇದವಿಲ್ಲದೆ ಎಲ್ಲರಿಗೂ ಪ್ರವೇಶಾನುಮತಿ ನೀಡಿದಾಗ ಪಾಲಿಯಂ ರಸ್ತೆಯಲ್ಲಿದ್ದ ಸಂಚಾರ ನಿಷೇಧವೂ ಇಲ್ಲದಾಯಿತು.

*'ನಾಗರಿಕ ಹಕ್ಕುಗಳಿಗಾಗಿರುವ ಹೋರಾಟಗಳು ಮತ್ತು ಗುರಿ ಸಾಧನೆಗಳು' ಎಂಬ ವಿಷಯದಲ್ಲಿ ಪ್ಯಾನಲ್ ಚರ್ಚೆ ನಡೆಸಿರಿ.*

*ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ನಾಗರಿಕ ಹಕ್ಕುಗಳಿಗಾಗಿರುವ ಹೋರಾಟಗಳು | ಸನ್ನಿವೇಶಗಳು |
|---|---|
| ಮೇಲುಡುಗೆ ಹೋರಾಟ | ವಸ್ತ್ರಧಾರಣೆಗೆ ನಿಷೇಧ |
| ವೈಕ್ಕಂ ಸತ್ಯಾಗ್ರಹ | |
| ಗುರುವಾಯೂರು ಸತ್ಯಾಗ್ರಹ | |
| ಪಾಲಿಯಂ ಸತ್ಯಾಗ್ರಹ | |

# ರಾಷ್ಟ್ರೀಯ ಪ್ರಜ್ಞೆಯ ಹೋರಾಟ ಜ್ವಾಲೆ

*"ವರಿಗ ವರಿಗ ಸಹಜರೇ, ಸಹನ ಸಮರ ಸಮಯಮಾಯ್*
*ಕರಳುರಚ್ಚ್ ಕೈಗಳ್ ಕೋರ್ತ್ ಕಾಲ್ನಡಕ್ ಪೋಗ ನಾಮ್....*
*ಬಿಟ್ಟನೇ ವಿರಟ್ಟುವಿನ್ ಚಟ್ಟಮೊಕ್ಕೆ ಮಾಟ್ಟುವಿನ್*
*ದುಷ್ಟನೀತಿ ವಿಷ್ಟಪತ್ತಿಲೇಟ್ಟುಮೋ ನಿಲಚ್ಚಿಡಾ!...*
*ಉಪ್ಪು ನಾಮ್ ಕುರುಕ್ಕಣಂ ಆರು ವನ್ನೆದಿರ್ಕ್ಕಿಲುಂ*
*ಅಲ್ಪವುಂ ಕೊಡುತ್ತಿಡಾದೆ ಕೋಪಿಯಾದೆ ನಿಲ್ಕಣಂ..."*



ಇವು 1930 ರಲ್ಲಿ ಉಪ್ಪಿನ ಸತ್ಯಾಗ್ರಹದ ಭಾಗವಾಗಿ ನಡೆದ ಮೆರವಣಿಗೆಯಲ್ಲಿ ಹಾಡಲು ಅಂಶಿ ನಾರಾಯಣ ಪಿಳ್ಳೆ, ರಚಿಸಿದ ಸಾಲುಗಳಾಗಿವೆ. ಸತ್ಯಾಗ್ರಹದ ಹೋರಾಟ ವಿಧಾನಗಳು ಯಾವುವೆಂದು ಈ ಸಾಲುಗಳಿಂದ ಕಂಡುಹಿಡಿಯಬಹುದೆ?

ಸತ್ಯಾಗ್ರಹಿಗಳು ಗಾನವನ್ನು ಆಲಾಪಿಸುತ್ತಾ ಘೋಷಣೆಗಳನ್ನು ಮೊಳಗಿಸಿಕೊಂಡು ಪಯ್ಯನ್ನೂರು ಸಮುದ್ರತೀರಕ್ಕೆ ಮೆರವಣಿಗೆ ಹೊರಟರು. ದಾರಿಯುದ್ದಕ್ಕೂ ಸಾವಿರಾರು ಜನರು ಅವರಿಗೆ ಸ್ವಾಗತವನ್ನು ನೀಡಿದರು. ಕೇರಳದಲ್ಲಿ ರಾಷ್ಟ್ರೀಯ ಚಳುವಳಿಯು ಎಷ್ಟರಮಟ್ಟಿಗೆ ಪ್ರಬಲವಾಗಿತ್ತೆಂಬುದನ್ನು ಇದರಿಂದ ಅರ್ಥೈಸಿಕೊಳ್ಳಬಹುದು.

ಕೇರಳದ ಮಲಬಾರು, ಕೊಚ್ಚಿ ಮತ್ತು ತಿರುವಿದಾಂಕೂರಿನಲ್ಲಿ ರಾಷ್ಟ್ರೀಯ ಚಳುವಳಿಯ ಬೆಳವಣಿಗೆಯನ್ನು ನಾವು ಪರಿಶೀಲಿಸೋಣ.

## ಮಲಬಾರು

ಕೇರಳದ ಇತರ ಪ್ರದೇಶಗಳಿಗಿಂತ ಮಲಬಾರಿನಲ್ಲಿ ರಾಷ್ಟ್ರೀಯ ಚಳುವಳಿಗಳು ಹೆಚ್ಚು ಪ್ರಬಲವಾಗಿದ್ದುವು. ಮಲಬಾರಿನ ಜಿಲ್ಲಾ ಕಾಂಗ್ರೆಸ್ ಸಮಿತಿಯ ರಚನೆ ಮತ್ತು ಹೋಮ್‌ರೂಲ್ ಲೀಗ್‌ನ ಚಟುವಟಿಕೆಗಳು ಮಲಬಾರಿನ ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸಿದವು. ಖಿಲಾಫತ್, ಅಸಹಕಾರ ಚಳುವಳಿಗೆ ಮಲಬಾರಿನಾದ್ಯಂತ ಹೆಚ್ಚಿನ ಬೆಂಬಲವು ದೊರೆಯಿತು. ಹೋರಾಟದ ಭಾಗವಾಗಿ ಜನರು ವಿದೇಶಿ ವಸ್ತುಗಳು, ನ್ಯಾಯಾಲಯಗಳು, ವಿದ್ಯಾಲಯಗಳು ಮೊದಲಾದ ಸರಕಾರಿ ಸಂಸ್ಥೆಗಳನ್ನು ಬಹಿಷ್ಕರಿಸಿದರು. ಹೋರಾಟದಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಿ ಕುಂಞಿರಾಮ ಮೆನನ್, ಕೆ. ಕೇಳಪ್ಪನ್, ಯು. ಗೋಪಾಲ ಮೆನನ್, ಕೆ.ಪಿ. ಕೇಶವ ಮೆನನ್, ಮುಹಮ್ಮದ್ ಅಬ್ದುರ್ ರಹಿಮಾನ್ ಸಾಹಿಬ್, ಇ. ಮೊಯ್ದು ಮೌಲವಿ, ಮೊಯಾರತ್ ಶಂಕರನ್ ಮೊದಲಾದವರು ಪ್ರಮುಖ ನೇತಾರರಾಗಿದ್ದರು.

ನಿಯಮ ಉಲ್ಲಂಘನಾ ಚಳುವಳಿಯ ಭಾಗವಾಗಿ ಗಾಂಧೀಜಿಯ ನೇತೃತ್ವದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಉಪ್ಪು ಸತ್ಯಾಗ್ರಹವು ನಡೆದಾಗ ಅದರ ಪ್ರಭಾವವು ಕೇರಳದಲ್ಲೂ ಕಂಡುಬಂತು. ಮಲಬಾರಿನ ಪಯ್ಯನ್ನೂರು ಕೇರಳದ ಉಪ್ಪು ಸತ್ಯಾಗ್ರಹದ ಕೇಂದ್ರವಾಗಿತ್ತು. ಕೆ. ಕೇಳಪ್ಪನ್ ಉಪ್ಪು ಸತ್ಯಾಗ್ರಹದ ನೇತೃತ್ವವನ್ನು ವಹಿಸಿದ್ದರು.



*ಚಿತ್ರ 8.25 • ಸಿ. ಶಂಕರನ್ ನಾಯರ್*



*ಚಿತ್ರ 8.26 • ಬ್ಯಾರಿಸ್ಟರ್ ಜಿ.ಪಿ. ಪಿಳ್ಳೈ*

*ಕೇರಳದಂತೆ ದೇಶೀಯ ಮಟ್ಟದಲ್ಲೂ ಮಲೆಯಾಳಿಗಳು ಕಾಂಗ್ರೆಸ್ಸಿನಲ್ಲಿ ಗಮನ ಸೆಳೆದಿದ್ದರು. ಸಿ. ಶಂಕರನ್ ನಾಯರ್ ಮತ್ತು ಬ್ಯಾರಿಸ್ಟರ್ ಜಿ.ಪಿ. ಪಿಳ್ಳೈಯವರು ಇವರಲ್ಲಿ ಪ್ರಮುಖರಾಗಿದ್ದರು.*



*ಚಿತ್ರ 8.27 • ಕೆ.ಪಿ. ಕೇಶವ ಮೆನನ್*



ಚಿತ್ರ 8.28 • ಮುಹಮ್ಮದ್ ಅಬ್ದುರ್ ರಹಿಮಾನ್ ಸಾಹಿಬ್

ಕೇರಳದ ನಾನಾ ಭಾಗಗಳಿಂದ ಸತ್ಯಾಗ್ರಹಿಗಳು ಪಯ್ಯನ್ನೂರಿನ ಸಮುದ್ರ ಕಿನಾರೆಗೆ ತಲುಪಿ ಹೋರಾಟದಲ್ಲಿ ಭಾಗಿಗಳಾದರು. ಇದಲ್ಲದೆ ಸತ್ಯಾಗ್ರಹಿಗಳು ಕೋಯಿಕ್ಕೋಡು ಸಮುದ್ರ ತೀರದಲ್ಲಿ ಮುಹಮ್ಮದ್ ಅಬ್ದುರ್ ರಹಿಮಾನ್ ರ ನೇತೃತ್ವದಲ್ಲಿ ನಿಯಮ ಉಲ್ಲಂಘಿಸಿ ಉಪ್ಪನ್ನು ತಯಾರಿಸಿದರು. ಅಲ್ಲಿ ನೆರೆದಿದ್ದ ಜನರಿಗೆ ಪೊಲೀಸರ ಕ್ರೂರ ಥಳಿತವನ್ನು ಅನುಭವಿಸಬೇಕಾಗಿ ಬಂತು. ವಿದೇಶಿ ವಸ್ತುಗಳ ಬಹಿಷ್ಕಾರ, ಮದ್ಯದ ಅಂಗಡಿಗಳಿಗೆ ಮುತ್ತಿಗೆ, ಖಾದಿ ಪ್ರಚಾರ ಇತ್ಯಾದಿಗಳು ಹೋರಾಟದ ಭಾಗವಾಗಿ ನಡೆದವು.

### *ಗಾಂಧೀಜಿ ಕೇರಳದಲ್ಲಿ*

*1920 ರಲ್ಲಿ ಗಾಂಧೀಜಿ ಮತ್ತು ಮೌಲನಾ ಶೌಕತ್ ಅಲಿ ಯವರು ಅಸಹಕಾರ- ಖಿಲಾಫತ್ ಪ್ರಚಾರಕ್ಕಾಗಿ ಕೋಯಿಕ್ಕೋಡ್ ಗೆ ತಲುಪಿದರು. ಇದು ಗಾಂಧೀಜಿಯ ಮೊದಲ ಕೇರಳ ಸಂದರ್ಶನವಾಗಿತ್ತು. ಭಾರತೀಯರು ವಿಭಿನ್ನ ಮತದವರಾಗಿದ್ದರೂ ನಮ್ಮ ಮಾತೃಭೂಮಿಯ ಸಂತತಿಗಳೆಂದೂ ನಮ್ಮ ಸುಖ ದುಃಖಗಳು ಮತ್ತು ಸಮಸ್ಯೆಗಳು ಒಂದೇ ಆಗಿವೆ ಎಂದೂ ನೇತಾರರು ಘೋಷಿಸಿದಾಗ ಜನರು ಅದನ್ನು ಅತ್ಯಂತ ಆವೇಶದಿಂದ ಸ್ವೀಕರಿಸಿದರು.*

*ಮಲಬಾರಿನ ನಿಯಮ ಉಲ್ಲಂಘನಾ ಹೋರಾಟದ ಕಾರ್ಯಚಟುವಟಿಕೆಗಳು ಯಾವುವು ಎಂದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ಮಲಬಾರು ದಂಗೆ

ಮಲಬಾರು ದಂಗೆಯು ಮಲಬಾರಿನಲ್ಲಿ ಬ್ರಿಟಿಷರ ಹಾಗೂ ಜಮೀನ್ದಾರರ ವಿರುದ್ಧ ನಡೆದ ಹೋರಾಟವಾಗಿದೆ. ಅಸಹಕಾರ - ಖಿಲಾಫತ್ ಹೋರಾಟಗಳೊಂದಿಗೆ ಮಲಬಾರಿನಲ್ಲಿ ಮೊದಲೇ ಸಕ್ರಿಯವಾಗಿದ್ದ ಒಕ್ಕಲು ಚಳುವಳಿಯೂ ಸೇರಿಕೊಂಡಾಗ ಅದು ಮಲಬಾರು ದಂಗೆಯಾಯಿತು. 1921 ರಲ್ಲಿ ಏರನಾಡು, ವಳ್ಳುವನಾಡು,ಪೊನ್ನಾನಿ ತಾಲೂಕುಗಳಲ್ಲಿ ದಂಗೆಯು ವ್ಯಾಪಿಸಿತು. ಜಮೀನ್ದಾರರು, ಸರಕಾರಿ ನೌಕರರು, ದಂಗೆಯಲ್ಲಿ ಭಾಗಿಗಳಾದ ಕೃಷಿಕರನ್ನೂ ಒಳಗೊಂಡಂತೆ ಅನೇಕರು ಮರಣಹೊಂದಿದರು. ಮಲಬಾರ್ ಸ್ಪೆಷಲ್ ಪೊಲೀಸ್ ಮತ್ತು ಸೈನ್ಯವನ್ನು ಉಪಯೋಗಿಸಿ ಬ್ರಿಟಿಷ್ ಸರಕಾರವು ದಂಗೆಯನ್ನು ದಮನಿಸಿತು. ಆಲಿ ಮುಸ್ಲಿಯಾರ್, ವಾರಿಯನ್ ಕುನ್ನತ್ ಕುಂಞಹಮ್ಮದ್ ಹಾಜಿ, ಎಂ.ಪಿ. ನಾರಾಯಣ ಮೆನನ್ ಮೊದಲಾದವರು ಮಲಬಾರು ದಂಗೆಗೆ ನೇತೃತ್ವ ನೀಡಿದ ಪ್ರಮುಖರಾಗಿದ್ದರು.



ಚಿತ್ರ 8.29 • ಮಲಬಾರು ದಂಗೆಗೆ ಸಂಬಂಧಿಸಿದ ಚಿತ್ರ

### *ವ್ಯಾಗನ್ ಹತ್ಯಾಕಾಂಡ*

*ಇದು ಮಲಬಾರು ದಂಗೆಯ ಸಮಯದಲ್ಲಿ ಉಂಟಾದ ಅತಿದಾರುಣ ಘಟನೆಯಾಗಿದೆ. ಬ್ರಿಟಿಷ್ ಪೊಲೀಸ್ ಆಫೀಸರ್ ಆಗಿದ್ದ ಹಿಚ್ ಕೋಕ್ ನ ನೇತೃತ್ವದಲ್ಲಿ ನೂರಾರು ಕೈದಿಗಳನ್ನು ತಿರೂರಿನಿಂದ ಮಲಬಾರಿನ ಹೊರಗಿರುವ ಜೈಲುಗಳಿಗೆ ಕೊಂಡುಹೋಗಲು ಗಾಳಿ ಮತ್ತು ಬೆಳಕು ಲಭಿಸದ ಸರಕು ಸಾಗಾಟ ರೈಲಿನಲ್ಲಿ ತುಂಬಿಸಲಾಯಿತು. ಉಸಿರಾಡಲು ಗಾಳಿ ಮತ್ತು ಕುಡಿಯಲು ಒಂದು ಹನಿ ನೀರೂ ಸಿಗದೆ ಯಾತ್ರೆಯ ನಡುವೆ ಅರ್ಧಕ್ಕಿಂತಲೂ ಹೆಚ್ಚು ಜನರು ಭೋಗಿಯಲ್ಲೇ ಮರಣ ಹೊಂದಿದರು.*



*ಚಿತ್ರ 8.30 • ಪೂಕೋಟ್ಟೂರಿನ ಯುದ್ಧ ಸ್ಮಾರಕ*

### *ತಿರೂರಂಙಾಡಿ, ಪೂಕೋಟ್ಟೂರು, ಪಾಂಡಿಕ್ಕಾಡ್ ಸಂಘರ್ಷಗಳು*

*ಪೂಕೋಟ್ಟೂರಿನ ಖಿಲಾಪತ್ ಸಮಿತಿಯ ಕಾರ್ಯದರ್ಶಿಯಾಗಿದ್ದ ವಡಕ್ಕೆ ವೀಟ್ಟಿಲ್ ಮುಹಮ್ಮದ್ ರನ್ನು ಕಳ್ಳತನದ ಆರೋಪವನ್ನು ಹೊರಿಸಿ ಬಂಧಿಸಲು ಬ್ರಿಟಿಷ್ ಪೊಲೀಸರು ಪ್ರಯತ್ನಿಸಿದರು. ಇದರ ಭಾಗವಾಗಿ ಮೊದಲು ತಿರೂರಂಙಾಡಿಯಲ್ಲಿ ಆಮೇಲೆ ಪೂಕೋಟ್ಟೂರು ಮತ್ತು ಪಾಂಡಿಕ್ಕಾಡಿನಲ್ಲೂ ಬ್ರಿಟಿಷ್ ಪೊಲೀಸರು ಮತ್ತು ಜನರ ನಡುವೆ ಹೋರಾಟಗಳು ನಡೆದವು. ಇವು ಮಲಬಾರ್ ದಂಗೆಯ ಕಾಲದಲ್ಲಿ ನಡೆದ ಪ್ರಧಾನ ಘಟನೆಗಳಾಗಿವೆ.*

*ಮಲಬಾರು ದಂಗೆಯು ಭಾರತದ ಸ್ವಾತಂತ್ರ್ಯಹೋರಾಟದ ಪ್ರಧಾನ ಘಟನೆಯಾಗಿ ಹೇಗೆ ಬದಲಾಯಿತೆಂದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ಕ್ವಿಟ್ ಇಂಡಿಯಾ ಚಳುವಳಿ

1942 ಆಗಸ್ಟ್ 9 ರಂದು ಭಾರತದಾದ್ಯಂತ ಆರಂಭವಾದ ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ ಗಾಂಧೀಜಿಯನ್ನೂ ಒಳಗೊಂಡಂತೆ ಪ್ರಮುಖ ನೇತಾರರನ್ನು ಬಂಧಿಸಲಾಯಿತು. ಆದುದರಿಂದ ಇದು ಇತರ ಗಾಂಧಿವಾದಿ ಚಳುವಳಿಗಳಿಗಿಂತ ಭಿನ್ನವಾಗಿ ಹಿಂಸಾತ್ಮಕ ಹೋರಾಟವಾಗಿ ಬದಲಾಯಿತು. ಕೇರಳದ ಮಲಬಾರು, ಕೊಚ್ಚಿ, ತಿರುವಿದಾಂಕೂರು ಪ್ರದೇಶಗಳಲ್ಲಿ ಮಹಿಳೆಯರು ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಎಲ್ಲಾ ವಿಭಾಗದ ಜನರೂ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕೀಳರಿಯೂರ್ ಬಾಂಬು ಪ್ರಕರಣವು ಇದರ ಭಾಗವಾಗಿ ನಡೆದ ಒಂದು ಪ್ರಮುಖ ಘಟನೆಯಾಗಿದೆ.

### *ಕೀಳರಿಯೂರ್ ಬಾಂಬ್ ಪ್ರಕರಣ*

*ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಕೋಝಿಕ್ಕೋಡು ಜಿಲ್ಲೆಯ ಕೊಯಿಲಾಂಡಿಗೆ ಸಮೀಪವಿರುವ ಕೀಳರಿಯೂರಿನಲ್ಲಿ ಹೋರಾಟಗಾರರ ಗುಂಪೊಂದು ಬಾಂಬುಗಳನ್ನು ತಯಾರಿಸಿತು. ಯಾವುದೇ ಸಾವು ನೋವುಗಳನ್ನುಂಟುಮಾಡದೆ, ವಿವಿಧ ಸ್ಥಳಗಳಲ್ಲಿ ಬಾಂಬುಗಳನ್ನು ಸ್ಫೋಟಿಸುವ ಮೂಲಕ ಬ್ರಿಟಿಷರನ್ನು ಬೆದರಿಸುವುದು ಇವರ ಉದ್ದೇಶವಾಗಿತ್ತು. 1942 ನವೆಂಬರ್ 17 ರಂದು ಬ್ರಿಟಿಷರನ್ನು ದಿಗ್ಭ್ರಾಂತಗೊಳಿಸಿದ ಸ್ಫೋಟಗಳು ನಡೆದವು. ಡಾ. ಕೆ.ಬಿ. ಮೆನನ್ ಸೇರಿದಂತೆ ಇದಕ್ಕೆ ಕಾರಣರಾದವರನ್ನು ಬ್ರಿಟಿಷ್ ಪೊಲೀಸರು ಬಂಧಿಸಿ ಕಠಿಣ ಕಾರಾಗೃಹ ವಾಸವನ್ನು ವಿಧಿಸಿದರು.*

## ಕೊಚ್ಚಿ

ರಾಜಾಡಳಿತವು ಅಸ್ತಿತ್ವದಲ್ಲಿದ್ದ ಕೊಚ್ಚಿಯಲ್ಲಿ ಬ್ರಿಟಿಷ್ ಪರಮಾಧಿಕಾರವು ಸ್ಥಾಪನೆಯಾದ ನಂತರ ಅದಕ್ಕೆದುರಾಗಿ ಅನೇಕ ಜನಪರ ಹೋರಾಟಗಳೂ ನಡೆದಿವೆ. ಉತ್ತಮ ಆಡಳಿತವನ್ನು ಸ್ಥಾಪಿಸುವುದು ಆರಂಭಕಾಲದ ಹೋರಾಟಗಳ ಉದ್ದೇಶವಾಗಿದ್ದವು. ನಂತರ ರಾಜಕೀಯ ಹಕ್ಕುಗಳಿಗಾಗಿರುವ ಹೋರಾಟಗಳು ಆರಂಭವಾದವು.

## ಇಲೆಕ್ಟ್ರಿಸಿಟಿ ಚಳುವಳಿ

ಕೊಚ್ಚಿಯ ದಿವಾನರಾಗಿದ್ದ ಆರ್.ಕೆ. ಷಣ್ಮುಖಂ ಚೆಟ್ಟಿಯವರು ತ್ರಿಶ್ಶೂರಿನಲ್ಲಿ ವಿದ್ಯುತ್ ಸರಬರಾಜಿಗಿರುವ ಜವಾಬ್ದಾರಿಯನ್ನು ಒಂದು ಖಾಸಗಿ ಕಂಪನಿಗೆ ವಹಿಸಲು

ನಿರ್ಧರಿಸಿದರು. ಇದಕ್ಕೆದುರಾಗಿ 1936 ರಲ್ಲಿ ಜನಪರ ಹೋರಾಟಗಳುಂಟಾದವು. ಸರಕಾರವು ಹೋರಾಟಗಳನ್ನು ದಮನಿಸಿದರೂ ಜನರನ್ನು ಹೋರಾಟದೆಡೆಗೆ ಧುಮುಕಿಸಲು ಇದಕ್ಕೆ ಸಾಧ್ಯವಾಯಿತು.



ಚಿತ್ರ 8.31 • ಇಕ್ಕಂಡ ವಾರಿಯರ್



ಚಿತ್ರ 8.32 • ಪನಂಪಿಳ್ಳಿ ಗೋವಿಂದ ಮೆನನ್

## ಕೊಚ್ಚಿರಾಜ್ಯ ಪ್ರಜಾಮಂಡಲ

ಜವಾಬ್ದಾರಿಯುತ ಆಡಳಿತವನ್ನು ಗಳಿಸುವ ಉದ್ದೇಶದಿಂದ 1941 ರಲ್ಲಿ ಕೊಚ್ಚಿರಾಜ್ಯ ಪ್ರಜಾಮಂಡಲ ಎಂಬ ಹೆಸರಿನಲ್ಲಿ ಒಂದು ಸಂಘಟನೆಯು ರೂಪುಗೊಂಡಿತು. ಇಕ್ಕಂಡ ವಾರಿಯರ್, ಪನಂಪಿಳ್ಳಿ ಗೋವಿಂದ ಮೆನನ್, ವಿ.ಆರ್. ಕೃಷ್ಣನ್ ಎಳುತ್ತಚ್ಚನ್ ಪ್ರಜಾಮಂಡಲದ ಕಾರ್ಯಚಟುವಟಿಕೆಗಳಿಗೆ ನೇತೃತ್ವವನ್ನು ನೀಡಿದರು. ಜವಾಬ್ದಾರಿಯುತ ಆಡಳಿತವನ್ನು ಗಳಿಸುವುದಕ್ಕಾಗಿ ರಾಜ್ಯವ್ಯಾಪಕವಾಗಿ ಹೋರಾಟ ನಡೆಸಲು ತೀರ್ಮಾನಿಸಿದರಲ್ಲದೆ 1946 ಜುಲೈ 29 ನ್ನು 'ಜವಾಬ್ದಾರಿಯುತ ಆಡಳಿತ ದಿನ'ವಾಗಿ ಆಚರಿಸಿದರು. ನಂತರದ ಕಾಲದಲ್ಲಿ ಪ್ರಜಾಮಂಡಲವು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನೊಂದಿಗೆ ವಿಲೀನಗೊಂಡಿತು. ಇಕ್ಕಂಡ ವಾರಿಯರ್ ಪ್ರಧಾನಮಂತ್ರಿಯಾಗಿರುವ ಮೊದಲ ಕಾಂಗ್ರೆಸ್ ಮಂತ್ರಿಮಂಡಲವು ಕೊಚ್ಚಿಯಲ್ಲಿ ಅಧಿಕಾರಕ್ಕೆ ಬಂತು.

## ತಿರುವಿದಾಂಕೂರ್

ಮಲಯಾಳಿ ಮೆಮೋರಿಯಲ್ ಮತ್ತು ಈಳವ ಮೆಮೋರಿಯಲ್ ತಿರುವಿದಾಂಕೂರಿನ ಜನರ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿದ ಆರಂಭಕಾಲದ ಆಂದೋಲನಗಳಾಗಿವೆ.

**'ನಿವರ್ತನ'**

*ನಾಗರಿಕ ನಿಯಮ ಉಲ್ಲಂಘನೆ ಯಿಂದಲೂ ಅಸಹಕಾರದಿಂದಲೂ ವಿಭಿನ್ನ ಎಂದು ತೋರ್ಪಡಿಸಲು ಈ ಆಂದೋಲನವನ್ನು 'ನಿವರ್ತನ' ಎಂದು ಬಣ್ಣಿಸಿದರು. ಐ.ಸಿ. ಚಾಕೋ ಎಂಬ ಭಾಷಾ ಪಂಡಿತನು ಈ ಹೆಸರನ್ನು ನೀಡಿದನು.*

| ಮಲಯಾಳಿ ಮೆಮೋರಿಯಲ್ | ಈಳವ ಮೆಮೋರಿಯಲ್ |
|---|---|
| • ತಿರುವಿದಾಂಕೂರಿನ ಸರಕಾರಿ ಉದ್ಯೋಗಗಳಲ್ಲಿ ತಿರುವಿದಾಂಕೂರಿನವರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕೆಂಬ ಬೇಡಿಕೆ.<br>• 1891 ಜನವರಿ 1ರಂದು ಈ ಬೇಡಿಕೆಗಳನ್ನು ಮುಂದಿಟ್ಟು ಜನರು ಸಹಿ ಹಾಕಿದ ಮನವಿಯನ್ನು ಮಹಾರಾಜರಿಗೆ ಸಮರ್ಪಿಸಿದರು.<br>• ನೇತೃತ್ವ - ಜಿ.ಪಿ. ಪಿಳ್ಳೈ | • ಸರಕಾರಿ ಸೇವೆಗಳಲ್ಲಿ ಈಳವರಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ನೀಡಬೇಕೆಂಬ ಬೇಡಿಕೆ.<br>• 1896 ಸೆಪ್ಟೆಂಬರ್ 3 ರಂದು ಈಳವ ಸಮುದಾಯದ ಸದಸ್ಯರು ಸಹಿ ಹಾಕಿದ ಮನವಿಯನ್ನು ಮಹಾರಾಜರಿಗೆ ಸಮರ್ಪಿಸಿದರು.<br>• ನೇತೃತ್ವ - ಡಾ. ಪಿ. ಪಲ್ಪು |



ಚಿತ್ರ 8.33 • ಪಟ್ಟಂ ತಾನುಪಿಳ್ಳೈ

## ನಿವರ್ತನ ಆಂದೋಲನ (Abstention Movement)

ನಿವರ್ತನ ಆಂದೋಲನವು 1932ರಲ್ಲಿ ತಿರುವಿದಾಂಕೂರಿನಲ್ಲಿ ನಡೆದ ಒಂದು ಪ್ರಬಲ ರಾಜಕೀಯ ಆಂದೋಲನವಾಗಿದೆ. ಕ್ರೈಸ್ತ, ಮುಸ್ಲಿಂ ಮತ್ತು ಈಳವ ಸಮುದಾಯಗಳು ಒಂದು ರಾಜಕೀಯ ಸಮಿತಿಯನ್ನು ರಚಿಸಿ ಜಂಟಿಯಾಗಿ ಆಂದೋಲನವನ್ನು ಮುನ್ನಡೆಸಿದರು. ಸರಕಾರಿ ಉದ್ಯೋಗಗಳಲ್ಲಿ ಮತ್ತು ಶಾಸನಸಭೆಯಲ್ಲಿ ಜನಸಂಖ್ಯೆಗೆ ಅನುಪಾತಿಕವಾಗಿ ಮೀಸಲಾತಿ ನೀಡಬೇಕೆಂಬುದು ಅವರ ಬೇಡಿಕೆಯಾಗಿತ್ತು. ಸಿ. ಕೇಶವನ್, ಎನ್.ವಿ. ಜೋಸೆಫ್, ಪಿ.ಕೆ. ಕುಂಜು ಮೊದಲಾದವರು ಈ ಆಂದೋಲನಕ್ಕೆ ನೇತೃತ್ವವನ್ನು ನೀಡಿದರು. ತಿರುವಿದಾಂಕೂರಿನಲ್ಲಿ ಜವಾಬ್ದಾರಿಯುತ

ಆಡಳಿತಕ್ಕಾಗಿರುವ ಚಟುವಟಿಕೆಗಳು ತಿರುವಿದಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ನೇತೃತ್ವದಲ್ಲಿ ನಡೆಯಿತು. ಪಟ್ಟಂ ತಾನುಪಿಳ್ಳೈಯವರು ತಿರುವಿದಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ಮೊದಲ ಅಧ್ಯಕ್ಷರಾಗಿದ್ದರು. ಮನವಿಗಳು ಮತ್ತು ಪ್ರತ್ಯಕ್ಷ ಹೋರಾಟಗಳ ಮೂಲಕ ಅವರು ಪ್ರತಿಭಟನ ಚಟುವಟಿಕೆಗಳನ್ನು ಆಯೋಜಿಸಿದರು.



*ಚಿತ್ರ 8.34 • ಕೆ. ರಾಮಕೃಷ್ಣ ಪಿಳ್ಳೈ*

### *ಸ್ವದೇಶಾಭಿಮಾನಿ ಪತ್ರಿಕೆ*

*ಕೆ. ರಾಮಕೃಷ್ಣ ಪಿಳ್ಳೈಯವರು ವಕ್ಕಂ ಅಬ್ದುಲ್ ಖಾದರ್ ಮೌಲವಿ ಅವರ ಒಡೆತನದಲ್ಲಿದ್ದ ಸ್ವದೇಶಾಭಿಮಾನಿ ಪತ್ರಿಕೆಯ ಸಂಪಾದಕರಾಗಿದ್ದರು. ಅವರು ಪತ್ರಿಕೆಯ ಮೂಲಕ ಸರಕಾರದ ತಪ್ಪಾದ ಘೋಷಣೆಗಳನ್ನು ಮತ್ತು ಭ್ರಷ್ಟಾಚಾರವನ್ನು ಬಹಿರಂಗವಾಗಿ ವಿರೋಧಿಸಿದರು. ತಿರುವಿದಾಂಕೂರಿನ ದಿವಾನರಾಗಿದ್ದ ಪಿ.ರಾಜಗೋಪಾಲಾಚಾರಿಯನ್ನು ಕಟುವಾಗಿ ಟೀಕಿಸಿ ಒಂದು ಲೇಖನ ಸರಣಿಯನ್ನು ಅವರು ಪ್ರಕಟಿಸಿದರು. ಇದರಿಂದಾಗಿ ರಾಮಕೃಷ್ಣ ಪಿಳ್ಳೈಯವರನ್ನು ತಿರುವಿದಾಂಕೂರಿನಿಂದ ಗಡಿಪಾರು ಮಾಡಿದರಲ್ಲದೆ ಸ್ವದೇಶಾಭಿಮಾನಿ ಪತ್ರಿಕೆಯನ್ನು ನಿಷೇಧಿಸಿದರು.*

## ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ

ಸಮಾಜವಾದಿ ಆಶಯಗಳಿಂದ ಆಕರ್ಷಿತರಾದ ಕಾಂಗ್ರೆಸ್ಸಿನ ಕಾರ್ಯಕರ್ತರು 1934ರಲ್ಲಿ ಕೆ. ಕೇಳಪ್ಪನ್‌ರ ನೇತೃತ್ವದಲ್ಲಿ ಕೊಝಿಕ್ಕೋಡಿನಲ್ಲಿ ಸಭೆ ಸೇರಿದರು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನೊಳಗೆ ಒಂದು 'ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ'ಯನ್ನು ರೂಪಿಸಲು ಅವರು ತೀರ್ಮಾನಿಸಿದರು. ಪಿ. ಕೃಷ್ಣ ಪಿಳ್ಳೈ, ಇ.ಎಂ. ಶಂಕರನ್ ನಂಬೂದಿರಿಪ್ಪಾಡ್, ಎ.ಕೆ. ಗೋಪಾಲನ್ ಮೊದಲಾದವರು ಈ ವಿಭಾಗದ ನೇತೃತ್ವವನ್ನು ವಹಿಸಿದ್ದರು. ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಅನೇಕ ಕೃಷಿಕ ಹೋರಾಟಗಳು ಕೇರಳದಲ್ಲಿ ನಡೆದಿವೆ.

### *ಪುನ್ನಪ್ರ - ವಯಲಾರ್ ಹೋರಾಟ*

*ಇದು ತಿರುವಿದಾಂಕೂರು ದಿವಾನರಾಗಿದ್ದ ಸಿ.ಪಿ. ರಾಮಸ್ವಾಮಿ ಅಯ್ಯರ್ ರ ಸ್ವೇಚ್ಛಾಧಿಪತ್ಯಕ್ಕೆದುರಾಗಿ ಮತ್ತು ಜವಾಬ್ದಾರಿಯುತ ಆಡಳಿತವನ್ನು ಸ್ಥಾಪಿಸುವುದಕ್ಕಾಗಿ ನಡೆದ ಹೋರಾಟವಾಗಿದೆ. ಇದು ಆಲಪ್ಪುಳ ಜಿಲ್ಲೆಯ ಪುನ್ನಪ್ರ ಮತ್ತು ವಯಲಾರಿನಲ್ಲಿ ನಡೆದ ಹೋರಾಟವಾದ ಕಾರಣ ಪುನ್ನಪ್ರ -ವಯಲಾರ್ ಹೋರಾಟವೆಂದು ಪ್ರಸಿದ್ಧವಾಯಿತು. 1946 ರಲ್ಲಿ ಕೃಷಿಕರು ಮತ್ತು ಕಾರ್ಮಿಕರು ಒಟ್ಟಾಗಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಈ ಹೋರಾಟವನ್ನು ನಡೆಸಿದರು.*

*ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಮಲಬಾರು, ಕೊಚ್ಚಿ ಮತ್ತು ತಿರುವಿದಾಂಕೂರಿನಲ್ಲಿ ನಡೆದ ಜನಪರ ಚಳುವಳಿಗಳು ಮತ್ತು ಪ್ರಮುಖ ಘಟನೆಗಳನ್ನು ಸೇರಿಸಿ ಒಂದು ಫ್ಲಿಪ್ ಆಲ್ಬಮ್ ತಯಾರಿಸಿರಿ.*

**ಮಲಬಾರು**

**ಕೊಚ್ಚಿ**

**ತಿರುವಿದಾಂಕೂರು**

## ಸ್ವಾತಂತ್ರ್ಯಕ್ಕಾಗಿ ಮಹಿಳಾ ಚಳುವಳಿ



ಚಿತ್ರ 8.35 • ಗಾಂಧೀಜಿ

*"ನಮ್ಮ ಮಾತೃಭೂಮಿಯು ಜಗತ್ತಿನ ಅತ್ಯಂತ ಬಡ ರಾಷ್ಟ್ರಗಳಲ್ಲೊಂದಾಗಿದೆ. ಇಲ್ಲಿನ ನೂರು ಜನರಲ್ಲಿ ಮೂರೋ ನಾಲ್ಕೋ ಜನರಿಗೆ ಮಾತ್ರವೇ ಹೊಟ್ಟೆ ತುಂಬ ಉಣ್ಣಲು, ಬಟ್ಟೆ ಧರಿಸಲು ಸಾಧ್ಯವಿದೆಯಷ್ಟೆ. ಸೂಕ್ಷ್ಮವಾಗಿ ಪರಿಶೋಧಿಸಿದರೆ ಅದಕ್ಕೂ ಗತಿಯಿಲ್ಲದವರು ನಾವು. ಇದನ್ನು ನೀವು ಅರ್ಥ ಮಾಡಿಕೊಂಡರೆ ಆಹಾರವಿಲ್ಲದವರಿಗೆ ಮತ್ತು ತೀರಾ ಹಸಿವಿನಿಂದ ಬಳಲುತ್ತಿರುವವರಿಗೆ ಸಹಾಯ ಮಾಡಲು ನಿಮ್ಮಲ್ಲಿ ಅಧಿಕವೆಂದು ತೋರುವುದರಲ್ಲಿ ಒಂದು ಪಾಲನ್ನು ನನಗೆ ನೀಡಿರಿ. ನಾನು ಅದನ್ನು ವಸ್ತ್ರವಾಗಿ ಮತ್ತು ಆಹಾರವಾಗಿ ಬದಲಾಯಿಸಿ ಅಗತ್ಯವಿರುವ ಕೈಗಳಿಗೆ ಮತ್ತು ಬಾಯಿಗಳಿಗೆ ತಲುಪಿಸುವೆನು. ನಿಮ್ಮ ದಯೆಯು ಕನಿಷ್ಠ ಒಂದು ಹೊಟ್ಟೆಯನ್ನು ತುಂಬಿಸುವುದಾದರೆ, ಒಬ್ಬರ ನಗ್ನತೆಯನ್ನು ಮುಚ್ಚುವುದಾದರೆ, ಈ ಪರಿಸ್ಥಿತಿಯಲ್ಲಿ ಮಾಡಬಹುದಾದ ಮತ್ತೊಂದು ಸತ್ಕಾರ್ಯವಿಲ್ಲ". ಮಹಿಳೆಯರಿಂದ ತುಂಬಿದ್ದ ವಡಗರದ ಸಾರ್ವಜನಿಕ ಸಭೆಯಲ್ಲಿ ಮಹಾತ್ಮ ಗಾಂಧಿಯವರು ಹೀಗೆಂದಾಗ ಅನೇಕ ಜನರು ಅಪರಾಧಿ ಭಾವನೆಯಿಂದ ತಲೆತಗ್ಗಿಸಿದರು.*

*ಒಬ್ಬಳು ಹುಡುಗಿ ಗಾಂಧೀಜಿಯ ಬಳಿಗೆ ಓಡಿ ಬಂದಳು.... ತನ್ನ ಚಿನ್ನದ ಬಳೆಗಳನ್ನು ಮತ್ತು ಕಿವಿಯೋಲೆಗಳನ್ನು ತೆಗೆದು ಚಾಚಿದಳು.. ಪಕ್ಕನೆ ನಿಶ್ಶಬ್ದರಾದ ಗಾಂಧೀಜಿ ಕೇಳಿದರು :! "ಈ ತೀರ್ಮಾನವು ಸ್ವಮನಸ್ಸಿನಿಂದಲೇ...?" "ಹೌದು" ಅವಳು ತಲೆಯಲ್ಲಾಡಿಸಿದಳು... ನಿನ್ನ ಹೆಸರೇನು ಮಗು?... ಅವಳು ಉತ್ತರಿಸಿದಳು: ಕೌಮುದಿ.... ತಂದೆ ತಾಯಿಯಲ್ಲಿ ಏನೆಂದು ಹೇಳುವೆ?... ಆಭರಣವಿಲ್ಲದ ಹುಡುಗಿ ಬೇಡವೆಂದು ವರನಾಗಿ ಬರಲಿರುವವನು ಹಠ ಹಿಡಿದರೆ ನೀನೇನು ಮಾಡುವೆ?.... " ಹಾಗೆ ಹಠ ಹಿಡಿಯುವ ಒಬ್ಬ ಪತಿ ನನಗೂ ಬೇಡವೆಂದು ನಾನೂ ಹಠ ಹಿಡಿಯುವೆನು".*



ಚಿತ್ರ 8.36 • ಕೌಮುದಿ ಟೀಚರ್

ಮೇಲಿನ ಐತಿಹಾಸಿಕ ಘಟನೆಯನ್ನು ಓದಿದಿರಲ್ಲವೆ? ಕೌಮುದಿ ಟೀಚರ್ ಅನಂತರದ ಜೀವನದಲ್ಲೆಂದೂ ಆಭರಣವನ್ನು ಧರಿಸದೆ ಖಾದಿ ಮಾತ್ರ ಧರಿಸಿ ಸರಳ ಜೀವನ ನಡೆಸಿದ ವ್ಯಕ್ತಿಯಾಗಿದ್ದಾರೆ. ಇವರಂತೆ ಅನೇಕ ಮಂದಿ ಕೇರಳೀಯ ಮಹಿಳೆಯರು ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ತ್ಯಾಗಮಯ ಚಟುವಟಿಕೆಗಳನ್ನು ನಡೆಸಿದ್ದಾರೆ.



ಚಿತ್ರ 8.37 • ಎ. ವಿ. ಕುಟ್ಟಿಮಾಳು ಅಮ್ಮ



ಚಿತ್ರ 8.38 • ಅಮ್ಮು ಸ್ವಾಮಿನಾಥನ್



ಚಿತ್ರ 8.39 • ಅಕ್ಕಮ್ಮ ಚೆರಿಯಾನ್



ಚಿತ್ರ 8.40 • ಆನಿಮಸ್ಕ್ರೀನ್

ಅಸಹಕಾರ ಮತ್ತು ನಿಯಮ ಉಲ್ಲಂಘನೆ ಮೊದಲಾದ ಚಳುವಳಿಗಳ ಮೂಲಕ ಭಾರತದ ರಾಷ್ಟ್ರೀಯ ಆಂದೋಲನವು ತೀವ್ರವಾಗಿದ್ದ ಸಂದರ್ಭದಲ್ಲಿ ಕೇರಳದಲ್ಲೂ ಮಹಿಳೆಯರು ಸಕ್ರಿಯವಾಗಿ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಗಾಂಧೀಜಿಯ ಸಂದೇಶವನ್ನು ಸ್ವೀಕರಿಸಿ ಉಪ್ಪು ತಯಾರಿ, ವಿದೇಶಿ ವಸ್ತ್ರಗಳ ಬಹಿಷ್ಕಾರ, ಖಾದಿ ಬಟ್ಟೆಗಳನ್ನು ನೇಯ್ದು ಬಳಸುವುದು ಮೊದಲಾದ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯರಾಗಿದ್ದರು. ಹೋರಾಟದ ಕಾಲದಲ್ಲಿ ಅಸ್ಪೃಶ್ಯತಾ ನಿವಾರಣೆ - ಹರಿಜನೋದ್ಧಾರ ಮೊದಲಾದ ಚಟುವಟಿಕೆಗಳಲ್ಲೂ ಮಹಿಳೆಯರು ಸಕ್ರಿಯರಾಗಿದ್ದರು. ಹೋರಾಟಗಳ ಭಾಗವಾಗಿ ಅನೇಕ ಮಹಿಳೆಯರು ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು. ಮಲಬಾರಿನಲ್ಲಿ ಎ ವಿ ಕುಟ್ಟಿಮಾಳು ಅಮ್ಮ ಮತ್ತು ಅಮ್ಮು ಸ್ವಾಮಿನಾಥನ್, ತಿರುವಿದಾಂಕೂರಿನಲ್ಲಿ ಅಕ್ಕಮ್ಮ ಚೆರಿಯಾನ್, ಆನಿಮಸ್ಕ್ರೀನ್ ಮೊದಲಾದವರು ಈ ಕಾಲಘಟ್ಟದಲ್ಲಿನ ರಾಷ್ಟ್ರೀಯ ಹೋರಾಟಗಳಿಗೆ ನೇತೃತ್ವವನ್ನು ನೀಡಿದರು.



ಚಿತ್ರ 8.41 • ಸಿ. ಕುಂಞಿಕ್ಕಾವಮ್ಮ

### *ಸಿ. ಕುಂಞಿಕ್ಕಾವಮ್ಮ*

*ಗಾಂಧೀಜಿ ಮೊದಲ ಬಾರಿ ಕೇರಳವನ್ನು ಸಂದರ್ಶಿಸಿದಾಗ, ಚಿನ್ನದ ನೂಲಿನಲ್ಲಿ ಪೋಣಿಸಿದ ಒಂದು ತುಳಸಿ ಮಾಲೆಯನ್ನು ಮಗನಿಂದ ಗಾಂಧೀಜಿಯ ಕೊರಳಿಗೆ ತೊಡಿಸಿದರು. "ಉಡುಗೊರೆಯನ್ನು ಸ್ವೀಕರಿಸಬೇಕಿದ್ದರೆ ಜೀವನಪರ್ಯಂತ ಖಾದಿ ಬಟ್ಟೆಗಳನ್ನು ಮಾತ್ರ ಧರಿಸುತ್ತೇನೆಂದು ಪ್ರತಿಜ್ಞೆ ಮಾಡಬೇಕು" ಎಂದು ಗಾಂಧೀಜಿ ಸಲಹೆ ನೀಡಿದರು. ಆ ಪ್ರತಿಜ್ಞೆಯನ್ನು ಜೀವನಪರ್ಯಂತ ಪಾಲಿಸಿದರಲ್ಲದೆ ಹೋರಾಟಗಳ ಭಾಗವಾಗಿ ಅನೇಕ ಸಂದರ್ಭಗಳಲ್ಲಿ ಸೆರೆಮನೆವಾಸವನ್ನೂ ಅನುಭವಿಸಿದರು. 1938 ರಲ್ಲಿ ಕೇರಳ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆಯಾಗಿ ಆಯ್ಕೆಯಾದರು. ಹರಿಜನೋದ್ಧಾರ, ಖಾದಿ ಪ್ರಚಾರ ಮೊದಲಾದವುಗಳಲ್ಲೂ ಸಕ್ರಿಯರಾಗಿದ್ದರು.*

*"ಕೇರಳದಲ್ಲಿನ ರಾಷ್ಟ್ರೀಯ ಚಳುವಳಿಗಳು ಮತ್ತು ಮಹಿಳೆಯರ ಪಾಲ್ಗೊಳ್ಳುವಿಕೆ" ಎಂಬ ವಿಷಯದ ಆಧಾರದಲ್ಲಿ ವಿಚಾರಗೋಷ್ಠಿಯನ್ನು ಆಯೋಜಿಸಿರಿ.*

## ರಾಜ್ಯ ರೂಪೀಕರಣ

*"ಭೌಗೋಳಿಕ, ಭಾಷಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಘಟಕಗಳ ಆಧಾರದಲ್ಲಿ ಕೇರಳದ ಭಾಗಗಳಾಗಿ ಪರಿಗಣಿಸಬಹುದಾದ ತಿರುವಿದಾಂಕೂರು ಮತ್ತು ಕೊಚ್ಚಿ ಎಂಬೀ ದೇಶಿಯ ರಾಜ್ಯಗಳು, ಬ್ರಿಟಿಷ್ ಭಾರತದ ಪ್ರದೇಶಗಳು ಮತ್ತು ಮಾಹಿಯನ್ನು ಒಗ್ಗೂಡಿಸಿ ಭಾರತ ಒಕ್ಕೂಟದಲ್ಲಿ ಒಳಗೊಳ್ಳುವ ಸ್ವ- ಆಡಳಿತ ಘಟಕವಾಗಿ ಸಂಘಟಿಸಬೇಕು... ಈ ಘಟಕದ ಆಡಳಿತದ ಎಲ್ಲಾ ಅಧಿಕಾರಗಳೂ ಜನರಲ್ಲಿ ನಿಕ್ಷಿಪ್ತವಾಗಿರಬೇಕು"*

[1947 ರಲ್ಲಿ ತ್ರಿಶೂರಿನಲ್ಲಿ ನಡೆದ ಐಕ್ಯಕೇರಳ ಸಮಾವೇಶದ ಗೊತ್ತುವಳಿಯಿಂದ]

ಮೇಲೆ ನೀಡಿರುವ ಗೊತ್ತುವಳಿಯ ಬೇಡಿಕೆಗಳನ್ನು ಓದಿದಿರಲ್ಲವೆ? ಇದು ವಿಭಿನ್ನ ಆಡಳಿತ ವಿಭಾಗಗಳಾಗಿದ್ದ ಕೇರಳವನ್ನು ಒಗ್ಗೂಡಿಸಿ ಕೇರಳ ರಾಜ್ಯವನ್ನು ರೂಪಿಸಲಿರುವ ನಿರ್ಣಯವಾಗಿದೆ. ಐಕ್ಯ ಕೇರಳ ರೂಪೀಕರಣಕ್ಕೆ ಕಾರಣವಾದ ಪ್ರಧಾನ ಘಟನೆಗಳನ್ನು ಪರಿಶೀಲಿಸೋಣ.

1921 ರಲ್ಲಿ ಒಟ್ಟಪಾಲಂನಲ್ಲಿ ನಡೆದ ಅಖಿಲ ಕೇರಳ ಪ್ರಾಂತ್ಯ ಸಮ್ಮೇಳನದಲ್ಲಿ ಮಲಬಾರು, ಕೊಚ್ಚಿ ಮತ್ತು ತಿರುವಿದಾಂಕೂರು ಎಂಬೆಡೆಗಳಿಂದಿರುವ ಪ್ರತಿನಿಧಿಗಳು ಭಾಗವಹಿಸಿದ್ದರು. 1928 ರಲ್ಲಿ ಜವಾಹರ್‌ಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆದ ಪಯ್ಯನ್ನೂರು ಕಾಂಗ್ರೆಸ್ ಸಮ್ಮೇಳನದಲ್ಲಿ, ಭವಿಷ್ಯದಲ್ಲಿ ಸ್ವತಂತ್ರ ಭಾರತದ ಸಂವಿಧಾನವನ್ನು ರಚಿಸುವಾಗ ಕೇರಳವನ್ನು ಒಂದು ಪ್ರತ್ಯೇಕ ರಾಜ್ಯವಾಗಿ ಪುನಃರಚಿಸಬೇಕೆಂದು ಒತ್ತಾಯಿಸಲಾಯಿತು. ಇದರ ಭಾಗವಾಗಿ ಐಕ್ಯ ಕೇರಳದ ಗುರಿಯನ್ನು ಸಾಧಿಸುವುದಕ್ಕಾಗಿ ಸಮಿತಿಯೊಂದನ್ನು ರೂಪಿಸಿದರಲ್ಲದೆ ವಿವಿಧ ಸ್ಥಳಗಳಲ್ಲಿ ಅದರ ಸಮಾವೇಶಗಳನ್ನೂ ನಡೆಸಿದರು. 1949 ಜುಲೈ 1 ರಂದು ತಿರುವಿದಾಂಕೂರು ಮತ್ತು ಕೊಚ್ಚಿಯನ್ನು ಒಗ್ಗೂಡಿಸಿ ತಿರು-ಕೊಚ್ಚಿ ಯನ್ನು ರೂಪಿಸಿದ್ದು ಕೇರಳ ರಾಜ್ಯವೆಂಬ ಗುರಿಯೆಡೆಗಿರುವ ಪ್ರಮುಖ ಹೆಜ್ಜೆಯಾಗಿತ್ತು.



മലയാളിക്ലബ്ബ് ഭാരവാഹികളുടെ
ഒരു അപേക്ഷ.

അല്ലയോ കേരളീയ മഹാജനങ്ങളെ,

ഇവിടെയുള്ള മലയാളികളായ ചില പൌരപ്രമാണികളുടെയും വിദ്യാത്ഥികളുടെയും ഉത്സാഹഫലമായ പ്രസ്തുത സ്ഥാപനം ഉണ്ടായിട്ട് ഇപ്പോൾ ഏകദേശം 20 വഷമായി. ഈ പട്ടണത്തിൽ പലെ ആവശ്യാത്ഥം വന്നുചേരുന്ന കേരളീയരുടെ സംഖ്യ വദ്ധിച്ചുവന്നതോടുകൂടി, അവക്ക് പരസ്പര സമ്മേളനത്തിനുള്ള സൌകയ്യവും സ്വജന്മഭൂമിയേയും സമുദായത്തെയും സംബന്ധിച്ച കായ്യങ്ങളിൽ ഏകോപിച്ച വിചാരണയും പ്രവൃത്തിയും അത്യന്താപേക്ഷിതമായിത്തീന്നു. വിദ്യാത്ഥികളുടെ സംഗതിയിൽ ഇവ ഒഴിച്ചുകൂടാത്തവതന്നെയാണെന്ന് ഏതൊരു നാഗരികനും സമ്മതിക്കുന്നതുമാണ്. ഉയന്തരം വിദ്യാഭ്യാസത്തിന്നുവേണ്ടി ഇവിടെ വരുന്ന മലയാളികളുടെ എണ്ണം കൊല്ലംതോറും പതിന്മടങ്ങു വദ്ധിക്കുന്നതുമുണ്ട്. അവർ അവിടവിടെ ഓരോ വിദ്യാമന്ദിരങ്ങളിൽ ചിന്നിച്ചിതറിക്കിടക്കുന്നതുകൊണ്ട്, ഇവിടെയുള്ള കാലത്തോളം അന്യോന്യം കണ്ടു പരിചയപ്പെടുവാനൊ, ഉൽകൃഷ്ടവിദ്യാഭ്യാസത്തിന്റെ പ്രത്യക്ഷചിഹ്നമായ നിത്യസൌഹൃദത്തെ സമ്പാദിപ്പാനൊ ഇടയാകുന്നില്ല. വിദ്യാഭ്യാസശേഷമാകട്ടെ, ഈ ദേശം വിട്ടുപോകുന്നതുകൊണ്ട് അവരുടെ അനന്തരഗാമികളെക്കുറിച്ച് അറിയുവാൻ മാഗ്ഗവുമില്ല. ഈ വക ന്യൂനതകൾ എന്നന്നേയ്ക്കും പരിഹരിക്കേണ്ടമെന്നായിരുന്നു ക്ലബ്ബിന്റെ കാരണഭൂതന്മാരുടെ ഉദ്ദേശമെന്നു പ്രത്യേകിച്ചു പറയേണ്ടതില്ലല്ലൊ. ജാതിമതവ്യത്യാസം കൂടാതെ മലയാളികളായ എല്ലാവക്കും ഇതിലെ അംഗമാവാ

*ಐಕ್ಯ ಕೇರಳ ಚಳುವಳಿಗೆ ಸಂಬಂಧಿಸಿ ಮದ್ರಾಸಿನ ಮಲೆಯಾಳಿ ಕ್ಲಬ್ ಹೊರಡಿಸಿದ ಒಂದು ಕರಪತ್ರ*



*ಚಿತ್ರ 8.42 • ಕೊತಿಕಲ್ಲು*

*ಕೊಚ್ಚಿ-ತಿರುವಿದಾಂಕೂರು ದೇಶಿಯ ರಾಜ್ಯಗಳ ಗಡಿಯಲ್ಲಿ ಸ್ಥಾಪಿಸಿದ್ದ ಕಲ್ಲುಗಳನ್ನು ಕೊತಿಕಲ್ಲುಗಳು ಎಂದು ಕರೆಯುತ್ತಾರೆ. 'ಕೊ' ಎಂಬುದು ಕೊಚ್ಚಿಯನ್ನು, 'ತಿ' ಎಂಬುದು ತಿರುವಿದಾಂಕೂರನ್ನು ಸೂಚಿಸುತ್ತದೆ.*




*ಚಿತ್ರ 8.43 • ಕೇರಳ*

ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷೆಗಳ ಆಧಾರದಲ್ಲಿ ರಾಜ್ಯಗಳನ್ನು ಪುನಃರಚಿಸಲು ಫಜಲ್ ಅಲಿ ಆಯೋಗವನ್ನು ರೂಪಿಸಿದರು. ಆಯೋಗದ ಆದೇಶದಂತೆ ಮಲಬಾರು ಮತ್ತು ತಿರುಕೊಚ್ಚಿಯನ್ನು ಒಗ್ಗೂಡಿಸಿ ಕೇರಳ ರಾಜ್ಯವು 1956 ನವೆಂಬರ್ 1 ರಂದು ಅಸ್ತಿತ್ವಕ್ಕೆ ಬಂತು. ತಿರುವಿದಾಂಕೂರಿನ ಭಾಗವಾಗಿದ್ದ ತೋವಾಳ, ಅಗಸ್ತೀಶ್ವರಂ, ಕಲ್ಕುಳಂ, ವಿಲವನ್‌ಕೋಡ್ ಎಂಬೀ ತಾಲೂಕುಗಳನ್ನು ಮದ್ರಾಸ್ ಪ್ರಾಂತ್ಯಕ್ಕೆ (ಇಂದಿನ ತಮಿಳುನಾಡು) ಸೇರಿಸಿದರು. ದಕ್ಷಿಣ ಕರ್ನಾಟಕದ ಭಾಗವಾಗಿದ್ದ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಿದರು.



*ಚಿತ್ರ 8.44 • ಇ.ಎಂ.ಎಸ್. ನಂಬೂದಿರಿಪ್ಪಾಡ್*

*ಮಲಯಾಳ ಭಾಷೆಯನ್ನು ಮಾತನಾಡುವವರಿಗಾಗಿ ಒಂದು ರಾಜ್ಯವೆಂಬ ಗುರಿಯೊಂದಿಗಿನ ಐಕ್ಯ ಕೇರಳ ಚಳುವಳಿಯ ಚಟುವಟಿಕೆಗಳು ಮತ್ತು ಕೇರಳ ರಾಜ್ಯ ರಚನೆಯನ್ನು ಒಳಪಡಿಸಿ ಒಂದು ಡಿಜಿಟಲ್ ಸಂಚಿಕೆಗೆ ಅವಶ್ಯಕವಾದ ಸ್ಕ್ರಿಪ್ಟ್ ತಯಾರಿಸಿರಿ.*

1957 ಫೆಬ್ರವರಿ ಮಾರ್ಚ್ ತಿಂಗಳುಗಳಲ್ಲಿ ಸಾರ್ವಜನಿಕ ಚುನಾವಣೆಯು ನಡೆದು ಏಪ್ರಿಲ್ 5 ರಂದು ಇ.ಎಂ.ಎಸ್. ನಂಬೂದಿರಿಪ್ಪಾಡ್ ರ ನೇತೃತ್ವದಲ್ಲಿರುವ ಸರಕಾರವು ಕೇರಳದಲ್ಲಿ ಅಧಿಕಾರಕ್ಕೆ ಬಂತು.

## ಮುಂದುವರಿದ ಚಟುವಟಿಕೆಗಳು

- 'ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದರಲ್ಲಿ ಪ್ರಾದೇಶಿಕ ಹೋರಾಟಗಳ ಪಾತ್ರ' ಎಂಬ ವಿಷಯದಲ್ಲಿ ಒಂದು ಪ್ರೋಜೆಕ್ಟ್ ತಯಾರಿಸಿರಿ.
- 19 ಮತ್ತು 20 ನೇ ಶತಮಾನಗಳಲ್ಲಿ ಕೇರಳದ ಸಾಮಾಜಿಕ ನವೋತ್ಥಾನಕ್ಕಾಗಿ ಪ್ರಯತ್ನಿಸಿದ ಸಮಾಜ ಸುಧಾರಕರ ಜೀವನವನ್ನು ಆಧರಿಸಿ ಒಂದು ಲಘು ಜೀವನ ಚರಿತ್ರೆ ಪುಸ್ತಕವನ್ನು ತಯಾರಿಸಿರಿ. ಚಿತ್ರಗಳು ಮತ್ತು ಸಂದೇಶಗಳನ್ನು ಸೇರಿಸಿ ಅದನ್ನು ಆಕರ್ಷಕಗೊಳಿಸಿರಿ.
- ಪೌರರ ಹಕ್ಕುಗಳಿಗಾಗಿ ಕೇರಳದಲ್ಲಿ ನಡೆದ ಹೆಚ್ಚಿನ ಹೋರಾಟಗಳನ್ನು ಕಂಡುಹಿಡಿದು ಅನ್ವೇಷಣ ಟಿಪ್ಪಣಿಯನ್ನು ತಯಾರಿಸಿರಿ.
- ಐಕ್ಯ ಕೇರಳ ಚಳುವಳಿ, ಕೇರಳ ರಾಜ್ಯ ರೂಪೀಕರಣ ಮೊದಲಾದವುಗಳನ್ನು ಒಳಗೊಳ್ಳಿಸಿ ಡಿಜಿಟಲ್ ಸಂಚಿಕೆಯನ್ನು ತಯಾರಿಸಿರಿ.

ಅಧ್ಯಾಯ 9

# ಪ್ರಜಾಪ್ರಭುತ್ವ : ಅರ್ಥ ಮತ್ತು ವ್ಯಾಪ್ತಿ






*ಚಿತ್ರ 9.1*

ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಮಹತ್ವವನ್ನು ಸೂಚಿಸುವ ಸಂಭಾಷಣೆಯನ್ನು ಮೇಲೆ ಕೊಡಲಾಗಿದೆ. ಸಂಭಾಷಣೆಯಿಂದ ಸ್ಪಷ್ಟವಾಗುವ ವಿಷಯಗಳು ಯಾವುವು?

•

•

•

ಚುನಾವಣೆ ಮತ್ತು ಚುನಾಯಿತ ಸರಕಾರ ಎಂಬುದು ಪ್ರಜಾಪ್ರಭುತ್ವದ ಕುರಿತಾದ ಸಾಮಾನ್ಯ ತಿಳುವಳಿಕೆಯಾಗಿದೆ.

ಇಷ್ಟು ಮಾತ್ರವೇ ಆಗಿದ್ದರೆ, ಈ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದು ಕರೆಯಬಹುದೆ? ಇಲ್ಲ, ಯಾಕೆಂದರೆ ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬಂದ ಸರ್ವಾಧಿಕಾರಿಗಳೂ ಚರಿತ್ರೆಯಲ್ಲಿ ದಾಖಲಾಗಿದ್ದಾರೆ.

### ಪ್ರಜಾಪ್ರಭುತ್ವ ಎಂದರೇನು?

ಪ್ರಜಾಪ್ರಭುತ್ವವು ಕೇವಲ ಒಂದು ಆಡಳಿತ ವ್ಯವಸ್ಥೆ ಮಾತ್ರವಲ್ಲ ಅದೊಂದು ಮೌಲ್ಯವೂ ಕೂಡಾ ಆಗಿದೆ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಹಕ್ಕುಗಳಂತಹ ಆಶಯಗಳು ಪ್ರಜಾಪ್ರಭುತ್ವದ ಅಡಿಪಾಯವಾಗಿವೆ. ಪ್ರಜಾಪ್ರಭುತ್ವವು ಈ ಮೌಲ್ಯಗಳನ್ನು ಗೌರವಿಸುವ ಮತ್ತು ಉಲ್ಲಂಘಿಸದ ಸರಕಾರಗಳನ್ನು ಹೊಂದಿದೆ. ಅಂದರೆ ಸರಕಾರದ ಕಾರ್ಯಚಟುವಟಿಕೆಗಳಿಗೆ ಮಿತಿಗಳಿವೆ ಎಂದರ್ಥ. ಸಂವಿಧಾನವು ಈ ಮಿತಿಗಳನ್ನು ನಿಗದಿಪಡಿಸುತ್ತದೆ. ಆದುದರಿಂದ ಆಧುನಿಕ ಪ್ರಜಾಪ್ರಭುತ್ವವನ್ನು ಸಾಂವಿಧಾನಿಕ ವ್ಯವಸ್ಥೆ ಎಂದೂ ಕರೆಯಬಹುದು.

ಇಂದಿನ ಪ್ರಜಾಪ್ರಭುತ್ವವು ದೀರ್ಘ ಪ್ರಕ್ರಿಯೆಯ ಮೂಲಕ ರೂಪುಗೊಂಡಿದೆ. ಪ್ರಜಾಪ್ರಭುತ್ವವು ಹೇಗೆ ವಿಕಾಸಗೊಂಡಿತೆಂಬುದನ್ನು ಪರಿಶೀಲಿಸೋಣ.

## ಗ್ರೀಸ್ : ಪ್ರಜಾಪ್ರಭುತ್ವದ ತಾಯ್ನಾಡು

ಪ್ರಾಚೀನ ಗ್ರೀಸ್ ನ ನಗರ-ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯು ಹುಟ್ಟಿಕೊಂಡಿತು. ಈ ನಗರ-ರಾಷ್ಟ್ರಗಳಲ್ಲಿ ಅಥೆನ್ಸ್ ಅತ್ಯಂತ ಪ್ರಮುಖವಾದುದಾಗಿದೆ. ಜನರು ಎಂಬರ್ಥ ಬರುವ 'ಡೆಮೋಸ್' (Demos), ಅಧಿಕಾರ ಎಂಬರ್ಥ ಬರುವ 'ಕ್ರಾಟೋಸ್' (Kratos) ಎಂಬೀ ಗ್ರೀಕ್ ಪದಗಳಿಂದ ಜನರ ಅಧಿಕಾರ ಎಂಬ ಅರ್ಥವನ್ನು ನೀಡುವ 'ಡೆಮೋಕ್ರಸಿ' ಎಂಬ ಪದವು ರೂಪುಗೊಂಡಿದೆ. ವೈಯಕ್ತಿಕ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಸಾಮರ್ಥ್ಯವನ್ನು ಗೌರವಿಸುವ ಸಂಸ್ಕೃತಿಯು ಅಥೆನ್ಸ್ ನಲ್ಲಿತ್ತು. ರಾಷ್ಟ್ರಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ನಾಗರಿಕರು ನೇರವಾಗಿ ತೆಗೆದುಕೊಳ್ಳುತ್ತಿದ್ದರು. ಅದೇ ರೀತಿ ಸೈನ್ಯದ ನಾಯಕರನ್ನು ಮತ್ತು ನ್ಯಾಯಾಧೀಶರನ್ನು ಜನರೇ ನೇರವಾಗಿ ಆಯ್ಕೆ ಮಾಡುತ್ತಿದ್ದರು. ಈ ರೀತಿಯಾಗಿ ಆಡಳಿತದಲ್ಲಿ ಮತ್ತು ಕಾನೂನು ರಚನೆಯಲ್ಲಿ ಜನರು ನೇರವಾಗಿ ಭಾಗವಹಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತ್ಯಕ್ಷ ಪ್ರಜಾಪ್ರಭುತ್ವ (Direct Democracy) ಎಂದು ಕರೆಯುತ್ತಾರೆ. ಆದರೆ ಅಥೆನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗುಲಾಮರು ಮತ್ತು ಮಹಿಳೆಯರ ಭಾಗವಹಿಸುವಿಕೆ ಇರಲಿಲ್ಲ ಎಂಬುದು ಅದರ ದೊಡ್ಡ ಕೊರತೆಯಾಗಿದೆ.



*ಚಿತ್ರ 9.2 • ಪುರಾತನ ಅಥೆನ್ಸ್*

## ಪ್ರತ್ಯಕ್ಷ ಪ್ರಜಾಪ್ರಭುತ್ವ : ಸಮಕಾಲೀನ ಜಗತ್ತಿನಲ್ಲಿ

ಪ್ರತ್ಯಕ್ಷ ಪ್ರಜಾಪ್ರಭುತ್ವವು ಅದರ ಪೂರ್ಣ ಅರ್ಥದಲ್ಲಿ ಇಂದು ಜಗತ್ತಿನಲ್ಲಿ ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಆದರೂ ಅದರ ಕೆಲವು ಅಂಶಗಳು ಇನ್ನೂ ಅನೇಕ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ ಅಸ್ತಿತ್ವದಲ್ಲಿವೆ. ಅವು ಯಾವುವೆಂದು ಪರಿಶೀಲಿಸೋಣ.

**ಪ್ರತ್ಯಕ್ಷ ಪ್ರಜಾಪ್ರಭುತ್ವ ವಿಧಾನಗಳು**

**ಪ್ರಜಾಭಿಪ್ರಾಯ ಸಂಗ್ರಹ (Referendum)**
ಶಾಸಕಾಂಗವು ಅಂಗೀಕರಿಸಿದ ಮಸೂದೆಗಳನ್ನು ಜನರ ಅನುಮೋದನೆಗಾಗಿ ಸಲ್ಲಿಸಿದ ನಂತರ ಮತ ಚಲಾಯಿಸುವ ಪ್ರಕ್ರಿಯೆ.

**ಹಿಂದಕ್ಕೆ ಕರೆಯುವುದು (Recall)**
ಜನಪ್ರತಿನಿಧಿಗಳ ಕಾರ್ಯಕ್ಷಮತೆಯು ಕಳಪೆಯಾದಾಗ ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ. ಒಂದು ನಿರ್ದಿಷ್ಟ ಶೇಕಡಾ ಮತದಾರರು ಲಿಖಿತವಾಗಿ ವಿನಂತಿಸುವ ಮೂಲಕ ಇದನ್ನು ಜಾರಿಗೊಳಿಸಲಾಗುತ್ತದೆ.

**ಜನ ಮತಗಣನೆ (Plebiscite)**
ಬಹಳ ಗಂಭೀರವಾದ ಸಾರ್ವಜನಿಕ ಸಮಸ್ಯೆಗಳ ಕುರಿತು ಜನರ ನಿರ್ಧಾರಗಳನ್ನು ತಿಳಿದುಕೊಳ್ಳಲಿರುವ ವಿಧಾನ.

**ಉಪಕ್ರಮ (Initiative)**
ಶಾಸನ ನಿರ್ಮಾಣದಲ್ಲಿ ಜನರು ನೇರವಾಗಿ ಭಾಗವಹಿಸಲಿರುವ ವಿಧಾನ. ಜನರು ತಾವು ಆಗ್ರಹಿಸುವ ಶಾಸನದ ಕರಡು ಅಥವಾ ಪೂರ್ಣರೂಪವನ್ನು ಶಾಸನಸಭೆಗೆ ಸಮರ್ಪಿಸುತ್ತಾರೆ.

ಸ್ವಿಝರ್‌ಲ್ಯಾಂಡ್ ಪ್ರತ್ಯಕ್ಷ ಪ್ರಜಾಪ್ರಭುತ್ವ ಕಾರ್ಯವಿಧಾನಗಳು ಅಸ್ತಿತ್ವದಲ್ಲಿರುವ ರಾಷ್ಟ್ರವಾಗಿದೆ.

ವಿಶಾಲವಾದ ಮತ್ತು ಜನಸಂಖ್ಯೆ ಹೆಚ್ಚಿರುವ ದೇಶಗಳಲ್ಲಿ ಗ್ರೀಕ್ ಮಾದರಿಯಲ್ಲಿರುವ ಪ್ರತ್ಯಕ್ಷ ಪ್ರಜಾಪ್ರಭುತ್ವವು ಅಪ್ರಾಯೋಗಿಕವಾಯಿತು. ಹೀಗಾಗಿ ಆಡಳಿತ ನಡೆಸಲು ಜನರು ಅವರ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪರೋಕ್ಷ ಪ್ರಜಾಪ್ರಭುತ್ವ ಅಥವಾ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವೀಕರಿಸಲಾಯಿತು. ಈ ವ್ಯವಸ್ಥೆಯ ವಿಶೇಷತೆಗಳನ್ನು ನಾವು ಪರಿಶೀಲಿಸೋಣ.

*ಆಧುನಿಕ ಜಗತ್ತಿನಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡ್ಡಿಯಾಗುವ ಘಟಕಗಳ ಕುರಿತು ಪ್ಯಾನಲ್ ಚರ್ಚೆಯನ್ನು ಆಯೋಜಿಸಿರಿ.*

## ಪರೋಕ್ಷ ಪ್ರಜಾಪ್ರಭುತ್ವ ಅಥವಾ ಪ್ರಾತಿನಿಧಿಕ ಪ್ರಜಾಪ್ರಭುತ್ವ

**(Indirect Democracy or Representative Democracy)**

ಪ್ರಾತಿನಿಧಿಕ ಪ್ರಜಾಪ್ರಭುತ್ವ ಅಥವಾ ಪರೋಕ್ಷ ಪ್ರಜಾಪ್ರಭುತ್ವವು ಆಡಳಿತ ನಡೆಸಲು ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಒಂದು ವ್ಯವಸ್ಥೆಯಾಗಿದೆ. ನಮಗೆ ಪರಿಚಿತವಾಗಿರುವ ಪ್ರಾತಿನಿಧಿಕ ಪ್ರಜಾಪ್ರಭುತ್ವವು ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನಗಳಲ್ಲಿ ಯುರೋಪಿನಲ್ಲಿ ಆರಂಭವಾಯಿತು. ಬ್ರಿಟಿಷ್ ಸಂಸತ್ತಿನ ಬೆಳವಣಿಗೆಯು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಉದಯಕ್ಕೆ ಕಾರಣವಾಯಿತು. ರಾಜಾಡಳಿತದೊಂದಿಗಿನ ನಿರಂತರ ಹೋರಾಟಗಳ ಮೂಲಕ ಬ್ರಿಟಿಷ್ ಸಂಸದೀಯ ಪ್ರಜಾಪ್ರಭುತ್ವವು ಬಲಿಷ್ಠವಾಯಿತು. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತಿನೊಂದಿಗೆ ಸಾಮೂಹಿಕವಾಗಿ ಜವಾಬ್ದಾರಿಯನ್ನು ಹೊಂದಿರುವ ಸಚಿವ ಸಂಪುಟವು ಆಡಳಿತವನ್ನು ನಡೆಸುತ್ತದೆ. ವಯಸ್ಕ ಮತದಾನದ ಹಕ್ಕು ಮತ್ತು ನಾಗರಿಕ ಹಕ್ಕುಗಳು ಬ್ರಿಟಿಷ್ ಸಂಸದೀಯ ಪ್ರಜಾಪ್ರಭುತ್ವ ಇತಿಹಾಸದ ಮೈಲುಗಲ್ಲುಗಳಾಗಿವೆ. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬೀ ಫ್ರೆಂಚ್ ಕ್ರಾಂತಿಯ ಆಶಯಗಳು ಪ್ರಾತಿನಿಧಿಕ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಹೆಚ್ಚಿನ ಕೊಡುಗೆಗಳನ್ನು ನೀಡಿವೆ.

*ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಜಾಪ್ರಭುತ್ವವನ್ನು ಹೋಲಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಪ್ರತ್ಯಕ್ಷ ಪ್ರಜಾಪ್ರಭುತ್ವ | ಪರೋಕ್ಷ ಪ್ರಜಾಪ್ರಭುತ್ವ |
|---|---|
| • *ಜನರು ನೇರವಾಗಿ ಆಡಳಿತ ನಡೆಸುತ್ತಾರೆ.* | • *ಜನರು ಪ್ರತಿನಿಧಿಗಳ ಮೂಲಕ ಆಡಳಿತ ನಡೆಸುತ್ತಾರೆ.* |
| • | • |

## ಸಂಸದೀಯ ವ್ಯವಸ್ಥೆ (ಪಾರ್ಲಿಮೆಂಟರಿ ವ್ಯವಸ್ಥೆ) ಮತ್ತು ಅಧ್ಯಕ್ಷೀಯ ವ್ಯವಸ್ಥೆ (ಪ್ರೆಸಿಡೆನ್ಶಿಯಲ್ ವ್ಯವಸ್ಥೆ)

ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಎರಡು ಮಾದರಿಗಳು ಪ್ರಚಾರದಲ್ಲಿವೆ. ಸಂಸದೀಯ ವ್ಯವಸ್ಥೆ ಮತ್ತು ಅಧ್ಯಕ್ಷೀಯ ವ್ಯವಸ್ಥೆ. ಕಾರ್ಯಾಂಗ ಮತ್ತು ಶಾಸಕಾಂಗಗಳೊಳಗಿನ ಸಂಬಂಧಗಳ ಆಧಾರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಈ ರೀತಿಯಲ್ಲಿ ವರ್ಗೀಕರಿಸಲಾಗಿದೆ. ಅವುಗಳ ವಿಶೇಷತೆಗಳನ್ನು ಪರಿಶೀಲಿಸೋಣ.

## ಸಂಸದೀಯ ವ್ಯವಸ್ಥೆಯ (ಪಾರ್ಲಿಮೆಂಟರಿ ವ್ಯವಸ್ಥೆ) ವಿಶೇಷತೆಗಳು

- ಶಾಸಕಾಂಗವು ಕಾರ್ಯಾಂಗವನ್ನು ನಿಯಂತ್ರಿಸುತ್ತದೆ.
- ರಾಷ್ಟ್ರಾಧ್ಯಕ್ಷರ ಅಧಿಕಾರಗಳು ನಾಮಮಾತ್ರವಾಗಿರುತ್ತದೆ.
- ರಾಜ/ರಾಣಿ/ಅಧ್ಯಕ್ಷರು ರಾಷ್ಟ್ರದ ಮುಖ್ಯಸ್ಥರಾಗಿರುತ್ತಾರೆ.
- ಪ್ರಧಾನಮಂತ್ರಿಯು ಆಡಳಿತದ ಮುಖ್ಯಸ್ಥರಾಗಿರುತ್ತಾರೆ.
- ಶಾಸನಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷದ ನಾಯಕರು ಪ್ರಧಾನಮಂತ್ರಿಯಾಗುತ್ತಾರೆ.
- ಪ್ರಧಾನಮಂತ್ರಿಯ ನೇತೃತ್ವದಲ್ಲಿರುವ ಸಚಿವ ಸಂಪುಟವು ಶಾಸಕಾಂಗದಲ್ಲಿ ಸಾಮೂಹಿಕ ಜವಾಬ್ದಾರಿಯನ್ನು ಹೊಂದಿರುತ್ತದೆ.

## ಅಧ್ಯಕ್ಷೀಯ ವ್ಯವಸ್ಥೆಯ (ಪ್ರೆಸಿಡೆನ್ಸಿಯಲ್ ವ್ಯವಸ್ಥೆ) ವಿಶೇಷತೆಗಳು

- ಕಾರ್ಯಾಂಗ ಮತ್ತು ಶಾಸಕಾಂಗಗಳು ಪ್ರತ್ಯೇಕವಾಗಿರುತ್ತವೆ.
- ಅಧ್ಯಕ್ಷರು ರಾಷ್ಟ್ರದ ಮತ್ತು ಸರಕಾರದ ಮುಖ್ಯಸ್ಥರಾಗಿರುತ್ತಾರೆ.
- ಎಲ್ಲಾ ಕಾರ್ಯಕಾರಿ ಅಧಿಕಾರಗಳು ಅಧ್ಯಕ್ಷರಲ್ಲಿ ನಿಕ್ಷಿಪ್ತವಾಗಿರುತ್ತದೆ.
- ಅಧ್ಯಕ್ಷರನ್ನು ಜನರು ನೇರವಾಗಿ ಆಯ್ಕೆ ಮಾಡುತ್ತಾರೆ.
- ಅಧ್ಯಕ್ಷರು ಶಾಸಕಾಂಗಕ್ಕೆ ಜವಾಬ್ದಾರರಾಗಿರುವುದಿಲ್ಲ.

### *ಸಂಪುಟ ಸಭೆಯ ಸಾಮೂಹಿಕ ಜವಾಬ್ದಾರಿ*

*ಸಂಸದೀಯ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿ ನೇತೃತ್ವದ ಸಚಿವ ಸಂಪುಟವು ಶಾಸಕಾಂಗದೊಂದಿಗೆ ಸಾಮೂಹಿಕ ಜವಾಬ್ದಾರಿಯನ್ನು ಹೊಂದಿರುತ್ತದೆ. ಪ್ರತಿಯೊಬ್ಬ ಸಚಿವರೂ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ನಿರ್ಧಾರಗಳಿಗೆ ಸಂಪುಟವು ಸಾಮೂಹಿಕವಾಗಿ ಜವಾಬ್ದಾರಿಯನ್ನು ಹೊಂದಿರುತ್ತದೆ.*

*ಸಂಸದೀಯ ವ್ಯವಸ್ಥೆ ಮತ್ತು ಅಧ್ಯಕ್ಷೀಯ ವ್ಯವಸ್ಥೆಯ ಒಳಿತು ಮತ್ತು ಕೆಡುಕುಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿರಲು ಹಲವು ಘಟಕಗಳು ಒಟ್ಟು ಸೇರಬೇಕಾಗುತ್ತವೆ. ಅವುಗಳಲ್ಲಿ ಕೆಲವನ್ನು ಪರಿಚಯಿಸಿಕೊಳ್ಳೋಣ.

## ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಭೂತ ಘಟಕಗಳು

### ಸ್ವಾತಂತ್ರ್ಯ (Liberty)

ಪ್ರಜಾಪ್ರಭುತ್ವವನ್ನು ರಾಜಕೀಯ ಮತ್ತು ಸಾಮಾಜಿಕ ಕ್ರಮವಾಗಿ ಅಸ್ತಿತ್ವದಲ್ಲಿರಿಸಲು ಅಗತ್ಯವಾದ ಘಟಕಗಳಲ್ಲಿ ಸ್ವಾತಂತ್ರ್ಯವೂ ಒಂದಾಗಿದೆ. ನಿಯಂತ್ರಣಗಳ ಅಭಾವ ಎಂಬುದು ಸ್ವಾತಂತ್ರ್ಯದ ನಿರ್ವಚನವಾಗಿದೆ. ಅಂದರೆ ವ್ಯಕ್ತಿಗಳ ಮೇಲೆ ಯಾವುದೇ ಬಾಹ್ಯ ನಿಯಂತ್ರಣಗಳಿಲ್ಲದ ಸ್ಥಿತಿ. ಸ್ವಾತಂತ್ರ್ಯವು ಕ್ರಿಯಾತ್ಮಕ ಆಯಾಮವನ್ನೂ ಹೊಂದಿದೆ. ಈ ಅರ್ಥದಲ್ಲಿ ವ್ಯಕ್ತಿಗಳ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲಿರುವ ಅವಕಾಶವನ್ನು ಹೊಂದಿರುವ ಸ್ಥಿತಿ ಎಂದೂ ಸ್ವಾತಂತ್ರ್ಯವನ್ನು ನಿರ್ವಚಿಸಬಹುದು.

ಸಂಚಾರ ಸ್ವಾತಂತ್ರ್ಯ, ಸಂಘಟನೆಗಳನ್ನು ರೂಪಿಸಲಿರುವ ಸ್ವಾತಂತ್ರ್ಯ, ಸಭೆ ಸೇರುವ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿಗಳು ಪ್ರಮುಖ ಸ್ವಾತಂತ್ರ್ಯಗಳಾಗಿವೆ. ಇವುಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ.

## *ಅಭಿವ್ಯಕ್ತಿ ಸ್ವಾತಂತ್ರ್ಯ*



ಚಿತ್ರ 9.3 • ವಾಲ್ಟೇರ್

*"ನೀವು ಹೇಳಿದ್ದನ್ನು ನಾನು ಒಪ್ಪುವುದಿಲ್ಲ, ಆದರೆ ಅದನ್ನು ಹೇಳುವ ನಿಮ್ಮ ಹಕ್ಕಿಗಾಗಿ ನಾನು ಸಾಯುವವರೆಗೂ ಹೋರಾಡುತ್ತೇನೆ"*

*– ವಾಲ್ಟೇರ್*

*ಮೇಲೆ ಕೊಡಲಾದ ಮಾತುಗಳು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಸೂಚಿಸುತ್ತವೆ. ಮಾನವರು ತಮ್ಮ ಆಶಯಗಳನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ. ಸಂಭಾಷಣೆಯು ವ್ಯಕ್ತಿಗಳು ತಮ್ಮ ಆಶಯಗಳನ್ನು ವ್ಯಕ್ತಪಡಿಸಲು ಉಪಯೋಗಿಸುವ ಪ್ರಾಥಮಿಕ ಮಾರ್ಗವಾಗಿದೆಯಲ್ಲವೇ. ಒಬ್ಬ ನಿರ್ದೇಶಕರಿಗೆ ಸಂಬಂಧಿಸಿದಂತೆ ಸಿನಿಮಾವು ಆಶಯಗಳನ್ನು ವ್ಯಕ್ತಪಡಿಸಲಿರುವ ಮಾರ್ಗವಾಗಿದೆ. ಬರಹಗಾರನು ಪುಸ್ತಕಗಳ ಮೂಲಕ ತನ್ನ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸುತ್ತಾನೆ. ಅವುಗಳನ್ನು ನಿಷೇಧಿಸಿದರೆ ಜನರ ತಿಳಿದುಕೊಳ್ಳುವ ಹಕ್ಕನ್ನು ನಿಷೇಧಿಸಿದಂತಾಗುತ್ತದೆ. ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಆಶಯಗಳು, ಅಭಿಪ್ರಾಯಗಳ ಹಂಚಿಕೆ ಮತ್ತು ಮೌಲ್ಯಮಾಪನವು ಅತ್ಯಂತ ಮಹತ್ವದ್ದಾಗಿದೆ.*



ಚಿತ್ರ 9.4 • ಜೆ.ಎಸ್. ಮಿಲ್

*ಜೆ.ಎಸ್. ಮಿಲ್ ರ ಅಭಿಪ್ರಾಯದಲ್ಲಿ ಯಾವುದೇ ಆಶಯವು ಸಂಪೂರ್ಣವಾಗಿ ತಪ್ಪಲ್ಲ. ನಾವು ತಪ್ಪು ಎಂದು ಭಾವಿಸುವುದರಲ್ಲಿಯೂ ಕೂಡಾ ಸತ್ಯದ ಅಂಶಗಳು ಇರಬಹುದು. ನಾವು ತಪ್ಪು ಎಂದು ಭಾವಿಸುವ ಒಂದು ಆಶಯವನ್ನು ನಿಷೇಧಿಸಿದಾಗ ಅದರಲ್ಲಿ ಒಳಗೊಂಡಿರುವ ಸತ್ಯವನ್ನೂ ಕೂಡಾ ನಾವು ಕಳೆದುಕೊಳ್ಳುತ್ತೇವೆ.*

## ಸ್ವಾತಂತ್ರ್ಯ ಮತ್ತು ನಿಯಂತ್ರಣಗಳು

ನಿಯಂತ್ರಣಗಳ ಅಭಾವದಲ್ಲಿ ಸ್ವಾತಂತ್ರ್ಯವು ಪೂರ್ಣಗೊಳ್ಳುವುದಿಲ್ಲ. ಆದುದರಿಂದ ವ್ಯಕ್ತಿಗಳು ಮಾಡಬೇಕಾದ ಮತ್ತು ಮಾಡಬಾರದ ಕೆಲವು ಸೂಚನೆಗಳು ಹಾಗೂ ನಿಯಮಗಳು ಸಾಮಾಜಿಕ ಜೀವನಕ್ಕೆ ಅನಿವಾರ್ಯವಾಗಿವೆ. ಇದು ಇತರರ ಸ್ವಾತಂತ್ರ್ಯದ ಮೇಲಿನ ಅತಿಕ್ರಮಣವನ್ನು ನಿಯಂತ್ರಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಇತರರ ಸ್ವಾತಂತ್ರ್ಯವನ್ನು ಗೌರವಿಸುವ ಒಂದು ವ್ಯವಸ್ಥೆಯಲ್ಲಿ ಮಾತ್ರವೇ ಸ್ವಾತಂತ್ರ್ಯ ಎಂಬ ಮೌಲ್ಯವು ಅರ್ಥಪೂರ್ಣವಾಗಬಹುದು. ಸ್ವಂತ ಅಭಿಪ್ರಾಯಗಳು ಮತ್ತು ನಂಬಿಕೆಗಳು ಇತರ ಅಭಿಪ್ರಾಯಗಳಿಗಿಂತ ಹೆಚ್ಚು ಶಕ್ತಿಶಾಲಿ ಎಂಬ ಕಲ್ಪನೆಯು

ಸಂಘರ್ಷಕ್ಕೆ ದಾರಿಮಾಡಿಕೊಡುತ್ತದೆ. ಅಂತಹ ಸಂದರ್ಭಗಳಲ್ಲಿ ಕಾನೂನು ಮತ್ತು ರಾಜಕೀಯ ನಿಯಂತ್ರಣಗಳು ಅನಿವಾರ್ಯವಾಗುತ್ತವೆ.

*ವ್ಯಕ್ತಿಗಳು ತಮ್ಮ ಆಶಯಗಳನ್ನು ವ್ಯಕ್ತಪಡಿಸಲು ಉಪಯೋಗಿಸುವ ವಿವಿಧ ಮಾರ್ಗಗಳು ಯಾವುವು?*

- *ಸಂಭಾಷಣೆ*
- *ಚಿತ್ರಗಳು*
-
-

## ಸಮಾನತೆ (Equality)




*ಚಿತ್ರ 9.5*

ಸಮಾನತೆಯು ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯವಾದ ಮೌಲ್ಯವಾಗಿದೆ. ಧರ್ಮ, ಬಣ್ಣ, ಲಿಂಗ, ಜನಾಂಗ, ಭಾಷೆ, ರಾಷ್ಟ್ರೀಯತೆ ಇತ್ಯಾದಿಗಳ ಆಧಾರದಲ್ಲಿರುವ ತಾರತಮ್ಯಗಳೆಗೆದುರಾಗಿ ಜಗತ್ತಿನಲ್ಲಿರುವ ಎಲ್ಲಾ ಜನರೂ ಅದ್ವಿತೀಯ ಮೌಲ್ಯಯುತರೂ ಆಗಿದ್ದಾರೆಂಬ ದೃಷ್ಟಿಕೋನವೇ ಸಮಾನತೆಯಾಗಿದೆ. ಸಾರ್ವತ್ರಿಕ ಮಾನವ ಹಕ್ಕುಗಳು ಎಂಬ ಆಶಯದ ಹಿಂದಿರುವುದೂ ಸಮಾನತೆಯೇ ಆಗಿದೆ.

ಆದರೆ ಸಮಾನತೆ ಎಂದರೆ ಎಲ್ಲ ಸಂದರ್ಭಗಳಲ್ಲೂ ಎಲ್ಲರನ್ನೂ ಒಂದೇ ರೀತಿಯಲ್ಲಿ ಪರಿಗಣಿಸಬೇಕು ಎಂದಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅವರವರ ಸಾಮರ್ಥ್ಯಕ್ಕೆ ಅನುಸಾರವಾಗಿ ವಿಭಿನ್ನ ಪರಿಗಣನೆಗಳನ್ನು ನೀಡುವುದು ಸಮಾನತೆ ಎಂಬ ಆಶಯದ ಉಲ್ಲಂಘನೆ ಎಂದು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ, ಸಾಹಿತ್ಯಕ್ಕಾಗಿ ನೀಡುವ ಪ್ರಶಸ್ತಿಗಳನ್ನೋ, ಕ್ರೀಡಾಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗಾಗಿ ನೀಡುವ ಪದಕಗಳನ್ನೋ ಅಸಮಾನತೆ ಎಂದು ಹೇಳಲು ಸಾಧ್ಯವಿಲ್ಲ. ವಿಭಿನ್ನ ರೀತಿಯ ಪರಿಗಣನೆಗಳನ್ನು ನೀಡುವ ಮೂಲಕ ಸಮಾನತೆಯು ವಿಶಾಲವಾದ ಅರ್ಥವನ್ನು ಪಡೆಯುತ್ತದೆ.

### ಸಮಾನತೆಯ ಮೂರು ಆಯಾಮಗಳು (Three Dimensions of Equality)

| ರಾಜಕೀಯ ಸಮಾನತೆ | ಸಾಮಾಜಿಕ ಸಮಾನತೆ | ಆರ್ಥಿಕ ಸಮಾನತೆ |
|---|---|---|
| • ಮತದಾನದ ಹಕ್ಕು<br>• ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು<br>• ಸಾರ್ವಜನಿಕ ಹುದ್ದೆಯನ್ನು ಹೊಂದುವ ಹಕ್ಕು | • ತಾರತಮ್ಯ ಇಲ್ಲದಿರುವುದು<br>• ಸಮಾನ ಸ್ಥಾನಮಾನ<br>• ಸಮಾನ ಅವಕಾಶಗಳು | • ಉದ್ಯೋಗದ ಹಕ್ಕು<br>• ಸಮಾನ ಕೆಲಸಕ್ಕೆ ಸಮಾನ ವೇತನ<br>• ವಿಶ್ರಾಂತಿ ಪಡೆಯುವ ಹಕ್ಕು |

*"ಸಂಪೂರ್ಣ ಸಮಾನತೆ ಮತ್ತು ಸಾಮರ್ಥ್ಯಗಳಿಗೆ ವಿಶೇಷ ಮನ್ನಣೆ" ಎಂಬ ವಿಷಯದ ಕುರಿತು ಚರ್ಚೆಯನ್ನು ಆಯೋಜಿಸಿ ಟಿಪ್ಪಣಿಯನ್ನು ತಯಾರಿಸಿರಿ.*

## ನ್ಯಾಯ (Justice)

ನ್ಯಾಯವು ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳಲ್ಲಿ ಒಂದಾಗಿದೆ. ನ್ಯಾಯ ಎಂಬ ಪರಿಕಲ್ಪನೆಯು ಕಾಲಕ್ಕೆ ತಕ್ಕಂತೆ ಬದಲಾಗುತ್ತದೆ. ಆಧುನಿಕ ದೃಷ್ಟಿಕೋನದಲ್ಲಿ ನ್ಯಾಯ ಎಂದರೆ ಮಾನವ ಎಂಬ ನೆಲೆಯಲ್ಲಿ ಎಲ್ಲರಿಗೂ ಸಮಾನ ಮತ್ತು ಸರಿಯಾದ ಪರಿಗಣನೆಯನ್ನು ನೀಡುವುದು ಎಂದರ್ಥ.

### ನ್ಯಾಯದ ಮೂರು ತತ್ವಗಳು (Three Principles of Justice)

| ಸಮಾನರಿಗೆ ಸಮಾನ ಪರಿಗಣನೆ (Equal treatment for equals) | ಅನುಪಾತಿಕ ನ್ಯಾಯ (Proportionate justice) | ವಿಶೇಷ ಅವಶ್ಯಕತೆಗಳನ್ನು ಅಂಗೀಕರಿಸುವಿಕೆ (Recognition of special needs) |
|---|---|---|
| • ಮಾನವ ಎಂಬ ನೆಲೆಯಲ್ಲಿ ಎಲ್ಲ ವ್ಯಕ್ತಿಗಳು ಸಮಾನ ಹಕ್ಕು ಮತ್ತು ಸಮಾನ ಪರಿಗಣನೆಗೆ ಅರ್ಹರು.<br>• ವರ್ಗ, ಜಾತಿ, ಧರ್ಮ, ಲಿಂಗ, ವಂಶ ಎಂಬಿವುಗಳ ಆಧಾರದಲ್ಲಿ ಯಾವುದೇ ತಾರತಮ್ಯವನ್ನು ಮಾಡಬಾರದು. | • ಪ್ರತಿಯೊಬ್ಬರ ಸಾಮರ್ಥ್ಯ ಹಾಗೂ ಕೊಡುಗೆಗಳಿಗೆ ಆನುಪಾತಿಕವಾಗಿ ನ್ಯಾಯವನ್ನು ಒದಗಿಸಬೇಕು.<br>• ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪರಿಗಣಿಸುವುದರಲ್ಲಿ ಅನ್ಯಾಯವಿಲ್ಲ. | • ಅಸಮಾನತೆಯು ಇರುವ ಒಂದು ಸಮಾಜದಲ್ಲಿ ಅವಕಾಶ ವಂಚಿತರಿಗೆ ಹಾಗೂ ಹಿಂದುಳಿದವರಿಗೆ ವಿಶೇಷ ಹಕ್ಕುಗಳನ್ನು ನೀಡಿದರೆ ಮಾತ್ರ ಸಮಾನತೆಯನ್ನು ಅನುಭವಿಸಲು ಸಾಧ್ಯ.<br>• ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಮೀಸಲಾತಿಯಂತಹ ಕ್ರಮಗಳನ್ನು ಸ್ವೀಕರಿಸಿಕೊಳ್ಳಬಹುದು. |

*ನಿಮ್ಮ ಪ್ರದೇಶದಲ್ಲಿ ಸಮಾನ ನ್ಯಾಯವನ್ನು ಖಾತರಿಪಡಿಸಿಕೊಳ್ಳಲು ಸ್ವೀಕರಿಸಿಕೊಳ್ಳಲಾದ ಪ್ರತ್ಯೇಕ ಪರಿಗಣನೆಗಳು ಯಾವುವೆಂದು ಕಂಡುಕೊಂಡು ಬರೆಯಿರಿ.*

- *ವಿಶೇಷ ಸಾಮರ್ಥ್ಯದವರಿಗಾಗಿ ಬಸ್ಸಿನಲ್ಲಿ ಪ್ರತ್ಯೇಕ ಆಸನಗಳನ್ನು ಕಾಯ್ದಿರಿಸುವುದು.*
-

## ಹಕ್ಕುಗಳು (Rights)

ಪ್ರಜಾಪ್ರಭುತ್ವದ ಉಳಿವು ಮತ್ತು ಬೆಳವಣಿಗೆಗೆ ಹಕ್ಕುಗಳು ಅನಿವಾರ್ಯವಾಗಿವೆ. ಮಾನವರೆಂಬ ನೆಲೆಯಲ್ಲಿ ಗೌರವಯುತವಾದ ಮತ್ತು ಅರ್ಥಪೂರ್ಣವಾದ ಜೀವನವನ್ನು ನಡೆಸಲು ಅಗತ್ಯವಾದ ಸನ್ನಿವೇಶಗಳನ್ನು ಹಕ್ಕುಗಳು ಎನ್ನುತ್ತಾರೆ.

ನಾವು ಬಯಸುವ ಮತ್ತು ಆಗ್ರಹಿಸುವ ಎಲ್ಲವೂ ಹಕ್ಕಲ್ಲ. ಅದು ಕೇವಲ ಬೇಡಿಕೆಗಳಾಗಿವೆ. ಹಕ್ಕುಗಳು ಕಾನೂನು ಬದ್ಧವಾಗಿ ಅಂಗೀಕರಿಸಲಾದ ಬೇಡಿಕೆಗಳಾಗಿವೆ.

ಹಕ್ಕುಗಳು ರಾಷ್ಟ್ರ ರೂಪುಗೊಳ್ಳುವ ಮೊದಲೇ ಹುಟ್ಟಿಕೊಂಡಿವೆ ಮತ್ತು ನೈಸರ್ಗಿಕವಾದವುಗಳಾಗಿವೆ ಎಂದು ಅನೇಕ ಪ್ರಮುಖ ರಾಜಕೀಯ ಚಿಂತಕರು ಅಭಿಪ್ರಾಯ ಪಡುತ್ತಾರೆ. ಸ್ವಾತಂತ್ರ್ಯದ ಹಕ್ಕು, ಆಸ್ತಿಯ ಹಕ್ಕು ಮತ್ತು ಜೀವಿಸುವ ಹಕ್ಕು ಎಂಬಿವು ಪ್ರಮುಖ ನೈಸರ್ಗಿಕ ಹಕ್ಕುಗಳಾಗಿವೆ (Natural Rights).

ಹಕ್ಕುಗಳಿಗೆ ಕಾನೂನಾತ್ಮಕವಾಗಿ ಅಂಗೀಕಾರವನ್ನು ನೀಡುವುದರ ಭಾಗವಾಗಿ ಒಂದು ಹಕ್ಕುಪತ್ರವನ್ನು ಹೆಚ್ಚಿನ ದೇಶಗಳ ಸಂವಿಧಾನದಲ್ಲಿ ಸೇರಿಸಲಾಗಿದೆ. ಭಾರತದ ಸಂವಿಧಾನದ ಭಾಗ III ರಲ್ಲಿ ಪ್ರತಿಪಾದಿಸಲಾದ ಮೂಲಭೂತ ಹಕ್ಕುಗಳು ಇದಕ್ಕೆ ಉದಾಹರಣೆಗಳಾಗಿವೆ.

## ವಿವಿಧ ರೀತಿಯ ಹಕ್ಕುಗಳು

| ರಾಜಕೀಯ ಹಕ್ಕುಗಳು | ನಾಗರಿಕ ಹಕ್ಕುಗಳು |
|---|---|
| • ಮತದಾನದ ಹಕ್ಕು<br>• ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು<br>• ಸಾರ್ವಜನಿಕ ಹುದ್ದೆಯನ್ನು ಹೊಂದುವ ಹಕ್ಕು<br>• ಸರಕಾರವನ್ನು ವಿಮರ್ಶಿಸುವ ಹಕ್ಕು | • ಕಾನೂನಿನ ಮುಂದೆ ಸಮಾನತೆ<br>• ಮುಕ್ತ ಹಾಗೂ ನ್ಯಾಯಯುತ ವಿಚಾರಣೆಯ ಹಕ್ಕು<br>• ಸಭೆ ಸೇರುವ ಮತ್ತು ಸಂಘಟಿಸುವ ಹಕ್ಕು<br>• ಅಭಿಪ್ರಾಯ ಸ್ವಾತಂತ್ರ್ಯ |
| **ಆರ್ಥಿಕ ಹಕ್ಕುಗಳು** | **ಸಾಂಸ್ಕೃತಿಕ ಹಕ್ಕುಗಳು** |
| • ಕೆಲಸ ಮಾಡುವ ಹಕ್ಕು<br>• ಸಮರ್ಪಕ ವೇತನದ ಹಕ್ಕು<br>• ದೇಶದ ಸಂಪನ್ಮೂಲಗಳು ಮತ್ತು ಸಂಪತ್ತಿನ ಮೇಲೆ ಇರುವ ಸಮಾನ ಹಕ್ಕುಗಳು | • ಭಾಷೆ, ಲಿಪಿ ಎಂಬಿವುಗಳನ್ನು ಸಂರಕ್ಷಿಸಲಿರುವ ಹಕ್ಕು<br>• ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕು<br>• ಸ್ಥಳೀಯ ಜನರಿಗೆ ಅವರ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲಿರುವ ಹಕ್ಕು |



ಚಿತ್ರ 9.6

*ವಿವಿಧ ಹಕ್ಕುಗಳ ಕುರಿತು ಸಮಾಜದಲ್ಲಿ ಜನಜಾಗೃತಿಯನ್ನು ಮೂಡಿಸಲು ಅಗತ್ಯವಾದ ಘೋಷಣವಾಕ್ಯಗಳು, ಪ್ಲಕಾರ್ಡ್ ಗಳು, ಪೋಸ್ಟರುಗಳು, ಕಿರುಬರಹ ಎಂಬಿವುಗಳನ್ನು ತಯಾರಿಸಿರಿ.*

## ಕಾನೂನಿನ ಆಡಳಿತ (Rule of Law)

ಕಾನೂನಿನ ಆಡಳಿತವು ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳಲ್ಲಿ ಒಂದಾಗಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು ಮತ್ತು ಪ್ರತಿಯೊಬ್ಬರೂ ಕಾನೂನಿನ ಸಮಾನ ರಕ್ಷಣೆಗೆ ಅರ್ಹರು ಎಂಬುದು ಕಾನೂನಿನ ಆಡಳಿತದ ಸಾರವಾಗಿದೆ. ದೇಶದ ಸಾಮಾನ್ಯ ಕಾನೂನುಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತವೆ. ಯಾವುದೇ ಒಂದು ವಿಭಾಗಕ್ಕೆ ಮಾತ್ರ ಅನ್ವಯವಾಗುವ ಪ್ರತ್ಯೇಕ ಕಾನೂನುಗಳಿಲ್ಲ. ಅದೇ ರೀತಿಯಲ್ಲಿ ಸರಕಾರವು ಕಾನೂನು ವ್ಯವಸ್ಥೆಯಲ್ಲಿ ಸೂಚಿಸಲಾದ ಪ್ರಕ್ರಿಯೆ ಮತ್ತು ತತ್ವಗಳ ಮೂಲಕ ಮಾತ್ರ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಬಹುದು.



ಚಿತ್ರ 9.7

*"ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಕಾನೂನಿನ ಆಡಳಿತದ ಮಹತ್ವ" ಎಂಬ ವಿಷಯದ ಕುರಿತು ಚರ್ಚೆಯನ್ನು ಆಯೋಜಿಸಿರಿ.*

## *ಸಾಂವಿಧಾನಿಕತೆ* (Constitutionalism)

*ಎಲ್ಲಾ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಗಳು ಸಂವಿಧಾನದ ಪ್ರಕಾರ ಕಾರ್ಯನಿರ್ವಹಿಸುತ್ತವೆ. ಸಂವಿಧಾನವು ರಾಷ್ಟ್ರದ ಅಧಿಕಾರದ ಆಧಾರದಲ್ಲಿರುವ ಕಾನೂನುಗಳು, ಪೌರರ ಹಕ್ಕುಗಳು ಎಂಬಿವುಗಳನ್ನು ಪ್ರತಿಪಾದಿಸುವ ಮೂಲಭೂತ ದಾಖಲೆಯಾಗಿದೆ. ರಾಷ್ಟ್ರದ ಅಧಿಕಾರಗಳೊಂದಿಗೆ ಪೌರರ ಮೂಲಭೂತ ಹಕ್ಕುಗಳನ್ನು ಕೂಡಾ ಈ ವಿಚಾರದಲ್ಲಿ ಪ್ರತಿಪಾದಿಸಲಾಗಿದೆ. ಆದರೆ ಪೌರರ ಮೂಲಭೂತ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಲು ಸರಕಾರಕ್ಕೆ ಕೆಲವು ಇತಿಮಿತಿಗಳಿವೆ.*

## ಅಧಿಕಾರ ವಿಭಜನೆ
### (Separation of Powers)

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬೀ ವಿಭಾಗಗಳ ನಡುವಿನ ಅಧಿಕಾರದ ವಿಭಜನೆಯು ಅತ್ಯಂತ ಪ್ರಮುಖವಾದುದಾಗಿದೆ. ಈ ಮೂರು ಅಂಗಗಳು ಆಯಾ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಅಸ್ತಿತ್ವದಲ್ಲಿರುವುದರೊಂದಿಗೆ ಇತರ ಅಂಗಗಳ ಚಟುವಟಿಕೆಗಳನ್ನು ಪರಿಶೀಲಿಸುತ್ತವೆ. ಈ ಎಲ್ಲಾ ಅಧಿಕಾರಗಳು ಒಂದೇ ಅಂಗದಲ್ಲಿ ಕೇಂದ್ರೀಕೃತವಾಗಿದರೆ ಅದು ಸ್ವೇಚ್ಛಾಡಳಿತಕ್ಕೆ ಕಾರಣವಾಗುತ್ತದೆಯಲ್ಲದೆ ಜನರ ಸ್ವಾತಂತ್ರ್ಯಕ್ಕೂ ಹಕ್ಕುಗಳಿಗೂ ಅಪಾಯವನ್ನುಂಟುಮಾಡಬಹುದು.

## ಚುನಾವಣೆ ಮತ್ತು ಪ್ರಾತಿನಿಧ್ಯ
### (Election and Representation)

ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ಸಾಮಾನ್ಯವಾಗಿ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅನುಸರಿಸುತ್ತವೆ ಎಂಬುದನ್ನು ನಾವು ಈ ಮೊದಲೇ ಚರ್ಚಿಸಿದ್ದೇವಲ್ಲವೇ. ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಜನರ ಆಡಳಿತ ಎಂದರೆ ಜನಪ್ರತಿನಿಧಿಗಳು ಜನರಿಗಾಗಿ ಆಡಳಿತವನ್ನು ನಡೆಸುತ್ತಾರೆ ಎಂದರ್ಥ. ಚುನಾವಣೆಗಳು ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ಅಳವಡಿಸಿಕೊಂಡ ವ್ಯವಸ್ಥೆಯಾಗಿದೆ. ಚುನಾವಣೆಗಳು ಮುಕ್ತ, ನ್ಯಾಯಸಮ್ಮತ ಮತ್ತು ನಿಯಮಿತ ಅಂತರದಲ್ಲಿ ನಡೆಯಬೇಕು. ಇದಕ್ಕಾಗಿ ರಾಷ್ಟ್ರದ ಸಂವಿಧಾನದಲ್ಲಿ ಮತದಾನದ ಹಕ್ಕು, ಚುನಾವಣೆಗಳ ಮೇಲ್ವಿಚಾರಣೆ ಮೊದಲಾದವುಗಳಿಗೆ ಸಂಬಂಧಿಸಿದ ಮೂಲಭೂತ ನಿಬಂಧನೆಗಳು ಒಳಗೊಂಡಿರಬೇಕು.

## ಜಾತ್ಯತೀತತೆ (Secularism)

ಜಾತ್ಯತೀತತೆ ಎಂಬ ಆಶಯದ ಆಧಾರವು ರಾಷ್ಟ್ರ ಮತ್ತು ಮತದ ನಡುವಿನ ಸ್ಪಷ್ಟವಾದ ಬೇರ್ಪಡಿಸುವಿಕೆಯಾಗಿದೆ. ರಾಷ್ಟ್ರಕ್ಕೆ ಅಧಿಕೃತ ಮತ ಎಂಬುದಿಲ್ಲ. ಅದೇ ಸಂದರ್ಭದಲ್ಲಿ, ಪೌರರಿಗೆ ತಮಗೆ ಬೇಕಾದ ಯಾವುದೇ ಮತವನ್ನು ಅನುಸರಿಸಲಿರುವ ಸ್ವಾತಂತ್ರ್ಯವಿದೆ. ರಾಷ್ಟ್ರವು ಎಲ್ಲಾ ಮತಗಳನ್ನು ಸಮಾನವಾಗಿ ಪರಿಗಣಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ಜಾತ್ಯತೀತತೆಯನ್ನು ಎರಡು

ರೀತಿಯಲ್ಲಿ ಪ್ರಸ್ತುತಪಡಿಸುತ್ತದೆ. ಮೊದಲನೆಯದಾಗಿ ಅದು ಅಲ್ಪಸಂಖ್ಯಾತ ಅಥವಾ ಬಹುಸಂಖ್ಯಾತ ಎಂಬ ಬೇಧವಿಲ್ಲದೆ ಮತಗಳನ್ನು ಸಮಾನವಾಗಿ ಪರಿಗಣಿಸುತ್ತದೆ. ರಾಷ್ಟ್ರಕ್ಕೆ ಅಧಿಕೃತ ಮತವಿಲ್ಲದ ಕಾರಣ ಅದು ಯಾವುದೇ ಸಮುದಾಯದ ವಿರುದ್ಧ ಮತದ ಆಧಾರದಲ್ಲಿ ತಾರತಮ್ಯ ಮಾಡುವುದಿಲ್ಲ. ಎರಡನೆಯದಾಗಿ ಅದು ಪೌರರಿಗೆ ನಂಬಿಕೆಯ ಸ್ವಾತಂತ್ರ್ಯದ ಜೊತೆಗೆ ಸಮಾನ ನ್ಯಾಯ ಮತ್ತು ಹಕ್ಕುಗಳನ್ನು ಒದಗಿಸುತ್ತದೆ.




ಚಿತ್ರ 9.8

## ರಾಜಕೀಯ ಪಕ್ಷಗಳು

ಆಧುನಿಕ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಅತ್ಯಗತ್ಯ ಘಟಕಗಳಾಗಿವೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸುವಲ್ಲಿ ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಗಳನ್ನು ಸುಗಮಗೊಳಿಸುತ್ತವೆ. ಅವರು ನಡೆಸುವ ಸಮ್ಮೇಳನಗಳು, ಮೆರವಣಿಗೆಗಳು, ಭಾಷಣಗಳು, ಪ್ರಜಾಪ್ರಭುತ್ವದಲ್ಲಿ ಅತ್ಯಂತ ಶಕ್ತಿಶಾಲಿ ರಾಜಕೀಯ ಶಿಕ್ಷಣದ ಕಾರ್ಯಕ್ರಮಗಳಾಗಿವೆ. ಸಾರ್ವಜನಿಕ ಅಭಿಪ್ರಾಯವನ್ನು ತಮಗೆ ಅನುಕೂಲವಾಗಿಸಿಕೊಂಡು ಚುನಾವಣೆಗಳಲ್ಲಿ ಜಯಗಳಿಸಿ ರಾಜಕೀಯ ಅಧಿಕಾರವನ್ನು ಪಡೆಯುವುದು ರಾಜಕೀಯ ಪಕ್ಷಗಳ ಪ್ರಮುಖ ಉದ್ದೇಶವಾಗಿದೆ.

*'ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ರಾಜಕೀಯ ಪಕ್ಷಗಳು ವಹಿಸುವ ಪಾತ್ರ' ಎಂಬ ವಿಷಯದ ಕುರಿತು ಸೆಮಿನಾರ್ ಆಯೋಜಿಸಿರಿ.*

## ವಿರೋಧ ಪಕ್ಷ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ. ಸರಕಾರವನ್ನು ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ಸ್ವಾತಂತ್ರ್ಯವು ವಿರೋಧ ಪಕ್ಷಗಳಿಗೆ ಇರಬೇಕು. ವಿರೋಧ ಪಕ್ಷಗಳ ಕಾರ್ಯನಿರ್ವಹಣ ಸ್ವಾತಂತ್ರ್ಯವು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಾಗಿದೆ.

ಕ್ರಿಯಾತ್ಮಕ ವಿರೋಧ ಪಕ್ಷವು ಸರಕಾರದ ಎಲ್ಲ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮೌಲ್ಯಮಾಪನ ಮಾಡುತ್ತದೆ. ಅದು ಆಡಳಿತದ ತಪ್ಪು ನೀತಿಗಳನ್ನು ವಿಮರ್ಶಿಸುವುದರೊಂದಿಗೆ ಅವುಗಳನ್ನು ಸರಿಪಡಿಸಲು ಸಾರ್ವಜನಿಕ ಅಭಿಪ್ರಾಯಗಳನ್ನು ಸಂಗ್ರಹಿಸುವುದಲ್ಲದೆ ಧೋರಣೆಗಳನ್ನು ಸೂಚಿಸುತ್ತದೆ. ವಿರೋಧ ಪಕ್ಷವು ಪ್ರಜಾಪ್ರಭುತ್ವವನ್ನು ಹೆಚ್ಚು ಚಲನಾತ್ಮಕಗೊಳಿಸುತ್ತದೆ. ಅವರು ಆಯೋಜಿಸುವ ಮೆರವಣಿಗೆಗಳು, ಸಮ್ಮೇಳನಗಳು, ಧರಣಿಗಳೆಲ್ಲವೂ ರಾಜಕೀಯ ವ್ಯವಸ್ಥೆಯನ್ನು ಹೆಚ್ಚು ಸಕ್ರಿಯಗೊಳಿಸುತ್ತದೆ. ವಿರೋಧ ಪಕ್ಷವನ್ನು ನಿಷೇಧಿಸುವ, ನಿಯಂತ್ರಿಸುವ, ವಿರೋಧ ಪಕ್ಷದ ನಾಯಕರನ್ನು ಸೆರೆಮನೆಯಲ್ಲಿರಿಸುವ ರಾಜಕೀಯ ವ್ಯವಸ್ಥೆಯು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ.

*ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷವನ್ನು ಅನಿವಾರ್ಯವನ್ನಾಗಿಸುವ ಘಟಕಗಳು ಯಾವುವು?*

- *ಸರಕಾರವನ್ನು ವಿಮರ್ಶಿಸುವುದು ಮತ್ತು ಮೌಲ್ಯಮಾಪನ ಮಾಡುವುದು.*
- 

ನಾವು ಇಲ್ಲಿಯತನಕ ಪ್ರಜಾಪ್ರಭುತ್ವ ಸರಕಾರಗಳ ಕುರಿತು ಮತ್ತು ಅವುಗಳ ಮೌಲ್ಯಗಳ ಕುರಿತು ಚರ್ಚಿಸಿದೆವಲ್ಲವೇ. ಆದರೆ ಜಗತ್ತಿನಲ್ಲಿ ಪ್ರಜಾಪ್ರಭುತ್ವವನ್ನು ಹಿಂಬಾಲಿಸದ ಸರಕಾರಗಳೂ ಅಸ್ತಿತ್ವದಲ್ಲಿವೆ. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಡಲಾಗಿದೆ.

| | |
|---|---|
| **ರಾಜಾಡಳಿತ (Monarchy)** | • ಸರಕಾರದ ಅತ್ಯಂತ ಹಳೆಯ ರೂಪ<br>• ಅಧಿಕಾರವು ಪರಂಪರಾಗತವಾಗಿ ಕೈಬದಲಾಯಿಸಲ್ಪಡುತ್ತದೆ.<br>• ರಾಷ್ಟ್ರದ ಎಲ್ಲ ಅಧಿಕಾರಗಳು ರಾಜ/ರಾಣಿಯಲ್ಲಿ ನಿಕ್ಷಿಪ್ತವಾಗಿರುತ್ತದೆ. |
| **ಸರ್ವಾಧಿಕಾರ (Dictatorship)** | • ರಾಷ್ಟ್ರದ ಎಲ್ಲಾ ಅಧಿಕಾರಗಳು ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿರುತ್ತದೆ.<br>• ರಾಷ್ಟ್ರದ ಸರ್ವೋಚ್ಚ ನಾಯಕನಾಗಿ ಹೊರಹೊಮ್ಮುವ ವ್ಯಕ್ತಿಯನ್ನು ಪ್ರಶ್ನಿಸಲು ಅಥವಾ ವಿಮರ್ಶೆ ಮಾಡಲು ಯಾರಿಗೂ ಸ್ವಾತಂತ್ರ್ಯವಿರುವುದಿಲ್ಲ.<br>• ಚುನಾವಣೆಗಳು ಸೇರಿದಂತೆ ಎಲ್ಲ ರೀತಿಯ ಪ್ರಜಾಪ್ರಭುತ್ವ ವ್ಯವಸ್ಥೆಗಳನ್ನು ನಿಷೇಧಿಸಲಾಗಿರುತ್ತದೆ. |
| **ಸೈನಿಕ ಸರ್ವಾಧಿಕಾರ (Military Dictatorship)** | • ಸೈನ್ಯವು ನೇರವಾಗಿ ಆಡಳಿತವನ್ನು ನಿರ್ವಹಿಸುತ್ತದೆ.<br>• ಪ್ರಜಾಸತ್ತಾತ್ಮಕ ಹಕ್ಕುಗಳೋ ಪ್ರಜಾಪ್ರಭುತ್ವದ ಕಾರ್ಯವಿಧಾನಗಳೋ ಇರುವುದಿಲ್ಲ.<br>• ಪ್ರತಿಭಟನೆಗಳನ್ನು ಮತ್ತು ವಿಮರ್ಶೆಗಳನ್ನು ಸೈನಿಕ ಬಲವನ್ನುಪಯೋಗಿಸಿ ದಮನಿಸಲಾಗುತ್ತದೆ. |
| **ಪಕ್ಷದ ಸರ್ವಾಧಿಕಾರ (Party Dictatorship)** | • ಒಂದು ರಾಜಕೀಯ ಪಕ್ಷ ಮಾತ್ರ ಕಾರ್ಯನಿರ್ವಹಿಸುತ್ತದೆ.<br>• ರಾಷ್ಟ್ರದ ಎಲ್ಲ ಅಧಿಕಾರಗಳೂ ಪಕ್ಷದಲ್ಲಿ ಕೇಂದ್ರೀಕೃತವಾಗಿರುತ್ತದೆ.<br>• ಅಭಿವ್ಯಕ್ತಿ ಸ್ವಾತಂತ್ರ್ಯ ಸೇರಿದಂತೆ ಪ್ರಜಾಪ್ರಭುತ್ವ ಮೌಲ್ಯಗಳು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುತ್ತದೆ. |
| **ಮತರಾಷ್ಟ್ರ (Theocratic State)** | • ಮತದ ನಿಯಮಗಳಿಗೆ ಅನುಸಾರವಾಗಿ ಪುರೋಹಿತರು ನೇರವಾಗಿ ರಾಷ್ಟ್ರವನ್ನು ಆಳುತ್ತಾರೆ.<br>• ಕಾನೂನು ವ್ಯವಸ್ಥೆಯು ರಾಷ್ಟ್ರದ ಅಧಿಕೃತ ಮತದ ಆಧಾರದಲ್ಲಿರುತ್ತದೆ.<br>• ಪ್ರತಿಯೊಬ್ಬರೂ ಅಧಿಕೃತ ಮತದಲ್ಲಿ ವಿಶ್ವಾಸವನ್ನಿರಿಸಲು ಹಾಗೂ ಅನುಸರಿಸಲು ಬಾಧ್ಯಸ್ಥರು. |

## ಭಾರತದ ಪ್ರಜಾಪ್ರಭುತ್ವ



ಚಿತ್ರ 9.9

ಭಾರತವು ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಭಾಗವಹಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯು ಜಗತ್ತಿನ ಬೇರೆಲ್ಲಿಯೂ ಇರಲಾರದು. ಚುನಾವಣೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನಿವಾರ್ಯ ಘಟಕಗಳಾಗಿವೆ. ಭಾರತದ ಪ್ರಜಾಪ್ರಭುತ್ವದ ವಿಶೇಷತೆಗಳು ಯಾವುವೆಂದು ಪರಿಶೀಲಿಸೋಣ.

## ಭಾರತವು ಯಾಕೆ ಪ್ರಜಾಪ್ರಭುತ್ವವನ್ನು ಸ್ವೀಕರಿಸಿತು?

ಸ್ವಾತಂತ್ರ್ಯ ಹೋರಾಟ ಮತ್ತು ಅದರ ನಾಯಕತ್ವದ ಮೇಲೆ ಪ್ರಜಾಪ್ರಭುತ್ವದ ಮೌಲ್ಯಗಳು ಗಣನೀಯ ಪ್ರಭಾವ ಬೀರಿದ್ದವು. ಸ್ವಾತಂತ್ರ್ಯ ಹೋರಾಟದ ಎಲ್ಲಾ ಚಳುವಳಿಗಳು ಪ್ರಜಾಪ್ರಭುತ್ವ ವಿಧಾನಗಳನ್ನು ಅಳವಡಿಸಿಕೊಂಡಿದ್ದವು. ಅದೇ ರೀತಿಯ ಸಾಂಸ್ಕೃತಿಕವಾಗಿಯೂ ಭೌಗೋಳಿಕವಾಗಿಯೂ ಅನೇಕ ವೈವಿಧ್ಯವನ್ನು ಹೊಂದಿರುವ ಪ್ರದೇಶವನ್ನು ರಾಜಕೀಯವಾಗಿ ಏಕೀಕರಿಸಬೇಕಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಮಾತ್ರ ಸಾಧ್ಯ ಎಂದು ಅಂದಿನ ನೇತಾರರು ತಿಳಿದುಕೊಂಡಿದ್ದರು. ವಿಭಿನ್ನ ಆಶಯಗಳನ್ನು ಸಂವಹನ ನಡೆಸಲು ವೇದಿಕೆಯನ್ನು ಒದಗಿಸುವುದು ಪ್ರಜಾಪ್ರಭುತ್ವ ಮಾತ್ರವಾಗಿದೆ. ಸರಕಾರಗಳ ನಡುವೆ ಶಾಂತಿಯುತ ಅಧಿಕಾರ ವರ್ಗಾವಣೆಯೂ ಅದೇ ರೀತಿಯಲ್ಲಿ ಜನರ ದೂರುಗಳನ್ನೂ ಪ್ರತಿಭಟನೆಗಳನ್ನೂ ದಾಖಲಿಸಲು ಅವಕಾಶವನ್ನು ಒದಗಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ ಎಂದು ಸ್ವತಂತ್ರ ಭಾರತದ ಶಿಲ್ಪಿಗಳು ಮನಗಂಡಿದ್ದರು. ಆದುದರಿಂದ ಸ್ವಾತಂತ್ರ್ಯ ಲಭಿಸಿದಾಗ ಭಾರತವು ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿತಲ್ಲದೆ ಅದಕ್ಕಾಗಿ ಒಂದು ಸಂವಿಧಾನವನ್ನೂ ರಚಿಸಿತು.

*ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವೀಕರಿಸಲು ಕಾರಣವಾದ ಅಂಶಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.*

## ಭಾರತದಲ್ಲಿ ಸಂಸದೀಯ ವ್ಯವಸ್ಥೆ

ಭಾರತವು ಸಂಸದೀಯ ವ್ಯವಸ್ಥೆ (ಪಾರ್ಲಿಮೆಂಟರಿ ವ್ಯವಸ್ಥೆ) ಯನ್ನು ಸ್ವೀಕರಿಸಿದೆ. ಭಾರತದ ಸಂಸತ್ತು (ಪಾರ್ಲಿಮೆಂಟ್) ಎರಡು ಸದನಗಳನ್ನು ಹೊಂದಿದೆ. ಮೇಲ್ಮನೆಯಾದ ರಾಜ್ಯಸಭೆ ಮತ್ತು ಕೆಳಮನೆಯಾದ ಲೋಕಸಭೆ. ಲೋಕಸಭೆಯಲ್ಲಿ ಬಹುಮತವನ್ನು ಗಳಿಸುವ ಪಕ್ಷ ಅಥವಾ ರಾಜಕೀಯ ಒಕ್ಕೂಟಗಳು ಸಚಿವ ಸಂಪುಟವನ್ನು ರಚಿಸುತ್ತವೆ. ರಾಷ್ಟ್ರದ ಮುಖ್ಯಸ್ಥರು ರಾಷ್ಟ್ರಪತಿಯಾಗಿದ್ದರೂ ಅವರ ಅಧಿಕಾರಗಳು ನಾಮಮಾತ್ರವಾಗಿರುತ್ತವೆ. ಪ್ರಧಾನಮಂತ್ರಿಯು ನೇತೃತ್ವ ವಹಿಸುವ ಮಂತ್ರಿಮಂಡಲವು ನಿಜವಾದ ಅಧಿಕಾರಗಳನ್ನು ನಿರ್ವಹಿಸುತ್ತದೆ. ಸಚಿವ

ಸಂಪುಟ ಸಭೆಗೆ ಸಂಸತ್ತಿನೊಂದಿಗೆ ಸಾಮೂಹಿಕ ಜವಾಬ್ದಾರಿಯಿರುತ್ತದೆ. ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಅಂಗೀಕರಿಸುವ ಮೂಲಕ ಸಚಿವ ಸಂಪುಟವನ್ನು ಅಧಿಕಾರದಿಂದ ತೆಗೆದುಹಾಕಬಹುದು. ತುರ್ತು ಗೊತ್ತುವಳಿಗಳು, ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಗೊತ್ತುವಳಿ, ಶೂನ್ಯವೇಳೆ ಮೊದಲಾದ ವಿಧಾನಗಳ ಮೂಲಕ ಸಂಸತ್ತಿಗೆ ಸಚಿವ ಸಂಪುಟವನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

### *ಅವಿಶ್ವಾಸ ಗೊತ್ತುವಳಿ*

*ಅವಿಶ್ವಾಸ ಗೊತ್ತುವಳಿ ಎಂದರೆ ಲೋಕಸಭೆಗೆ ಪ್ರಸ್ತುತ ಸಚಿವ ಸಂಪುಟದ ಮೇಲೆ ವಿಶ್ವಾಸವಿಲ್ಲ ಎಂದು ಹೇಳುವ ಮೂಲಕ ಮಂಡಿಸಲಾಗುವ ಗೊತ್ತುವಳಿಯಾಗಿದೆ. ಸಂಸದೀಯ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿಯ ನೇತೃತ್ವದಲ್ಲಿರುವ ಸಚಿವ ಸಂಪುಟಕ್ಕೆ ಶಾಸಕಾಂಗದಲ್ಲಿ ವಿಶ್ವಾಸವಿದ್ದರೆ ಮಾತ್ರ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯ. ಪಾರ್ಲಿಮೆಂಟಿನಲ್ಲಿ ಬಹುಪಾಲು ಸದಸ್ಯರು ಅವಿಶ್ವಾಸ ಗೊತ್ತುವಳಿಯನ್ನು ಅಂಗೀಕರಿಸಿದರೆ ಸಚಿವ ಸಂಪುಟವು ಅಧಿಕಾರವನ್ನು ಕಳೆದುಕೊಳ್ಳುತ್ತದೆ.*

## ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು

**(Universal Adult Franchise in India)**

ಭಾರತದ ಸಂವಿಧಾನದ 326ನೇ ವಿಧಿಯ ಪ್ರಕಾರ ಜಾತಿ, ಮತ, ಲಿಂಗ, ವರ್ಗ ವ್ಯತ್ಯಾಸವಿಲ್ಲದೆ ಭಾರತದ ಎಲ್ಲ ನಾಗರಿಕರೂ ಮತದಾನ ಮಾಡುವ ಹಕ್ಕನ್ನು ಹೊಂದಿದ್ದಾರೆ. ಸಂವಿಧಾನವು ಜಾರಿಗೆ ಬಂದಾಗ ಮತದಾನದ ಹಕ್ಕು ಲಭಿಸಲಿರುವ ವಯಸ್ಸು 21 ಆಗಿತ್ತು. ಆದರೆ ಸಂವಿಧಾನದ 61ನೇ ತಿದ್ದುಪಡಿಯ ಪ್ರಕಾರ 1989 ರ ಚುನಾವಣೆಯೊಂದಿಗೆ ಮತದಾನದ ವಯಸ್ಸನ್ನು 18 ವರ್ಷಗಳಿಗೆ ಇಳಿಸಲಾಯಿತು. ಅನಕ್ಷರಸ್ಥರು ಅಧಿಕವಿದ್ದ ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಜಾರಿಗೆ ತರುವುದನ್ನು ಅನೇಕ ಜನರು ವಿರೋಧಿಸಿದ್ದರು. ಆದರೆ ಭಾರತದ ಎಲ್ಲ ಪೌರರಿಗೂ ಮತದಾನದ ಹಕ್ಕು ಲಭಿಸಬೇಕೆಂಬ ನಿಲುವನ್ನು ಜವಾಹರ್ ಲಾಲ್ ನೆಹರೂರವರು ಹೊಂದಿದ್ದರು. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯು ಉದಯಿಸಿದ ಯುರೋಪಿನ ರಾಷ್ಟ್ರಗಳಲ್ಲಿಯೂ ಕೂಡ ಕಾರ್ಮಿಕರಿಗೂ ಮಹಿಳೆಯರಿಗೂ ಮತದಾನದ ಹಕ್ಕು ಲಭಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಭಾರತದ ಸಂವಿಧಾನದ ರಚನೆಕಾರರು ಸ್ವೀಕರಿಸಿಕೊಂಡ ಸಾರ್ವತ್ರಿಕ ವಯಸ್ಕ ಮತದಾನದ ಔಚಿತ್ಯವು ಹೆಚ್ಚಾಗುತ್ತದೆ.




*ಚಿತ್ರ 9.10*

*'ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಸಾರ್ವತ್ರಿಕ ವಯಸ್ಕ ಮತದಾನದ ಪ್ರಾಧಾನ್ಯ' ಎಂಬ ವಿಷಯದ ಆಧಾರದಲ್ಲಿ ಚರ್ಚೆಯನ್ನು ಆಯೋಜಿಸಿರಿ.*

# ಚುನಾಯಿತ ಸರಕಾರ
**(Elected Government)**

### *ರಾಷ್ಟ್ರೀಯ ಚುನಾವಣಾ ಆಯೋಗ*

*ಚುನಾವಣಾ ಆಯೋಗವು ಭಾರತದಲ್ಲಿ ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳನ್ನು ನಡೆಸುವ ಸಾಂವಿಧಾನಿಕ ಸಂಸ್ಥೆಯಾಗಿದೆ. ಚುನಾವಣಾ ಆಯೋಗವು ರಾಷ್ಟ್ರಪತಿ, ಉಪರಾಷ್ಟ್ರಪತಿ ಎಂಬೀ ಹುದ್ದೆಗಳಿಗೂ ಪಾರ್ಲಿಮೆಂಟ್ (ಸಂಸತ್ತು), ರಾಜ್ಯ ಶಾಸನಸಭೆ ಎಂಬಿವುಗಳಿಗೂ ಚುನಾವಣೆಗಳನ್ನು ನಡೆಸುತ್ತದೆ. ಚುನಾವಣಾ ಆಯೋಗವು ಒಬ್ಬ ಮುಖ್ಯ ಚುನಾವಣಾ ಆಯುಕ್ತರು, ಇತರ ಇಬ್ಬರು ಆಯುಕ್ತರನ್ನು ಒಳಗೊಂಡಿದೆ.*

ಭಾರತದಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಜನರು ಆಯ್ಕೆ ಮಾಡುವ ಪ್ರತಿನಿಧಿಗಳು ಸರಕಾರವನ್ನು ರೂಪಿಸುತ್ತಾರೆ. ಸರಕಾರಗಳ ಕಾಲಾವಧಿಯು ಐದು ವರ್ಷ. ಐದು ವರ್ಷಗಳ ನಂತರ ಹೊಸ ಚುನಾವಣೆಯು ನಡೆದು ಹೊಸ ಸರಕಾರವು ಅಧಿಕಾರಕ್ಕೆ ಬರುತ್ತದೆ. ಸ್ಥಳೀಯಾಡಳಿತ ಸಂಸ್ಥೆಗಳಲ್ಲಿಯೂ ಆಡಳಿತ ಸಮಿತಿಗಳು ರೂಪುಗೊಳ್ಳುವುದು ಚುನಾವಣೆಯ ಮೂಲಕವೇ ಆಗಿದೆ.

ಜಾತಿ, ಮತ, ಲಿಂಗ, ಆರ್ಥಿಕ ಭೇದವಿಲ್ಲದೆ ಎಲ್ಲ ಭಾರತೀಯ ನಾಗರಿಕರು ಚುನಾವಣೆಗಳಲ್ಲಿ ಸ್ಪರ್ಧಿಸುವ ಮತ್ತು ಸಾರ್ವಜನಿಕ ಹುದ್ದೆಗಳನ್ನು ಅಲಂಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಭಾರತದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ಅಸ್ತಿತ್ವದಲ್ಲಿದೆ.

## ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಮತ್ತು ನ್ಯಾಯಾಂಗ ಪುನರವಲೋಕನ
**(Independent Judiciary and Judicial Review)**

### *ನ್ಯಾಯಾಂಗ ಪುನರಾವಲೋಕನ*
***(Judicial Review)***

*ಶಾಸಕಾಂಗವು ಜಾರಿಗೊಳಿಸುವ ಕಾನೂನುಗಳನ್ನು ಹಾಗೂ ಕಾರ್ಯಾಂಗದ ಕ್ರಮಗಳು ಸಂವಿಧಾನ ಬಾಹಿರವಾಗಿದ್ದರೆ ಅವುಗಳನ್ನು ರದ್ದುಗೊಳಿಸುವ ಅಧಿಕಾರವು ಸುಪ್ರೀಂ ಕೋರ್ಟ್‌ಗೆ ಇದೆ. ನ್ಯಾಯಾಲಯದ ಈ ಅಧಿಕಾರವನ್ನು ನ್ಯಾಯಾಂಗ ಪುನರಾವಲೋಕನ ಎನ್ನುತ್ತಾರೆ.*

ಭಾರತದ ನ್ಯಾಯಾಂಗ ವ್ಯವಸ್ಥೆಯು ಅತ್ಯಂತ ಉನ್ನತ ಹಂತದಲ್ಲಿ ಸುಪ್ರೀಂ ಕೋರ್ಟನ್ನೂ ಅದರ ಕೆಳಗೆ ಹೈಕೋರ್ಟ್ ಮತ್ತು ಅದರ ಕೆಳಗಿನ ಹಂತದಲ್ಲಿ ಕೆಳ ನ್ಯಾಯಾಲಯಗಳನ್ನು ಒಳಗೊಂಡಿದೆ. ನ್ಯಾಯಾಂಗವು ಕಾರ್ಯಾಂಗ ಹಾಗೂ ಶಾಸಕಾಂಗಗಳಿಂದ ಸ್ವತಂತ್ರವಾಗಿದೆ. ನ್ಯಾಯಾಂಗ ವ್ಯವಸ್ಥೆಯ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಧೀಶರುಗಳಿಗೆ ನಿಗದಿತವಾದ ಸೇವಾ ಅವಧಿಯಿರುತ್ತದೆ. ನ್ಯಾಯಾಧೀಶರ ಸೇವೆ-ವೇತನ ವ್ಯವಸ್ಥೆಗಳಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗಗಳು ಮಧ್ಯಪ್ರವೇಶಿಸಲು ಸಂವಿಧಾನದಲ್ಲಿ ಮಿತಿಯನ್ನು ಸೂಚಿಸಲಾಗಿದೆ. ನ್ಯಾಯಾಲಯವು ಸಂವಿಧಾನ ಸಂರಕ್ಷಕ. ಈ ಅರ್ಥದಲ್ಲಿ ನ್ಯಾಯಾಂಗ ಪುನರವಲೋಕನದ ಮೂಲಕ ಕಾರ್ಯಾಂಗ ಮತ್ತು ಶಾಸಕಾಂಗದ ಸಂವಿಧಾನ ಬಾಹಿರ ತೀರ್ಮಾನಗಳನ್ನು ಅಮಾನ್ಯ ಎಂದು ಘೋಷಿಸಲು ನ್ಯಾಯಾಲಯಗಳಿಗೆ ಅಧಿಕಾರವಿದೆ.

## ಭಾರತದಲ್ಲಿ ರಾಜಕೀಯ ಪಕ್ಷ ವ್ಯವಸ್ಥೆ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಸ್ವಾತಂತ್ರ್ಯ ಲಭಿಸಿದ ನಂತರ ಭಾರತದಲ್ಲಿ ಬಹುಪಕ್ಷ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಪ್ರಥಮ ಚುನಾವಣೆಯಿಂದ 1967 ರ ವರೆಗಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್‌ಗೆ ಪ್ರಾಬಲ್ಯವಿತ್ತು. ಅನಂತರ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಅಧಿಕಾರವನ್ನು ಉಳಿಸಿಕೊಂಡರೂ ಹಲವು ರಾಜ್ಯಗಳಲ್ಲಿ ಅವರಿಗೆ ಅಧಿಕಾರವು ನಷ್ಟವಾಯಿತು. 1989 ರ ಚುನಾವಣೆಯ ನಂತರ ಭಾರತದಲ್ಲಿ ಒಂದಕ್ಕಿಂತ ಹೆಚ್ಚು ಪಕ್ಷಗಳು ಸರಕಾರವನ್ನು ರಚಿಸುವ ಸಮ್ಮಿಶ್ರ ವ್ಯವಸ್ಥೆಯು ಪ್ರಾಬಲ್ಯಕ್ಕೆ ಬಂತು.

## ಬಹುತ್ವ

ಒಂದು ರಾಷ್ಟ್ರ ಎಂಬ ನೆಲೆಯಲ್ಲಿ ಭಾರತವು ಯುರೋಪಿನ ದೇಶರಾಷ್ಟ್ರಗಳಿಗಿಂತ ಭಿನ್ನವಾಗಿದೆ. 'ಒಂದು ಸಂಸ್ಕೃತಿ, ಒಂದು ರಾಷ್ಟ್ರ' ಎಂಬ ಆಶಯದ ಆಧಾರದಲ್ಲಿ ಯುರೋಪಿನಲ್ಲಿ ದೇಶ ರಾಷ್ಟ್ರಗಳು ರೂಪುಗೊಂಡವು. ಆದರೆ ಯುರೋಪಿಗಿಂತ ಭಿನ್ನವಾಗಿ ವಿಭಿನ್ನ ಧರ್ಮ, ಜನಾಂಗೀಯ ವಿಭಾಗಗಳು, ಸಾಂಸ್ಕೃತಿಕ ಹಿನ್ನೆಲೆಗಳಿಗೆ ಸಮಾನ ಹಕ್ಕುಗಳನ್ನು ಮತ್ತು ಪ್ರಾಧಾನ್ಯವನ್ನು ನೀಡುವ ಮೂಲಕ ಭಾರತ ಎಂಬ ರಾಷ್ಟ್ರವು ಅಸ್ತಿತ್ವಕ್ಕೆ ಬಂತು. ಈ ವಿಭಿನ್ನತೆಗಳನ್ನು ರಾಷ್ಟ್ರೀಯವಾಗಿ ಸ್ವೀಕರಿಸಲು ನಾವು ಒಂದು ಸಂಯುಕ್ತ ವ್ಯವಸ್ಥೆ (ಫೆಡರಲ್ ವ್ಯವಸ್ಥೆ) ಯನ್ನು ಸ್ವೀಕರಿಸಿದೆವು. ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೂಲಭೂತ ಹಕ್ಕುಗಳಲ್ಲಿ ಸೇರಿಸಿಕೊಂಡು ಪ್ರತ್ಯೇಕ ಸಂರಕ್ಷಣೆಯನ್ನು ನೀಡಲಾಗುತ್ತದೆ. ಭಾರತದ ಸಂವಿಧಾನದ 8 ನೇ ಪಟ್ಟಿಯಲ್ಲಿ 22 ಭಾಷೆಗಳನ್ನು ಸೇರಿಸಲಾಗಿದೆ. ಅದೇ ರೀತಿಯಲ್ಲಿ ಬುಡಕಟ್ಟು ವಿಭಾಗಗಳ ಸಂರಕ್ಷಣೆಗಾಗಿ ವಿಶೇಷ ವ್ಯವಸ್ಥೆಗಳನ್ನು 5 ಮತ್ತು 6 ನೇ ಪಟ್ಟಿಯಲ್ಲಿ ಸೇರಿಸಲಾಗಿದೆ. ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಶೇಷತೆಗಳನ್ನು ಪರಿಗಣಿಸಿಕೊಂಡು ಕೆಲವು ರಾಜ್ಯಗಳಿಗೆ ವಿಶೇಷ ಸ್ಥಾನ-ಮಾನಗಳನ್ನೂ ನೀಡಲಾಗಿದೆ. ಭಾರತವು ಒಂದು ಜಾತ್ಯತೀತ ರಾಷ್ಟ್ರವಾಗಿದೆ. ಇದನ್ನು ಭಾರತದ ಸಂವಿಧಾನದ ಮುನ್ನುಡಿಯಲ್ಲಿಯೇ ಸ್ಪಷ್ಟಪಡಿಸಲಾಗಿದೆ. ರಾಷ್ಟ್ರಕ್ಕೆ ಅಧಿಕೃತ ಮತವಿಲ್ಲ, ಎಲ್ಲ ಮತಗಳನ್ನೂ ಸಮಾನವಾಗಿ ಪರಿಗಣಿಸಲಾಗುತ್ತದೆ. ನಾಗರಿಕರು ತಮಗೆ ಬೇಕಾದ ಯಾವುದೇ ಮತವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಭಾರತದ ಸಂಸತ್ತು ಭಾರತದ ಈ ಎಲ್ಲಾ ವೈವಿಧ್ಯಗಳನ್ನು ಪ್ರತಿನಿಧಿಸುವ ವೇದಿಕೆಯಾಗಿದೆ.

### *ಬಹುಪಕ್ಷ ವ್ಯವಸ್ಥೆ*

*ಒಂದು ರಾಜಕೀಯ ವ್ಯವಸ್ಥೆಯಲ್ಲಿ ಅನೇಕ ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿದ್ದು, ಅವು ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ಬಹು-ಪಕ್ಷ ವ್ಯವಸ್ಥೆ ಎನ್ನುತ್ತಾರೆ.*

### *ಸಮ್ಮಿಶ್ರ ಸರಕಾರ*

*ಚುನಾವಣೆಯ ನಂತರ, ಯಾವುದೇ ಪಕ್ಷಕ್ಕೂ ಸಂಸತ್ತಿನಲ್ಲಿ ಬಹುಮತವಿಲ್ಲದಿದ್ದಾಗ ಒಂದಕ್ಕಿಂತ ಹೆಚ್ಚು ಪಕ್ಷಗಳು ಒಟ್ಟಾಗಿ ಒಂದು ಸಮ್ಮಿಶ್ರ ಸರಕಾರವನ್ನು ರಚಿಸುತ್ತದೆ. ಇಂತಹ ಸರಕಾರಗಳನ್ನು ಸಮ್ಮಿಶ್ರ ಸರಕಾರ ಎನ್ನುತ್ತಾರೆ.*

### *ಸಂಯುಕ್ತ ವ್ಯವಸ್ಥೆ (ಫೆಡರಲ್ ವ್ಯವಸ್ಥೆ)*

*ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಅಧಿಕಾರ ವಿಭಜನೆಯನ್ನು ಹೊಂದಿರುವ ವ್ಯವಸ್ಥೆ. ಈ ವ್ಯವಸ್ಥೆಯು ಕೇಂದ್ರ ಮತ್ತು ರಾಜ್ಯಗಳ ನಡುವಿನ ವಿವಾದಗಳನ್ನು ಬಗೆಹರಿಸಲು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುತ್ತದೆ.*

*ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶೇಷತೆಗಳ ಕುರಿತು ಸೆಮಿನಾರ್ ಆಯೋಜಿಸಿರಿ.*

ಭಾರತದೊಂದಿಗೆ ಸ್ವಾತಂತ್ರ್ಯ ಪಡೆದ ಇತರ ಹಲವು ರಾಷ್ಟ್ರಗಳು ಬಹುಬೇಗನೆ ಸೈನಿಕ ಆಡಳಿತ ಅಥವಾ ಸರ್ವಾಧಿಕಾರಕ್ಕೆ ಪರಿವರ್ತನೆ ಹೊಂದಿದವು. ಆದರೆ ಭಾರತದ ಪ್ರಜಾಪ್ರಭುತ್ವವು ತನ್ನ ಎಲ್ಲಾ ಶಕ್ತಿ ಸಾಮರ್ಥ್ಯ ಮತ್ತು ದೌರ್ಬಲ್ಯಗಳೊಂದಿಗೆ ಇಂದೂ ಮುನ್ನಡೆಯುತ್ತಿದೆ. ಇದು ಹಲವು ವಿಷಯಗಳಲ್ಲಿ ಇತಿಮಿತಿಗಳನ್ನು ಹೊಂದಿದ್ದರೂ ಪ್ರಜಾಪ್ರಭುತ್ವವು ಅದರ ವಿಕಾಸದ ಹಾದಿಯಲ್ಲಿದೆ.

## ಮುಂದುವರಿದ ಚಟುವಟಿಕೆಗಳು

- ಸಂಸದೀಯ (ಪಾರ್ಲಿಮೆಂಟರಿ) ವ್ಯವಸ್ಥೆಯ ವಿಶೇಷತೆಗಳ ಕುರಿತು ಜನಪ್ರತಿನಿಧಿಯೊಂದಿಗೆ ಸಂದರ್ಶನ ನಡೆಸಿರಿ.
- ಜಗತ್ತಿನಾದ್ಯಂತದ ವಿವಿಧ ದೇಶಗಳಲ್ಲಿರುವ ಆಡಳಿತ ವ್ಯವಸ್ಥೆಯಿಂದ ಪ್ರಜಾಪ್ರಭುತ್ವೇತರ ಸರಕಾರಗಳಿಗೆ ಉದಾಹರಣೆಗಳನ್ನು ಕಂಡುಕೊಂಡು ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿರಿ.
- ಪ್ರಪಂಚದ ವಿವಿಧ ದೇಶಗಳ ಪ್ರಮುಖ ರಾಜಕೀಯ ಪಕ್ಷಗಳ ಹೆಸರುಗಳನ್ನು ಕಂಡುಹಿಡಿದು ಬರೆಯಿರಿ.
- ತರಗತಿಯಲ್ಲಿ ತಯಾರಿಸಲಾದ ಪ್ಲಕಾರ್ಡ್‌ಗಳು, ಲಘುಟಿಪ್ಪಣಿಗಳು ಎಂಬಿವುಗಳನ್ನು ಉಪಯೋಗಿಸಿಕೊಂಡು ಹಕ್ಕುಗಳ ದಿನದಂದು ಜನಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿರಿ.

ಅಧ್ಯಾಯ 10

# ಜಾಗತಿಕ ಭೂಪಟದಲ್ಲಿ ಯುರೋಪು




## ಇಂದಿನ ಯುರೋಪು

**ಎಸ್. ಕೆ. ಪೊಟ್ಟೆಕ್ಕಾಡ್**

ನನ್ನ ಯುರೋಪ್ ಪ್ರವಾಸವು ಇಟಲಿಯಿಂದ ಪ್ರಾರಂಭವಾಯಿತು. ದಕ್ಷಿಣ ಇಟಲಿಯ ಕ್ಯಾಪ್ರಿ ದ್ವೀಪ, ವೆಸುವಿಯಸ್ ಜ್ವಾಲಾಮುಖಿ, ಪೋಂಪಿನಗರ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಒಳನಾಡಿನ ರಸ್ತೆಯ ಮೂಲಕ ರೋಮ್ ಗೆ ತಲುಪಿದೆನು. ರೋಮ್‌ನಿಂದ ಫ್ಲೋರೆನ್ಸ್ ಗೆ ತಲುಪಿದೆನು. ಫ್ಲೋರೆನ್ಸ್‌ನ ಒಳನಾಡಿನಾದ್ಯಂತ ಪ್ರಯಾಣಿಸಿ ವಾಲಿದ ಗೋಪುರವಿರುವ ನಗರವಾದ ಪಿಸಾವನ್ನು ತಲುಪಿದೆನು. ಪಿಸಾದಿಂದ ವೆನಿಸ್‌ಗೆ ಹೊರಟೆನು. ನಂತರ ಅಲ್ಲಿಂದ ಮಿಲಾನ್ ಗೆ ಹೋದೆನು. ಮಿಲಾನಿನಲ್ಲಿ ನನ್ನ ಇಟಲಿಯ ಪ್ರವಾಸವನ್ನು ಕೊನೆಗೊಳಿಸಿ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗಲು ರೈಲುಗಾಡಿಯನ್ನೇರಿದೆನು. ಸ್ವಿಟ್ಜರ್‌ಲ್ಯಾಂಡ್‌ನ ಪ್ರಮುಖ ನಗರಗಳು, ಪರ್ವತಗಳು, ಸರೋವರ ತೀರಗಳು ಮತ್ತು ಗ್ರಾಮಗಳ ಮೂಲಕ 40 ದಿನಗಳ ಕಾಲ ಪಯಣಿಸಿದ ನಂತರ ಫ್ರಾನ್ಸ್‌ಗೆ ಹೊರಟೆನು. ನಾನು ಪ್ಯಾರಿಸ್‌ನಲ್ಲಿ ಒಂದು ವಾರ ಕಳೆದೆನು. ನಂತರ ಪ್ಯಾರಿಸ್ ನಿಂದ ಫ್ರಾನ್ಸ್‌ನ ಗ್ರಾಮೀಣ ಪ್ರದೇಶಗಳ ಮೂಲಕ ಪಯಣಿಸಿ 'ನಿಪ್ಪಿ'ಗೆ ತಲುಪಿದೆನು. ನಿಪ್ಪಿಯಿಂದ ಇಂಗ್ಲಿಷ್ ಕಾಲುವೆ ದಾಟಿ ಇಂಗ್ಲೆಂಡ್ ತಲುಪಿದೆನು. ಒಂದೂವರೆ ತಿಂಗಳು ಇಂಗ್ಲೆಂಡ್ ನಲ್ಲಿ ಉಳಿದುಕೊಂಡ ನಂತರ, ಜುಲೈ 8, 1950 ರಂದು ಭಾರತಕ್ಕಿರುವ ಹಡಗನ್ನು ಏರಿದೆನು."

ಇದು 1955 ರಲ್ಲಿ 'ಇಂದಿನ ಯುರೋಪು' ಎಂಬ ಕೃತಿಯಲ್ಲಿ ಮಲಯಾಳದ ಪ್ರವಾಸಿ ಬರಹಗಾರ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಎಸ್.ಕೆ. ಪೊಟ್ಟೆಕ್ಕಾಡ್ ರವರು ಬರೆದ ಸಾಲುಗಳಾಗಿವೆ. ಯುರೋಪು ಒಂದು ಭೂಖಂಡವಾಗಿದೆಯೆಂದು ನಿಮಗೆ ತಿಳಿದಿದೆಯಲ್ಲವೇ?




*ಚಿತ್ರ 10.1 • ಜಾಗತಿಕ ಭೂಪಟ*

*ಜಾಗತಿಕ ಭೂಪಟವನ್ನು ಗಮನಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.*
*ಯುರೋಪಿನ ಪೂರ್ವ ದಿಕ್ಕಿನಲ್ಲಿರುವ ಭೂಖಂಡ ಯಾವುದು?*
*ಯುರೋಪಿನ ಪಶ್ಚಿಮ ದಿಕ್ಕಿನಲ್ಲಿರುವ ಸಾಗರ ಯಾವುದು?*
*ಯುರೋಪಿನ ಉತ್ತರ ದಿಕ್ಕಿನಲ್ಲಿರುವ ಸಾಗರ ಯಾವುದು?*
*ಯುರೋಪಿನ ದಕ್ಷಿಣ ದಿಕ್ಕಿನಲ್ಲಿರುವ ಸಮುದ್ರ ಯಾವುದು?*

## *ಯುರೋಪಿನ ಪ್ರಾಥಮಿಕ ಮಾಹಿತಿಗಳು*




*ಚಿತ್ರ 10.2 •*

*ಯುರೋಪಿನ ವಿಸ್ತೀರ್ಣವು 1,03,55,000 ಚದರ ಕಿಲೋಮೀಟರ್ ಆಗಿದೆ. ಇದು ಜಗತ್ತಿನ ಒಟ್ಟು ವಿಸ್ತಾರದ 7% ಮಾತ್ರ ಆಗಿದೆ.*

ಯುರೋಪ್ ಗಾತ್ರದಲ್ಲಿ ಆರನೇ ಸ್ಥಾನವನ್ನು ಹೊಂದಿರುವ ಭೂಖಂಡವಾಗಿದೆ. ಇತರ ಆರು ಭೂಖಂಡಗಳು ಪ್ರತ್ಯೇಕ ಭೂಪ್ರದೇಶಗಳಾಗಿ ಸ್ಥಿತಿಗೊಂಡಿರುವಾಗ, ಯುರೋಪ್ ಏಷ್ಯಾದ ಪಶ್ಚಿಮ ದಿಕ್ಕಿನ ಮುಂದುವರಿಕೆಯಾಗಿ ಕಂಡುಬರುತ್ತದೆ. ಏಷ್ಯಾ ಮತ್ತು ಯುರೋಪು ಒಳಗೊಂಡಿರುವ ವಿಶಾಲ ಭೂಪ್ರದೇಶವನ್ನು ಯುರೇಷಿಯಾ ಎಂದು ಕರೆಯುತ್ತಾರೆ. ಗ್ರೀಕ್ ಮತ್ತು ರೋಮನ್ ಪಂಡಿತರು ಯುರೋಪನ್ನು ಜಗತ್ತಿನ ಕೇಂದ್ರವಾಗಿ ಪರಿಗಣಿಸಿದ್ದರು. 2000 ವರ್ಷಗಳಷ್ಟು ಹಿಂದೆ ಗ್ರೀಕರು ಹಾಗೂ ರೋಮನರು ತಯಾರಿಸಿದ ಜಾಗತಿಕ ಭೂಪಟಗಳಲ್ಲಿ ಯುರೋಪನ್ನು ಭೂಖಂಡವಾಗಿ ದಾಖಲಿಸಿದ್ದರು. ಆದುದರಿಂದ ಪುರಾತನ ಕಾಲದಿಂದಲೇ ಯುರೋಪನ್ನು ಒಂದು ಭೂಖಂಡವಾಗಿ ಪರಿಗಣಿಸಲಾಗುತ್ತದೆ.

*ಅಟ್ಲಾಸ್ ಸಹಾಯದಿಂದ ಯುರೋಪಿನ ಅಕ್ಷಾಂಶ ಮತ್ತು ರೇಖಾಂಶ ವ್ಯಾಪ್ತಿಯನ್ನು ಕಂಡುಹಿಡಿಯಿರಿ.*

## ಯುರೋಪಿನ ಸ್ಥಾನ

ಯುರೋಪಿನ ಉತ್ತರ ಭಾಗದಲ್ಲಿ ಆರ್ಕ್ಟಿಕ್ ಸಾಗರ, ಪಶ್ಚಿಮ ದಿಕ್ಕಿನಲ್ಲಿ ಅಟ್ಲಾಂಟಿಕ್ ಸಾಗರ ಹಾಗೂ ದಕ್ಷಿಣ ದಿಕ್ಕಿನಲ್ಲಿ ಮೆಡಿಟರೇನಿಯನ್ ಸಮುದ್ರವಿದೆ ಎಂದು ನೀವು ಕಂಡುಕೊಂಡಿರಲ್ಲವೆ. ಪೂರ್ವ ಭಾಗದಲ್ಲಿ ಯೂರಲ್ ಪರ್ವತ ಶ್ರೇಣಿ, ಕಪ್ಪು ಸಮುದ್ರ (Black Sea) ಮತ್ತು ಕ್ಯಾಸ್ಪಿಯನ್ ಸಮುದ್ರ (Caspian Sea) ಗಳು ಯುರೋಪನ್ನು ಏಷ್ಯಾದಿಂದ ಪ್ರತ್ಯೇಕಿಸುತ್ತವೆ.




*ಚಿತ್ರ 10.3 • ಯುರೋಪಿನ ರಾಜಕೀಯ ಭೂಪಟ*

*ಅಟ್ಲಾಸ್ ನ ಸಹಾಯದಿಂದ ಕಪ್ಪು ಸಮುದ್ರದ ಸ್ಥಾನವನ್ನು ಕಂಡುಹಿಡಿಯಿರಿ. ಯುರೋಪಿನ ರಾಜಕೀಯ ಭೂಪಟವನ್ನು ನಿರೀಕ್ಷಿಸಿ ಪ್ರಮುಖ ದೇಶಗಳನ್ನು ಗುರುತಿಸಿರಿ.*

### *ನಿಮಗೆ ತಿಳಿದಿದೆಯೇ?*

*ರಷ್ಯಾವು ಯುರೋಪಿನ ಅತಿ ದೊಡ್ಡ ದೇಶ. ರಷ್ಯಾದ ಭೂವಿಸ್ತಾರದ ಕೇವಲ 25% ಮಾತ್ರ ಯುರೋಪ್ ನಲ್ಲಿದೆ. ಉಳಿದ ಭಾಗವು ಏಷ್ಯಾದಲ್ಲಿದೆ. ಯೂರಲ್ ಪರ್ವತಸಾಲುಗಳ ಪಶ್ಚಿಮದಲ್ಲಿರುವ ರಷ್ಯಾದ ಪ್ರದೇಶವು ಯುರೋಪಿನಲ್ಲಿದೆ. ಈ ಪ್ರದೇಶವನ್ನು ಯುರೋಪಿಯನ್ ರಷ್ಯಾ ಎಂದು ಕರೆಯುತ್ತಾರೆ. ರಷ್ಯಾದ ಜನಸಂಖ್ಯೆಯ 75% ಜನರು ಯುರೋಪಿಯನ್ ರಷ್ಯಾದಲ್ಲಿ ವಾಸಿಸುತ್ತಾರೆ. ರಷ್ಯಾದ ಅತಿದೊಡ್ಡ ನಗರಗಳಾದ ಮಾಸ್ಕೋ ಮತ್ತು ಸೇಂಟ್ ಪೀಟರ್ಸ್ ಬರ್ಗ್ ಯುರೋಪಿಯನ್ ರಷ್ಯಾದಲ್ಲಿದೆ. ಉಕ್ರೇನ್, ಫ್ರಾನ್ಸ್, ಸ್ಪೇನ್, ಸ್ವೀಡನ್ ಎಂಬಿವು ಗಾತ್ರದಲ್ಲಿ ದೊಡ್ಡದಾದ ಯುರೋಪಿಯನ್ ರಾಷ್ಟ್ರಗಳಾಗಿವೆ.*




*ಚಿತ್ರ 10.4 • ಯುರೋಪಿನ ಭೂಪ್ರಕೃತಿ*

ಯುರೋಪಿನ ಸ್ಥಾನ ಹಾಗೂ ಭೌಗೋಳಿಕ ಮೇರೆಗಳನ್ನು ತಿಳಿದುಕೊಂಡೆವಲ್ಲವೆ? ಇನ್ನು ನಾವು ಯುರೋಪಿನ ಭೌಗೋಳಿಕ ವಿಶೇಷತೆಗಳು ಯಾವುವು ಎಂದು ಚರ್ಚಿಸೋಣ.

## ಭೌಗೋಳಿಕ ವಿಶೇಷತೆಗಳು

### ಭೂಪ್ರಕೃತಿ

ಯುರೋಪ್ ವೈವಿಧ್ಯಪೂರ್ಣವಾದ ಭೂಪ್ರಕೃತಿಯನ್ನು ಹೊಂದಿದೆ. ಯುರೋಪಿನ ಭೂಪ್ರಕೃತಿಯನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು. ಅವು ಯಾವುವು ಎಂದು ನೋಡೋಣ.

- ವಾಯುವ್ಯ ಬೆಟ್ಟಗಳು
- ಮಧ್ಯ ಉನ್ನತ ಪ್ರದೇಶಗಳು
- ಉತ್ತರ ಯುರೋಪಿನ ಸಮತಲಗಳು
- ಆಲ್ಪೈನ್ ಪರ್ವತ ಶ್ರೇಣಿಗಳು

**ವಾಯುವ್ಯ ಬೆಟ್ಟಗಳು (North Western Highlands)**

ಯುರೋಪಿನ ವಾಯುವ್ಯ ಪ್ರದೇಶಗಳಲ್ಲಿ ಕಂಡುಬರುವ ಉನ್ನತ ಬೆಟ್ಟಗಳು, ನೋರ್ವೆ, ಸ್ವೀಡನ್, ಫಿನ್ ಲ್ಯಾಂಡ್ ಎಂಬೀ ರಾಷ್ಟ್ರಗಳಲ್ಲಾಗಿ ವ್ಯಾಪಿಸಿರುವ ಸ್ಕ್ಯಾಂಡಿನೇವಿಯನ್ ಪೀಠಭೂಮಿ ಇತ್ಯಾದಿಗಳು ವಾಯುವ್ಯ ಬೆಟ್ಟಗಳ ವಿಶೇಷತೆಗಳಾಗಿವೆ. ಹಿಮದಿಂದಾವೃತವಾದ ಬೆಟ್ಟಗಳು, ಹಿಮನದಿಗಳು, ವೇಗವಾಗಿ ಹರಿಯುವ ನದಿಗಳು, ಸುಂದರವಾದ ಕಾಡುಗಳು ಮತ್ತು ಸರೋವರಗಳಿಂದಾಗಿ ಸ್ಕ್ಯಾಂಡಿನೇವಿಯಾವು ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ದೀರ್ಘಕಾಲದ ಹಿಮನದಿ ಮತ್ತು ಸವೆತದ ಪರಿಣಾಮವಾಗಿ ರೂಪುಗೊಂಡ ದುಂಡಗಿನ ಮೇಲ್ಭಾಗ ಹಾಗೂ ಕಡಿಮೆ ಇಳಿಜಾರನ್ನು ಹೊಂದಿರುವ ಬೆಟ್ಟಗಳು ಹಲವು ಕಡೆಗಳಲ್ಲಿ ಕಂಡುಬರುತ್ತವೆ. ಸ್ಕ್ಯಾಂಡಿನೇವಿಯ ಕರಾವಳಿಯಲ್ಲಿ ಕಂಡುಬರುವ ಫಿಯೋರ್ಡ್ ಗಳು (Fjords) ಈ ಪ್ರದೇಶದ ಇನ್ನೊಂದು ವೈಶಿಷ್ಟ್ಯವಾಗಿದೆ.



*ಚಿತ್ರ 10.5 • ನೋರ್ವೆಯ ಫಿಯೋರ್ಡ್ ತೀರ*

**ಫಿಯೋರ್ಡ್**

*ಹಿಮನದಿಗಳ ಸವೆತ ಪ್ರಕ್ರಿಯೆಯ ಮೂಲಕ 'U' ಆಕಾರದಲ್ಲಿ ರೂಪುಗೊಳ್ಳುವ ಕಣಿವೆಗಳನ್ನು 'U' ಆಕಾರದ ಕಣಿವೆಗಳು ಎನ್ನುವರು. ಫಿಯೋರ್ಡ್ ಗಳು ಉನ್ನತ ಅಕ್ಷಾಂಶ ಪ್ರದೇಶಗಳ ಕರಾವಳಿಗಳಲ್ಲಿ ಈ ರೀತಿಯಲ್ಲಿ ರೂಪುಗೊಳ್ಳುವ ಹಿಮನದಿ ಕಣಿವೆಗಳಾಗಿವೆ. ಉಷ್ಣ-ಶೀತ ಜಲಪ್ರವಾಹಗಳು ಸಂಧಿಸುವ ಪ್ರದೇಶಗಳಲ್ಲಿರುವ ಫಿಯೋರ್ಡ್ ಗಳಲ್ಲಿ ಪ್ಲಾಂಕ್ಟನ್ ಗಳು (Planktons) ಹೇರಳವಾಗಿ ಬೆಳೆಯುತ್ತವೆ. ಇವುಗಳನ್ನು ಆಹಾರವಾಗಿ ಸೇವಿಸಲು ಅನೇಕ ಮೀನುಗಳು ಇಲ್ಲಿಗೆ ಆಗಮಿಸುವುದರಿಂದ ಈ ಪ್ರದೇಶಗಳು ಮತ್ಸ್ಯಸಂಪದ್ಭರಿತವಾಗಿವೆ. ಆದುದರಿಂದ ಸ್ಕ್ಯಾಂಡಿನೇವಿಯಾದ ಪ್ರದೇಶವು ಮೀನುಗಾರಿಕೆಗೆ ಅತ್ಯಂತ ಹೆಸರುವಾಸಿಯಾಗಿದೆ.*

**ಹಿಮನದಿ ರೂಪುಗೊಳ್ಳುವಿಕೆ (Glaciation), ಸವೆತ (Weathering)**

*ಚಲಿಸುವ ಮಂಜಿನ ಪದರುಗಳನ್ನು ಹಿಮನದಿಗಳೆನ್ನುವರು. ಇವುಗಳ ಚಲನೆಯ ಪರಿಣಾಮವಾಗಿ ವಿಭಿನ್ನ ಭೂಸ್ವರೂಪಗಳು ರೂಪುಗೊಳ್ಳುವುದಲ್ಲದೆ ಮೇಲ್ಮೈಯಲ್ಲಿ ಹಲವು ರೂಪಬದಲಾವಣೆಗಳೂ ಉಂಟಾಗುತ್ತವೆ. ಈ ಪ್ರಕ್ರಿಯೆಯನ್ನು ಹಿಮನದಿ ರೂಪುಗೊಳ್ಳುವಿಕೆ ಎನ್ನುವರು.*

*ಭೂಮೇಲ್ಮೈಯಲ್ಲಿರುವ ಶಿಲೆಗಳಲ್ಲಿ ಉಂಟಾಗುವ ಭೌತಿಕ, ರಾಸಾಯನಿಕ ಅಥವಾ ಜೈವಿಕ ವಿಭಜನೆ ಅಥವಾ ಶಿಥಿಲೀಕರಣವನ್ನು ಸವೆತ ಎನ್ನುತ್ತಾರೆ.*

*ಅಟ್ಲಾಸ್‌ನ ಸಹಾಯದಿಂದ ಸ್ಕ್ಯಾಂಡಿನೇವಿಯ ಪ್ರದೇಶದಲ್ಲಿ ಒಳಗೊಂಡಿರುವ ರಾಷ್ಟ್ರಗಳನ್ನು ಕಂಡುಕೊಂಡು ಪಟ್ಟಿ ತಯಾರಿಸಿರಿ.*

### ಉತ್ತರ ಯುರೋಪಿನ ಸಮತಲಗಳು (North European Plains)


*ಚಿತ್ರ 10.6 • ಸ್ಟೆಪ್ಪೀಸ್ ಹುಲ್ಲುಗಾವಲು*

ಉತ್ತರ ಯುರೋಪಿನ ಸಮತಲಗಳು ವಾಯವ್ಯ ಬೆಟ್ಟಗಳ ದಕ್ಷಿಣದಲ್ಲಿದೆ. ಅವುಗಳನ್ನು 'ದ ಗ್ರೇಟ್ ಯುರೋಪಿಯನ್ ಪ್ಲೈನ್' ಎಂದೂ ಕರೆಯುತ್ತಾರೆ. ಈ ಸಮತಲವು ಪೂರ್ವದಲ್ಲಿ ಯೂರಲ್ ಪರ್ವತಗಳಿಂದ ಆರಂಭಿಸಿ ಪಶ್ಚಿಮದಲ್ಲಿ ಅಟ್ಲಾಂಟಿಕ್ ಮಹಾಸಾಗರದ ವರೆಗೆ ವ್ಯಾಪಿಸಿದೆ. ಸಾಮಾನ್ಯವಾಗಿ ಸಮತಟ್ಟಾದ ಭೂಪ್ರಕೃತಿಯುಳ್ಳ ಈ ಸಮತಲದಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ಸಣ್ಣ ಬೆಟ್ಟಗಳು ಕಂಡುಬರುತ್ತವೆ. ಕೃಷಿಗೆ ತುಂಬಾ ಸೂಕ್ತವಾದ ಉತ್ತರ ಯುರೋಪಿನ ಸಮತಲವು ಹಿಮನದಿಗಳ ನಿಕ್ಷೇಪ ಹಾಗೂ ಯುರೋಪಿನ ಪ್ರಮುಖ ನದಿಗಳಾದ ವೋಲ್ಗಾ (Volga), ಡಾನ್ (Don), ನೈಪ್ಪರ್ (Dnieper) ಎಂಬಿವುಗಳ ಮೆಕ್ಕಲು ನಿಕ್ಷೇಪ ಪ್ರಕ್ರಿಯೆಯಿಂದ ರೂಪುಗೊಂಡಿದೆ. ವೋಲ್ಗಾವು ಯುರೋಪಿನ ಅತ್ಯಂತ ಉದ್ದದ ನದಿಯಾಗಿದೆ. ಸ್ಟೆಪ್ಪೀಸ್‌ಗಳು (Steppes) ಉತ್ತರ ಯುರೋಪಿನ ಸಮತಲದಲ್ಲಿ ವ್ಯಾಪಕವಾಗಿ ಕಂಡುಬರುವ ಹುಲ್ಲುಗಾವಲುಗಳಾಗಿವೆ.

*ವೋಲ್ಗಾ ನದಿಯು ಯಾವ ದೇಶದ ಮೂಲಕ ಹರಿಯುತ್ತದೆ ಎಂಬುದನ್ನು ಅಟ್ಲಾಸ್‌ನ ಸಹಾಯದಿಂದ ಕಂಡುಹಿಡಿಯಿರಿ.*

### ಮಧ್ಯ ಉನ್ನತ ಪ್ರದೇಶಗಳು (Central Uplands)

ಮಧ್ಯ ಉನ್ನತ ಪ್ರದೇಶಗಳು ಉತ್ತರ ಯುರೋಪಿನ ಸಮತಲದ ದಕ್ಷಿಣದಲ್ಲಿವೆ. ಸಣ್ಣ ಬೆಟ್ಟಗಳು, ಕಣಿವೆಗಳು ಮತ್ತು ಪೀಠಭೂಮಿಗಳನ್ನು ಹೊಂದಿರುವ ಈ ಭೂಪ್ರದೇಶವು ಪಶ್ಚಿಮದಲ್ಲಿ ಐರ್ಲೇಂಡಿನಿಂದ ಪೂರ್ವದಲ್ಲಿ ರಷ್ಯಾದವರೆಗೆ ವ್ಯಾಪಿಸಿದೆ. ರೈನ್ (Rhine), ರೋನ್ (Rhone) ಎಂಬೀ ನದಿಗಳು ಈ ಪ್ರದೇಶವನ್ನು ಜಲ ಸಂಪದ್ಭರಿತವಾಗಿಸುತ್ತವೆ.

ಮಧ್ಯ ಉನ್ನತ ಪ್ರದೇಶಗಳ ಭಾಗವಾಗಿರುವ ವಿವಿಧ ಭೂಸ್ವರೂಪಗಳನ್ನು ಕೆಳಗೆ ಕೊಡಲಾಗಿದೆ. ಪಟ್ಟಿಯನ್ನು ಪರಿಶೀಲಿಸಿ ಅವು ಯಾವ ದೇಶದಲ್ಲಿವೆ ಎಂದು ಕಂಡುಕೊಳ್ಳಿರಿ. ಅಟ್ಲಾಸ್ ನ ಸಹಾಯದಿಂದ ಅವುಗಳ ಸ್ಥಾನವನ್ನು ಕಂಡುಹಿಡಿಯಿರಿ.

**ಮಧ್ಯ ಉನ್ನತ ಪ್ರದೇಶಗಳ ಪ್ರಮುಖ ಭೂಸ್ವರೂಪಗಳು**

| ಭೂಸ್ವರೂಪಗಳು | ದೇಶ |
|---|---|
| ರೈನ್ ಕಣಿವೆ (Rhine Valley), ವೋಸ್ಗೆಸ್ ಪರ್ವತಗಳು (Vosges Mountains), ಜೂರಾ ಪರ್ವತಗಳು (Jura Mountains), ಸೆಂಟ್ರಲ್ ಮಾಸಿಫ್ ಪೀಠಭೂಮಿ (Central Massif Plateau) | ಫ್ರಾನ್ಸ್ |
| ಅರ್ಡೆನೆಸ್ ಪರ್ವತಗಳು (Ardennes Mountains) | ಬೆಲ್ಜಿಯಂ |

| | |
|---|---|
| ಬ್ಲೇಕ್ ಫೋರೆಸ್ಟ್ ಪರ್ವತಗಳು (Black Forest Mountains), ಹಾರ್ಸ್ ಪರ್ವತಗಳು (Harz Mountains) | ಜರ್ಮನಿ |
| ಮಸೆಟ್ಟಾ ಪೀಠಭೂಮಿ (Maseta Plateau) | ಸ್ಪೇನ್ |
| ಬೊಹೀಮಿಯನ್ ಪೀಠಭೂಮಿ (Bohemian Plateau) | ಜೆಕ್ ಗಣರಾಜ್ಯ |



*ಚಿತ್ರ 10.7* • *ಜರ್ಮನಿಯ ಬ್ಲೇಕ್ ಫೋರೆಸ್ಟ್ ಪರ್ವತಗಳು*




*ಚಿತ್ರ 10.8* •

### *ಜ್ಯುರಾಸಿಕ್ ಪಾರ್ಕ್*

*ಜ್ಯುರಾಸಿಕ್ ಪಾರ್ಕ್ ಎಂಬ ಸಿನೆಮಾವನ್ನು ನೀವು ನೋಡಿರುವಿರಾ? ಜಗತ್ತಿನ ಅತಿದೊಡ್ಡ ಜೀವಿಯಾಗಿದ್ದ ಡೈನೋಸಾರ್ ಗಳು ಜ್ಯುರಾಸಿಕ್ ಕಾಲದಲ್ಲಿ ವಾಸಿಸುತ್ತಿದ್ದವು. ಸುಮಾರು 143 ದಶಲಕ್ಷ ವರ್ಷಗಳಿಗಿಂತಲೂ ಹಿಂದಿನ ಕಾಲದ ಪಳೆಯುಳಿಕೆಗಳು ಯುರೋಪಿನ ಜೂರಾ ಪರ್ವತ ಸಾಲುಗಳಿಂದ ಲಭಿಸಿದುದರಿಂದ ಜುರಾಸಿಕ್ ಕಾಲಘಟ್ಟಕ್ಕೆ ಆ ಹೆಸರು ಬಂತು.*

*ಮಧ್ಯ ಉನ್ನತ ಪ್ರದೇಶಗಳಿಗೆ ಸೇರಿದ ಪೀಠಭೂಮಿಗಳು ಇರುವ ದೇಶಗಳು ಯಾವುವು ಎಂದು ಕಂಡುಹಿಡಿದು ಬರೆಯಿರಿ.*

- *ಫ್ರಾನ್ಸ್*
- 
- 



*ಚಿತ್ರ 10.9* • *ಆಲ್ಫ್ಸ್ ಪರ್ವತ ಶ್ರೇಣಿ*

### ಆಲ್ಪೈನ್ ಪರ್ವತ ಶ್ರೇಣಿಗಳು (Alpine Mountain System)

ಆಲ್ಪೈನ್ ಪರ್ವತಗಳು ಮಧ್ಯ ಉನ್ನತ ಪ್ರದೇಶದ ದಕ್ಷಿಣದಲ್ಲಿರುವ ಸಮಾನಾಂತರ ಪರ್ವತ ಶ್ರೇಣಿಗಳಿಂದೊಡಗೂಡಿದ ಮಡಚು ಪರ್ವತಗಳಾಗಿವೆ. ಈ ಪರ್ವತಗಳು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರದಿಂದ ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೆ ವ್ಯಾಪಿಸಿವೆ. ಆಲ್ಫ್ಸ್ (Alps), ಕೊಕಾಸಸ್ (Caucasus), ಕಾರ್ಪಾಥಿಯನ್ಸ್ (Carpathians) ಎಂಬಿವು ಪ್ರಮುಖ ಆಲ್ಪೈನ್ ಪರ್ವತ ಶ್ರೇಣಿಗಳಾಗಿವೆ. ಕೊಕಾಸಸ್ ಪರ್ವತ ಶ್ರೇಣಿಯಲ್ಲಿರುವ ಮೌಂಟ್ ಎಲ್ಬ್ರುಸ್ ಯುರೋಪಿನ ಅತಿ ಎತ್ತರದ ಶಿಖರವಾಗಿದೆ.



ಚಿತ್ರ 10.10 • ಡ್ರ್ಯಾಕುಲಾ ಕೋಟೆ

## ಡ್ರ್ಯಾಕುಲಾ ಕೋಟೆ

“ಗೆಳೆಯ, ಕಾರ್ಪಾಥಿಯನ್‌ಗೆ ಸ್ವಾಗತ, ಲಂಡನಿನಿಂದ ಪ್ರಯಾಣವು ಸುಖಕರವಾಗಿತ್ತು ಎಂದು ಭಾವಿಸುತ್ತೇನೆ. ನಿಮ್ಮನ್ನು ನೋಡಲು ನಾನು ಕಾತರಳಾಗಿದ್ದೇನೆ. ಇಂದು ಚೆನ್ನಾಗಿ ನಿದ್ರೆ ಮಾಡಿರಿ. ನಾಳೆ ಮೂರು ಗಂಟೆಗೆ ಬುಕೊವಿನೋಗೆ ಹೊರಡುವ ರೈಲಿನಲ್ಲಿ ನಿಮಗಾಗಿ ಒಂದು ಸೀಟನ್ನು ಕಾಯ್ದಿರಿಸಿದ್ದೇನೆ. ನನ್ನ ದೇಶದಲ್ಲಿ ವಾಸ್ತವ್ಯವು ನಿಮಗೆ ಇಷ್ಟವಾಗದಿರದು ಎಂಬ ನಂಬಿಕೆಯೊಂದಿಗೆ, ನಿಮ್ಮ ಸ್ವಂತ ಡ್ರ್ಯಾಕುಲಾ”.

ಇದು ಒಂದು ಶತಮಾನಕ್ಕೂ ಹೆಚ್ಚು ಕಾಲ ಪ್ರಪಂಚದಾದ್ಯಂತ ಓದುಗರನ್ನು ಭಯಭೀತಿಗೊಳಿಸಿದ ‘ಡ್ರ್ಯಾಕುಲಾ’ ಎಂಬ ಕಾದಂಬರಿಯ ಭಾಗವಾಗಿದೆ. ಲಂಡನ್ ನಗರದಲ್ಲಿ ಅರಮನೆಯನ್ನು ಖರೀದಿಸಲು ಉದ್ದೇಶಿಸಿದ್ದ ಡ್ರ್ಯಾಕುಲಾ ಪ್ರಭು ಎಂಬ ರಕ್ತರಾಕ್ಷಸಿಯನ್ನು ಹುಡುಕಿಕೊಂಡು ನಾಯಕನಾದ ಜೋನಾಥನ್ ಹಾರ್ಕರ್ ಡ್ರ್ಯಾಕುಲಾ ಕೋಟೆಗೆ ಆಗಮಿಸುವುದರೊಂದಿಗೆ ಕಾದಂಬರಿಯು ಪ್ರಾರಂಭವಾಗುತ್ತದೆ. 1897 ರಲ್ಲಿ ಐರಿಷ್ ಸಾಹಿತಿಯಾದ ಬ್ರಾಮ್ ಸ್ಟೋಕರ್ ರಚಿಸಿದ ಈ ಕಾದಂಬರಿಯ ಹೆಚ್ಚಿನ ಭಾಗಗಳ ಹಿನ್ನೆಲೆಯಾದ ಡ್ರ್ಯಾಕುಲಾ ಕೋಟೆಯು ಕಾರ್ಪಾಥಿಯನ್ ಪರ್ವತ ಶ್ರೇಣಿಯಲ್ಲಿದೆ.

## ಮಡಚು ಪರ್ವತಗಳು

ಭೂಮಿಯ ಹೊರ ಪದರಾದ ಭೂವಲ್ಕವೂ ಮೇಂಟಲಿನ ಮೇಲ್ಭಾಗವೂ ಸೇರಿ ಸಾಮಾನ್ಯವಾಗಿ ಘನಸ್ಥಿತಿಯಲ್ಲಿರುವ ಮಂಡಲವೇ ಶಿಲಾಮಂಡಲ (Lithosphere). ಶಿಲಾಮಂಡಲವು ಕ್ರಮಬದ್ಧವಲ್ಲದ ಅಂಚುಗಳಿಂದ ಕೂಡಿದ ತುಂಡುಗಳಾಗಿವೆ. ಸಾವಿರಾರು ಕಿಲೋಮೀಟರ್ ವಿಸ್ತಾರವೂ ಸರಾಸರಿ 100 ಕಿಲೋ ಮೀಟರ್ ದಪ್ಪವೂ ಇರುವ ಇವುಗಳನ್ನು ಶಿಲಾಮಂಡಲ ಫಲಕಗಳು (Lithospheric plates) ಎಂದು ಕರೆಯುತ್ತಾರೆ. ಫಲಕಗಳು ಪರಸ್ಪರ ಡಿಕ್ಕಿ ಹೊಡೆಯುವ ಫಲಕ ಮೇರೆಗಳಲ್ಲಿ ಶಿಲಾಫಲಕಗಳು ಮಡಚಿ ಮೇಲಕ್ಕೆತ್ತಲ್ಪಟ್ಟು ರೂಪುಗೊಳ್ಳುವ ಪರ್ವತಗಳನ್ನು ಮಡಚು ಪರ್ವತಗಳು ಎನ್ನುವರು. ಉದಾ : ಹಿಮಾಲಯ ಪರ್ವತ

ಯುರೋಪಿನ ಪ್ರಾಕೃತಿಕ ಭೂಪಟ (ಚಿತ್ರ 10.4) ದಿಂದ ಕೊಕಾಸಸ್ ಪರ್ವತ ಶ್ರೇಣಿಯನ್ನು ಕಂಡುಹಿಡಿಯಿರಿ. ಯುರೋಪಿನ ಅತಿ ಎತ್ತರದ ಶಿಖರವನ್ನು ತ್ರಿಕೋನ (▲) ಚಿಹ್ನೆಯಿಂದ ಸೂಚಿಸಲಾಗಿದೆ. ಈ ಶಿಖರದ ಹೆಸರನ್ನು ಕಂಡುಹಿಡಿದು ಬರೆಯಿರಿ.

ಯುರೋಪಿನ ಭೂಪ್ರಕೃತಿಗೆ ಸಂಬಂಧಿಸಿ ಕೆಳಗೆ ಕೊಡಲಾದ ಚಾರ್ಟನ್ನು ಪೂರ್ತಿಗೊಳಿಸಿರಿ.

**ಯುರೋಪಿನ ಪ್ರಮುಖ ಭೌಗೋಳಿಕ ವಿಭಾಗಗಳು**

| ವಾಯವ್ಯ ಬೆಟ್ಟಗಳು | | ಮಧ್ಯ ಉನ್ನತ ಪ್ರದೇಶಗಳು | |
|---|---|---|---|
| • <br> • | • ಸ್ಟೆಪ್ಪೀಸ್ <br> • | • <br> • | • ಮಡಚು ಪರ್ವತಗಳು <br> • |

## ಹವಾಗುಣ ಹಾಗೂ ನೈಸರ್ಗಿಕ ಸಸ್ಯ – ಜೀವಜಾಲಗಳು

ಯುರೋಪಿನ ಸಾಮಾನ್ಯ ಹವಾಗುಣವು ತುಲನಾತ್ಮಕವಾಗಿ ಕಠಿಣವಾದ ಚಳಿಗಾಲ ಹಾಗೂ ಮಿತವಾದ ಬೇಸಿಗೆ ಕಾಲದಿಂದ ಕೂಡಿದೆ. ಆದರೆ ಹವಾಗುಣದಲ್ಲಿ ಪ್ರಾದೇಶಿಕವಾದ ವ್ಯತ್ಯಾಸವು ಅನುಭವಕ್ಕೆ ಬರುತ್ತದೆ. ಅಕ್ಷಾಂಶ ಸ್ಥಾನ, ಭೂಪ್ರಕೃತಿ, ಸಮುದ್ರ ಸಾಮೀಪ್ಯ ಎಂಬಿವು ಹವಾಗುಣದ ಮೇಲೆ ಪ್ರಭಾವ ಬೀರುತ್ತವೆ.

ಉನ್ನತ ಅಕ್ಷಾಂಶ ಸ್ಥಾನ, ಪರ್ವತಗಳ ಪ್ರಭಾವ ಎಂಬಿವು ಉತ್ತರ ಮತ್ತು ಪೂರ್ವ ದಿಕ್ಕುಗಳಲ್ಲಿ ಶುಷ್ಕ, ಶೈತ್ಯ ಹವಾಗುಣಕ್ಕೆ ಕಾರಣವಾಗಿವೆ. ಆದರೆ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಸಮುದ್ರದ ಪ್ರಭಾವದಿಂದಾಗಿ ಮಿತವಾದ ಹವಾಗುಣವು ಅನುಭವಕ್ಕೆ ಬರುತ್ತದೆ.

ಯುರೋಪ್ ಮರುಭೂಮಿ ಇಲ್ಲದ ಜಗತ್ತಿನ ಏಕೈಕ ಭೂಖಂಡವಾಗಿದೆ. ಯುರೋಪಿನ ಹೆಚ್ಚಿನ ಪ್ರದೇಶಗಳಲ್ಲೂ ಮಳೆಯ ವಿವಿಧ ರೂಪಗಳಾದ ವೃಷ್ಟಿ, ಹಿಮಪಾತಗಳು ಲಭಿಸುತ್ತವೆ.

### *ಮಳೆ*

*ಮಳೆ ಎಂಬುದು ನಿರಂತರವಾದ ಘನೀಕರಣ ಪ್ರಕ್ರಿಯೆಯಿಂದಾಗಿ ನೀರಿನ ಕಣಗಳು ಮೋಡಗಳಿಂದ ಬೇರ್ಪಟ್ಟು ಘನ, ದ್ರವ ರೂಪಗಳಲ್ಲಿ ಭೂಮಿಗೆ ಬೀಳುವ ಪ್ರಕ್ರಿಯೆಯಾಗಿದೆ. ವೃಷ್ಟಿ, ಹಿಮಪಾತ, ಹಿಮ ವೃಷ್ಟಿ (Sleet), ಆಲಿಕಲ್ಲು ಮಳೆ (Hail Stone) ಎಂಬಿವು ಮಳೆಯ ವಿವಿಧ ರೂಪಗಳಾಗಿವೆ.*

### *ಉಷ್ಣ ಮರುಭೂಮಿ ಮತ್ತು ಶೀತ ಮರುಭೂಮಿ*

*ಮರುಭೂಮಿ ಎಂಬ ಪದವನ್ನು ಕೇಳಿದಾಗ ನಮ್ಮ ಮನಸ್ಸಿಗೆ ಬರುವ ಮೊದಲ ಚಿತ್ರವೆಂದರೆ ವಿಶಾಲವಾಗಿ ವ್ಯಾಪಿಸಿರುವ ಮರಳಿನ ಪ್ರದೇಶವಾಗಿದೆ. ಆದರೆ ಅಷ್ಟು ಮಾತ್ರವಲ್ಲ, ವಾರ್ಷಿಕ 25 ಸೆಂಟಿಮೀಟರ್‌ಗಳಿಗಿಂತ ಹೆಚ್ಚು ಮಳೆ ಲಭಿಸದ ಯಾವುದೇ ಪ್ರದೇಶವನ್ನು ಮರುಭೂಮಿ ಎಂದು ಪರಿಗಣಿಸಲಾಗುತ್ತದೆ. ವರ್ಷಪೂರ್ತಿ ಹಿಮದಿಂದಾವೃತವಾದ ಅಂಟಾರ್ಟಿಕಾವೂ ಒಂದು ಮರುಭೂಮಿಯಾಗಿದೆ. ಅಂಟಾರ್ಟಿಕಾವನ್ನು ಶೀತಮರುಭೂಮಿ ಎಂದು ಪರಿಗಣಿಸಲಾಗುತ್ತದೆ.*

ಹವಾಗುಣದ ಆಧಾರದಲ್ಲಿ ಯುರೋಪನ್ನು ವಿವಿಧ ಹವಾಗುಣ ವಲಯಗಳಾಗಿ ವಿಂಗಡಿಸಬಹುದು. ಪ್ರತಿಯೊಂದು ಹವಾಗುಣ ವಲಯಕ್ಕೂ ಅನುಯೋಜ್ಯವಾದ ಸಸ್ಯ - ಜೀವಜಾಲಗಳು ಕಂಡುಬರುತ್ತವೆ.




*ಚಿತ್ರ 10.11 • ಯುರೋಪಿನ ಹವಾಗುಣ ವಲಯಗಳು*

### ಆರ್ಕ್ಟಿಕ್ ಹವಾಗುಣ/ ತಂದ್ರಾ ಹವಾಗುಣ (Arctic/Tundra Climate)

ಯುರೋಪಿನ ಆರ್ಕ್ಟಿಕ್ ಪ್ರದೇಶಗಳಲ್ಲಿ ತಂದ್ರಾ ಹವಾಗುಣವು ಅನುಭವಕ್ಕೆ ಬರುತ್ತದೆ. ಶೈತ್ಯವಿರುವ ಹ್ರಸ್ವ ಬೇಸಗೆಕಾಲವೂ ಅತಿದೀರ್ಘವಾದ ಕಠಿಣ ಚಳಿಗಾಲವು ಆರ್ಕ್ಟಿಕ್ ಹವಾಗುಣದ ವಿಶೇಷತೆಯಾಗಿದೆ. ಬೇಸಗೆ ಕಾಲದಲ್ಲಿ ಉಷ್ಣತೆಯು 10°C ವರೆಗೆ ಏರಿಕೆಯಾದರೆ ಚಳಿಗಾಲದಲ್ಲಿ ಉಷ್ಣತೆಯು -25°C ರಿಂದ -40°C ವರೆಗೆ ಕುಸಿಯುತ್ತದೆ.

ಇಲ್ಲಿ ಚಳಿಗಾಲದಲ್ಲಿ 5 ರಿಂದ 6 ತಿಂಗಳುಗಳ ಕಾಲ ಸೂರ್ಯಪ್ರಕಾಶವಿರುವುದಿಲ್ಲ.



ಚಿತ್ರ 10.12 •

ಚಿತ್ರ 10.12 ರಲ್ಲಿ ಒಬ್ಬ ವ್ಯಕ್ತಿಯು ನೀರನ್ನು ವಾತಾವರಣಕ್ಕೆ ಬೀಸಿ ಚೆಲ್ಲಿದಾಗ ಅದು ಕೆಲವೇ ಕ್ಷಣದಲ್ಲಿ ಮಂಜುಗಡ್ಡೆಯಾಗಿ ಬದಲಾಗುವ ದೃಶ್ಯವನ್ನು ಕಾಣಬಹುದು. ಇದರಿಂದ ಇಲ್ಲಿನ ಶೈತ್ಯದ ತೀವ್ರತೆಯನ್ನು ತಿಳಿದುಕೊಳ್ಳಬಹುದು.

ಸಸ್ಯಜಾಲಗಳ ಬೆಳವಣಿಗೆಗೆ ಸೂರ್ಯಪ್ರಕಾಶವು ಎಷ್ಟು ಪ್ರಮುಖವಾದುದು ಎಂದು ನಮಗೆ ತಿಳಿದಿದೆ. ದೀರ್ಘ ರಾತ್ರಿಗಳೂ ಕಠಿಣವಾದ ಶೈತ್ಯವೂ ಹಿಮದ ರೂಪದಲ್ಲಿರುವ ಮಳೆಯೂ ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಈ ಕಾರಣದಿಂದಾಗಿ ಶೈತ್ಯವನ್ನು ತಡೆದುಕೊಳ್ಳಬಲ್ಲ ಪೊದರು ಸಸ್ಯಗಳು (Shrubs), ಶಿಲೀಂಧ್ರಗಳು (Lichens), ಹಾವಸೆಗಳು (Mosses) ಮಾತ್ರ ಈ ಹವಾಗುಣದಲ್ಲಿ ಬೆಳೆಯುತ್ತವೆ.

ತಂದ್ರಾ ಹವಾಗುಣ ವಲಯದ ಸಸ್ಯಜಾಲಗಳ ಕೊರತೆಯು ಇಲ್ಲಿನ ಪ್ರಾಣಿಗಳ ಸಂಖ್ಯೆಯ ಮೇಲೂ ಪರಿಣಾಮವನ್ನು ಬೀರುತ್ತದೆ. ಶೈತ್ಯವನ್ನು ಎದುರಿಸಿ ಬದುಕಲು ಸಾಧ್ಯವಿರುವ, ದಪ್ಪವಾದ ರೋಮಗಳಿರುವ ತೋಳ, ಹಿಮಸಾರಂಗ (Reindeer), ಧ್ರುವಕರಡಿ (Polar bear), ಆರ್ಕ್ಟಿಕ್ ಕಾಡುಮೊಲ (Arctic hare) ದಂತಹ ಬಹಳ ಕಡಿಮೆ ಮೃಗಗಳನ್ನು ಮಾತ್ರ ಇಲ್ಲಿ ಕಾಣಲು ಸಾಧ್ಯ.



*ಚಿತ್ರ 10.13 • ತೋಳ*



*ಚಿತ್ರ 10.14 • ಹಿಮಸಾರಂಗ*



*ಚಿತ್ರ 10.15 • ಧ್ರುವಕರಡಿ*

*ಆರ್ಕ್ಟಿಕ್ ಹವಾಗುಣದಂತಹ ಸನ್ನಿವೇಶದಲ್ಲಿ ವಾಸಿಸಬೇಕಾಗಿ ಬಂದರೆ ನಿಮ್ಮ ದೈನಂದಿನ ಜೀವನದಲ್ಲಿ ಏನೇನು ಬದಲಾವಣೆಗಳು ಉಂಟಾಗಬಹುದು ಎಂಬುದನ್ನು ಚರ್ಚಿಸಿ ತರಗತಿಯಲ್ಲಿ ಮಂಡಿಸಿರಿ.*

*ಸೂಚನೆಗಳು : ಆಹಾರ ವಿಧಾನ, ಉಡುಗೆತೊಡುಗೆ, ಕೃಷಿ*

## ಉಪ ಆರ್ಕ್ಟಿಕ್ ಹವಾಗುಣ/ಟೈಗಾ ಹವಾಗುಣ

**(Sub Arctic/Taiga Climate)**



*ಚಿತ್ರ 10.16 • ಸೂಜಿಮೊನೆ ವೃಕ್ಷಗಳು*

ತಂದ್ರಾ ಪ್ರದೇಶಗಳಿಗೆ ಸಮೀಪದಲ್ಲಿರುವ ದಕ್ಷಿಣ ಉಪ ಆರ್ಕ್ಟಿಕ್ ಪ್ರದೇಶಗಳಲ್ಲಿ ಟೈಗಾ ಹವಾಗುಣವು ಅನುಭವಕ್ಕೆ ಬರುತ್ತದೆ. ಹ್ರಸ್ವವಾದ ಬೇಸಗೆಕಾಲವು ಮಿತವಾದ



ಚಿತ್ರ 10.17 • ಎರ್ಮೈನ್



ಚಿತ್ರ 10.18 • ಬೆಳ್ಳಿ ನರಿ

ಉಷ್ಣತೆಯನ್ನು ಹೊಂದಿದ್ದರೂ ಚಳಿಗಾಲವು ಆರ್ಕ್ಟಿಕ್ ಹವಾಗುಣ ವಲಯದಂತೆ ಅತಿ ತೀವ್ರವಾಗಿರುತ್ತದೆ. ವರ್ಷದಲ್ಲಿ 5 ರಿಂದ 7 ತಿಂಗಳುಗಳ ವರೆಗೆ ಉಷ್ಣತೆಯು $0^{0}$C ಗಿಂತಲೂ ಕಡಿಮೆಯಾಗಿರುತ್ತದೆ. ಟೈಗಾ ಹವಾಗುಣ ವಲಯದಲ್ಲಿ ಮಳೆಯು ಸಾಮಾನ್ಯವಾಗಿ ಹಿಮ ರೂಪದಲ್ಲಿರುತ್ತದೆ.

ಟೈಗಾ ಹವಾಗುಣ ವಲಯದ ಪ್ರಮುಖ ಸಸ್ಯವರ್ಗವು ಸೂಜಿಮೊನೆ ಮರಗಳಿಂದ (Coniferous Trees) ಕೂಡಿದ ನಿತ್ಯ ಹರಿದ್ವರ್ಣ ಕಾಡುಗಳಾಗಿವೆ. ಪೈನ್ (Pine), ದೇವದಾರು (Cedar) ಎಂಬಿವು ಇಲ್ಲಿನ ಪ್ರಮುಖ ವೃಕ್ಷಗಳಾಗಿವೆ. ಮೈತುಂಬ ರೋಮಗಳಿರುವ ಕಾಡುಬೆಕ್ಕು (Lynx), ಎರ್ಮೈನ್ (Ermine), ಬೆಳ್ಳಿನರಿ (Silver Fox) ಎಂಬಿವು ಇಲ್ಲಿನ ಪ್ರಮುಖ ಪ್ರಾಣಿಗಳು.

*ಕೊಟ್ಟಿರುವ ಪಟ್ಟಿಯನ್ನು ಉಪ ಆರ್ಕ್ಟಿಕ್ ಹವಾಗುಣದ ಆಧಾರದಲ್ಲಿ ಪೂರ್ತಿಗೊಳಿಸಿರಿ.*

| ರಾಷ್ಟ್ರಗಳು | ಸಸ್ಯಜಾಲಗಳು | ಪ್ರಾಣಿಜಾಲಗಳು |
|---|---|---|
| ನೋರ್ವೆ, ಸ್ವೀಡನ್, ಫಿನ್ ಲ್ಯಾಂಡ್, ರಷ್ಯಾ | | |

## ಪೂರ್ವ ಯುರೋಪಿಯನ್ ಹವಾಗುಣ

**(Eastern European Climate)**



ಚಿತ್ರ 10.19 • ಕೃಷ್ಣಮೃಗ

ಯುರೋಪಿನ ಪೂರ್ವ ಪ್ರದೇಶಗಳಲ್ಲಿ ಕಠಿಣ ಬೇಸಗೆ ಹಾಗೂ ಅತ್ಯಂತ ಶೈತ್ಯ ಚಳಿಗಾಲವು ಅನುಭವಕ್ಕೆ ಬರುತ್ತದೆ. ಈ ಹವಾಗುಣವನ್ನು ಪೂರ್ವ ಯುರೋಪಿಯನ್ ಹವಾಗುಣ ಎಂದು ಕರೆಯುತ್ತಾರೆ. ಚಳಿಗಾಲದ ಹೆಚ್ಚಿನ ದಿನಗಳಲ್ಲಿ ಉಷ್ಣತೆಯು 0°C ಗಿಂತಲೂ ಕಡಿಮೆಯಾಗುತ್ತದೆ. ಬೇಸಗೆಯಲ್ಲಿ ಹಗುರವಾದ ಮಳೆ ಲಭಿಸುತ್ತದೆ.

ವಿರಳ ಮಳೆ ಮತ್ತು ತೀವ್ರವಾದ ಉಷ್ಣತೆಯ ಕಾರಣದಿಂದಾಗಿ ಈ ಹವಾಗುಣವು ಅನುಭವಕ್ಕೆ ಬರುವ ಪ್ರದೇಶಗಳಲ್ಲಿ ದೊಡ್ಡ ಮರಗಳು ಬೆಳೆಯುವುದಿಲ್ಲ. ಯುರೋಪಿನ ಹುಲ್ಲುಗಾವಲಾದ ಸ್ಟೆಪ್ಪೀಸ್‌ನ ಕುರಿತು ಚರ್ಚಿಸಿದುದು ನಿಮಗೆ ನೆನಪಿದೆಯಲ್ಲವೆ? ಸ್ಟೆಪ್ಪೀಸ್‌ಗಳಲ್ಲಿ ಪೂರ್ವ ಯುರೋಪಿಯನ್ ಹವಾಗುಣವು ಅನುಭವಕ್ಕೆ ಬರುತ್ತದೆ. ಕೃಷ್ಣಮೃಗ (Antelope), ತೋಳ (Wolf), ಕುದುರೆ (Horse) ಎಂಬಿವು ಇಲ್ಲಿ ಕಂಡುಬರುವ ಪ್ರಾಣಿಗಳಾಗಿವೆ.

*ಪೂರ್ವ ಯುರೋಪಿಯನ್ ಹವಾಗುಣವು ಅನುಭವಕ್ಕೆ ಬರುವ ರಷ್ಯಾ, ಉಕ್ರೇನ್, ರೊಮೇನಿಯಾ, ಹಂಗೆರಿ, ಬಲ್ಗೇರಿಯಾ ಮೊದಲಾದ ದೇಶಗಳನ್ನು ಮಾರ್ಬಲ್ ಸೋಫ್ಟ್ ವೇರ್ ಉಪಯೋಗಿಸಿ ತಿಳಿದುಕೊಳ್ಳಿರಿ.*

## ಪಶ್ಚಿಮ ಯುರೋಪಿಯನ್ ಹವಾಗುಣ
**(Western European Climate)**

ತೀವ್ರವಾದ ಚಳಿಗಾಲ, ಮಿತವಾದ ಉಷ್ಣತೆ ಹಾಗೂ ವರ್ಷಪೂರ್ತಿ ಲಭಿಸುವ ಮಳೆಯು ಪಶ್ಚಿಮ ಯುರೋಪಿನ ಹವಾಗುಣದ ವಿಶೇಷತೆಯಾಗಿದೆ. ವಾಯವ್ಯ ಯುರೋಪಿನ ದೇಶಗಳಾದ ಬ್ರಿಟನ್, ನೆದರ್‌ಲೇಂಡ್ಸ್ (Netherlands), ಬೆಲ್ಜಿಯಂ (Belgium), ದಕ್ಷಿಣ ನೋರ್ವೆ, ಡೆನ್ಮಾರ್ಕ್ (Denmark), ಪಶ್ಚಿಮ ಫ್ರಾನ್ಸ್, ಉತ್ತರ ಸ್ಪೇನ್ ಮೊದಲಾದೆಡೆಗಳಲ್ಲಿ ಪಶ್ಚಿಮ ಯುರೋಪಿನ ಹವಾಗುಣವು ಅನುಭವಕ್ಕೆ ಬರುತ್ತದೆ. ಅಟ್ಲಾಂಟಿಕ್ ಸಾಗರವು ಇಲ್ಲಿನ ಹವಾಗುಣದ ಮೇಲೆ ಪ್ರಭಾವ ಬೀರುತ್ತದೆ.



*ಚಿತ್ರ 10.20 • ಬೀಚ್*

ಪಶ್ಚಿಮ ಯುರೋಪಿನ ಹವಾಗುಣವು ಸಸ್ಯಗಳ ಬೆಳವಣಿಗೆಗೆ ಸೂಕ್ತವಾಗಿದೆ. ಬಲಿಷ್ಠವಾದ ಮರ ಹಾಗೂ ಅಗಲವಾದ ಎಲೆಗಳನ್ನು ಹೊಂದಿರುವ ಎಲೆ ಉದುರಿಸುವ ಮರಗಳು ಕಂಡುಬರುತ್ತವೆ. ಬೀಚ್ (Beech), ಎಲ್ಮ್ (Elm), ಓಕ್ (Oak), ಬಿರ್ಚ್ (Birch), ಆಶ್ (Ash) ಎಂಬಿವುಗಳು ಇಂತಹ ಮರಗಳಿಗೆ ಉದಾಹರಣೆಗಳಾಗಿವೆ. ಅಳಿಲು, ನರಿ, ಮೊಲ, ಜಿಂಕೆ, ತೋಳ ಇತ್ಯಾದಿಗಳೂ ಇಲ್ಲಿ ಕಂಡುಬರುತ್ತವೆ.



*ಚಿತ್ರ 10.21 • ಎಲ್ಮ್*



*ಚಿತ್ರ 10.22 • ಓಕ್*



*ಚಿತ್ರ 10.23 • ಆಶ್*

## ಮೆಡಿಟರೇನಿಯನ್ ಹವಾಗುಣ (Mediterranean Climate)

ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನುಭವಕ್ಕೆ ಬರುವ ಹವಾಗುಣವೇ ಮೆಡಿಟರೇನಿಯನ್ ಹವಾಗುಣ. ಪೋರ್ಚುಗಲ್, ಸ್ಪೇನ್, ಇಟಲಿ, ಗ್ರೀಸ್, ಬೋಸ್ನಿಯ, ಹರ್ಜೆಗೋವಿನಾ, ಕ್ರೊಯೇಷಿಯಾ, ದಕ್ಷಿಣ ಫ್ರಾನ್ಸ್ ಎಂಬೆಡೆಗಳಲ್ಲಿ ಮೆಡಿಟರೇನಿಯನ್ ಹವಾಗುಣವು ಅನುಭವಕ್ಕೆ ಬರುತ್ತದೆ. ಅಧಿಕ ಉಷ್ಣತೆಯ ಶುಷ್ಕ ಬೇಸಗೆಕಾಲವೂ ತಂಪಾದ, ಮಳೆಯಿಂದೊಡಗೂಡಿದ ಚಳಿಗಾಲವೂ ಮೆಡಿಟರೇನಿಯನ್ ಹವಾಗುಣ ವಲಯದ ವಿಶೇಷತೆಯಾಗಿದೆ.



*ಚಿತ್ರ 10.24 • ಲ್ಯಾವೆಂಡರ್*

ಇದು ಮರಗಳು ಮತ್ತು ಪೊದರು ಸಸ್ಯಗಳು ಚೆನ್ನಾಗಿ ಬೆಳೆಯುವ ಹವಾಗುಣವಾಗಿದೆ. ರೋಸ್ ಮೇರಿ (Rosemary), ಲ್ಯಾವೆಂಡರ್ (Lavender), ಒಲೀವ್ (Olive), ಪೈನ್ (Pine), ಕಿತ್ತಳೆ (Orange), ದ್ರಾಕ್ಷೆ (Grape), ಅತ್ತಿ (Fig) ಎಂಬಿವು ಇಲ್ಲಿನ ಪ್ರಮುಖ ಸಸ್ಯಗಳಾಗಿವೆ.



*ಚಿತ್ರ 10.25 • ಒಲೀವ್*

ಐಬೀರಿಯನ್ ಕಾಡುಬೆಕ್ಕು (Iberian Lynx), ಬಾರ್ಬರಿ ಮಕಾಕ್ (Barbary Macaque), ಮಫ್ಲಾನ್ ಮೇಕೆ (Mouflon Goat), ಸ್ಪಾನಿಷ್ ಇಂಪೀರಿಯಲ್ ಗಿಡುಗ



*ಚಿತ್ರ 10.26 • ಅತ್ತಿ*

(Spanish Imperial Eagle), ಮರಗುಬ್ಬಿ (Nuthatch) ಮೊದಲಾದ ಅತ್ಯಪೂರ್ವವಾದ ಪ್ರಾಣಿಜಾಲಗಳು ಮೆಡಿಟರೇನಿಯನ್ ಹವಾಗುಣ ವಲಯದಲ್ಲಿ ಕಂಡುಬರುತ್ತವೆ.



*ಚಿತ್ರ 10.27 • ಸ್ಪಾನಿಷ್ ಇಂಪೀರಿಯಲ್ ಗಿಡುಗ*



*ಚಿತ್ರ 10.28 • ಐಬೀರಿಯನ್ ಕಾಡುಬೆಕ್ಕು*



*ಚಿತ್ರ 10.29 • ಬಾರ್ಬರಿ ಮಕಾಕ್*



*ಚಿತ್ರ 10.30 • ಮಫ್ಲಾನ್ ಮೇಕೆ*

### *ವಿಟ್ಟಿ ಕಲ್ಚರ್*

*ಮೆಡಿಟರೇನಿಯನ್ ಪ್ರದೇಶದ ದ್ರಾಕ್ಷಿ ಕೃಷಿಯು ಅತ್ಯಂತ ಪ್ರಸಿದ್ಧವಾಗಿದೆ. ವೈಜ್ಞಾನಿಕವಾಗಿ ನಡೆಸುವ ದ್ರಾಕ್ಷಿ ಕೃಷಿಯನ್ನು ವಿಟ್ಟಿ ಕಲ್ಚರ್ (Viticulture) ಎನ್ನುತ್ತಾರೆ. ಇದರೊಂದಿಗೆ ದ್ರಾಕ್ಷಾರಸ ತಯಾರಿಕೆಯೂ ಇಲ್ಲಿನ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ.*

*ಕೊಟ್ಟಿರುವ ಯುರೋಪಿನ ಭೂಪಟದಲ್ಲಿ ಮೆಡಿಟರೇನಿಯನ್ ಹವಾಗುಣ ವಲಯವು ಅನುಭವಕ್ಕೆ ಬರುವ ಪ್ರದೇಶಗಳನ್ನು ಅಟ್ಲಾಸ್ ನ ಸಹಾಯದಿಂದ ಗುರುತಿಸಿರಿ.*




*ಚಿತ್ರ 10.31 • ಯುರೋಪಿನ ಭೂಪಟ*

*ಯುರೋಪಿನ ಹವಾಗುಣ ವಿಶೇಷತೆಗಳನ್ನು ಪರಿಶೀಲಿಸಿ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಹವಾಗುಣ ವಲಯಗಳು | ವಿಶೇಷತೆಗಳು |
|---|---|
| • ಆರ್ಕ್ಟಿಕ್ ಹವಾಗುಣ | • <br> • |
| • | • <br> • |
| • | • <br> • |
| • | • <br> • |
| • | • <br> • |

ಹವಾಗುಣಕ್ಕೆ ಅನುಸಾರವಾಗಿ ಸಸ್ಯ - ಜೀವಜಾಲಗಳಲ್ಲಿ ಬದಲಾವಣೆಗಳುಂಟಾಗುವಂತೆ ಹವಾಗುಣ ಮತ್ತು ಭೂಪ್ರಕೃತಿಯು ಮಾನವನ ಜೀವನದಲ್ಲೂ ಪ್ರಭಾವ ಬೀರುತ್ತದೆ. ಯುರೋಪಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವನ್ನು ಪರಿಶೀಲಿಸೋಣ.

## ಸಮಾಜ ಮತ್ತು ಜನರು

ಮಾನವರು ಆಫ್ರಿಕಾದಿಂದ ಪ್ರಪಂಚದ ಅನೇಕ ಭಾಗಗಳಿಗೆ ವಲಸೆ ಹೋದರೆಂದು ನಂಬಲಾಗಿದೆ. 40000 ದಿಂದ 50000 ವರ್ಷಗಳ ಹಿಂದೆ ಯುರೋಪಿಗೆ ಆಗಮಿಸಿದ ಮಾನವರು ನಂತರ ವಿವಿಧ ಭಾಷೆಗಳಲ್ಲಿ ಆಶಯ ವಿನಿಮಯ ಮಾಡಿದರಲ್ಲದೆ ವಿವಿಧ ಸಂಸ್ಕೃತಿಗಳನ್ನು ಅನುಸರಿಸಿದರು. ಹಡಗಿನ ಮೂಲಕ ಅನ್ಯದೇಶಗಳಿಗೆ ನಡೆಸಿದ ಯಾತ್ರೆ, ಪರ್ಯಟನೆಗಳು ಯುರೋಪಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಭಾಷೆಯ ಬೆಳವಣಿಗೆಗಳಿಗೆ ದಾರಿ ಮಾಡಿಕೊಟ್ಟಿತು.

### ಜನಸಂಖ್ಯೆ

ಯುರೋಪ್ ಗಾತ್ರದಲ್ಲಿ ಆರನೇ ಸ್ಥಾನವನ್ನು ಹೊಂದಿದ್ದರೂ ಏಷ್ಯಾ ಮತ್ತು ಆಫ್ರಿಕಾದ ನಂತರ ಜನಸಂಖ್ಯೆಯಲ್ಲಿ ಮೂರನೇ ಸ್ಥಾನದಲ್ಲಿದೆ. ರಷ್ಯಾವು ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಯುರೋಪಿನ ದೇಶವಾಗಿದೆ. ಜರ್ಮನಿ, ಯುನೈಟೆಡ್ ಕಿಂಗ್ ಡಮ್, ಫ್ರಾನ್ಸ್, ಇಟಲಿ ಎಂಬೀ ರಾಷ್ಟ್ರಗಳು ಜನಸಂಖ್ಯೆಯಲ್ಲಿ ರಷ್ಯಾದಿಂದ ಹಿಂದಿರುವ ದೇಶಗಳಾಗಿವೆ.

ಯುರೋಪಿನ ಎಲ್ಲಾ ಭಾಗಗಳಲ್ಲೂ ಜನಸಂಖ್ಯೆಯು ಒಂದೇ ರೀತಿಯಲ್ಲಿ ಕಂಡುಬರುವುದಿಲ್ಲ. ಭೂಖಂಡದ ಪಶ್ಚಿಮ, ದಕ್ಷಿಣ, ಪೂರ್ವದಲ್ಲಿರುವ ದೇಶಗಳು ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ. ಸ್ಕಾಂಡಿನೇವಿಯಾ ಭೂಪ್ರದೇಶದಲ್ಲಿರುವ ರಾಷ್ಟ್ರಗಳ ಕುರಿತೂ ಅಲ್ಲಿನ ಹವಾಗುಣ ಮತ್ತು ಪ್ರಾಕೃತಿಕ ವಿಶೇಷತೆಗಳ ಕುರಿತೂ ನಾವು ಚರ್ಚಿಸಿದ್ದೇವಲ್ಲವೇ. ಭೌಗೋಳಿಕ ಪ್ರತ್ಯೇಕತೆಗಳ ಕಾರಣದಿಂದಾಗಿ ಸ್ಕಾಂಡಿನೇವಿಯಾ ಭೂಪ್ರದೇಶದಲ್ಲಿರುವ ನೋರ್ವೆ, ಸ್ವೀಡನ್, ಫಿನ್‌ಲ್ಯಾಂಡ್ ಮೊದಲಾದ ರಾಷ್ಟ್ರಗಳಲ್ಲಿ ಜನಸಂಖ್ಯೆಯೂ ಜನಸಾಂದ್ರತೆಯೂ ಬಹಳ ಕಡಿಮೆಯಾಗಿದೆ. ಈ ರಾಷ್ಟ್ರಗಳಲ್ಲಿ ಹೆಚ್ಚಿನ ಜನರು ದಕ್ಷಿಣ ಸಮುದ್ರಕ್ಕೆ ಸೇರಿಕೊಂಡಿರುವ ನಗರಗಳಲ್ಲಿ ವಾಸಿಸುತ್ತಾರೆ.

### *ಯುನೈಟೆಡ್ ಕಿಂಗ್‌ಡಮ್*




*ಚಿತ್ರ 10.32*

*ಇಂಗ್ಲೆಂಡ್ (England), ಸ್ಕಾಟ್‌ಲ್ಯಾಂಡ್ (Scotland), ವೇಲ್ಸ್ (Wales) ಎಂಬೀ ರಾಷ್ಟ್ರಗಳನ್ನು ಸೇರಿಸಿ ಗ್ರೇಟ್ ಬ್ರಿಟನ್ (Great Britain) ಎಂದೂ ಗ್ರೇಟ್ ಬ್ರಿಟನ್ ನೊಂದಿಗೆ ಉತ್ತರ ಐರ್ಲೇಂಡನ್ನು (Northern Ireland) ಸೇರಿಸಿದಾಗ ಅವುಗಳನ್ನು ಒಟ್ಟಾಗಿ ಯುನೈಟೆಡ್ ಕಿಂಗ್ ಡಮ್ (United Kingdom) ಎಂದೂ ಕರೆಯುತ್ತಾರೆ.*

*ನಾರ್ವೆ, ಸ್ವೀಡನ್, ಫಿನ್ ಲ್ಯಾಂಡ್ ಮೊದಲಾದ ದೇಶಗಳ ಭೂಪ್ರಕೃತಿ ಮತ್ತು ಹವಾಗುಣವು ಜನಸಾಂದ್ರತೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದರ ಕುರಿತು ಟಿಪ್ಪಣಿ ತಯಾರಿಸಿರಿ.*

## *ಯುರೋಪಿಯನ್ ಒಕ್ಕೂಟ*

*1957ರಲ್ಲಿ ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಇಟಲಿ, ಲಕ್ಸಂಬರ್ಗ್ ಮತ್ತು ನೆದರ್‌ಲ್ಯಾಂಡ್ ಎಂಬೀ ಆರು ರಾಷ್ಟ್ರಗಳು ಸೇರಿಕೊಂಡು ಆರಂಭಿಸಿದ ಸಂಘಟನೆಯು 1993ರಲ್ಲಿ ಯುರೋಪಿಯನ್ ಒಕ್ಕೂಟ ರೂಪೀಕರಣಕ್ಕೆ ದಾರಿಮಾಡಿ ಕೊಟ್ಟಿತು. ರಾಷ್ಟ್ರಗಳ ನಡುವೆ ಆರ್ಥಿಕ ಏಕತೆ ಮತ್ತು ಆಂತರಿಕ ವ್ಯಾಪಾರವನ್ನು ಉದ್ದೇಶವಾಗಿಟ್ಟುಕೊಂಡು ಆರಂಭಿಸಿದ ಈ ಒಕ್ಕೂಟವು ನಂತರ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಲಯಗಳಿಗೂ ಗಮನವನ್ನು ಕೇಂದ್ರೀಕರಿಸಿತು. ಶಾಂತಿ, ಸಮನ್ವಯ, ಪ್ರಜಾಪ್ರಭುತ್ವ, ಮಾನವಹಕ್ಕು ಎಂಬೀ ವಲಯಗಳಿಗೆ ನೀಡಿದ ಕೊಡುಗೆಗಾಗಿ ಯುರೋಪಿಯನ್ ಒಕ್ಕೂಟಕ್ಕೆ ಶಾಂತಿ – ಸಮಾಧಾನಕ್ಕಾಗಿ ನೀಡುವ 2012ರ ನೊಬೆಲ್ ಪ್ರಶಸ್ತಿಯೂ ಲಭಿಸಿದೆ.*

ವಿಭಿನ್ನ ಭೂಪ್ರಕೃತಿ, ಸಂಸ್ಕೃತಿ, ವಲಸೆ ಎಂಬಿವುಗಳ ಪ್ರಭಾವದಿಂದಾಗಿ ಯುರೋಪಿನಲ್ಲಿ ವಿಭಿನ್ನ ಭಾಷೆಗಳನ್ನು ಮಾತನಾಡಲಾಗುತ್ತದೆ. ಯುರೋಪಿನಲ್ಲಿ ಅತೀ ಹೆಚ್ಚು ಜನರು ಮಾತನಾಡುವುದು ರಷ್ಯನ್ ಭಾಷೆಯಾಗಿದೆ. ಇದರ ಹೊರತಾಗಿ ಜರ್ಮನ್, ಫ್ರೆಂಚ್, ಇಟಾಲಿಯನ್, ಇಂಗ್ಲಿಷ್, ಸ್ಪಾನಿಷ್ ಎಂಬೀ ಭಾಷೆಗಳನ್ನೂ ವ್ಯಾಪಕವಾಗಿ ಮಾತನಾಡುತ್ತಾರೆ.

ವಲಸೆಯು ಯುರೋಪಿನ ಜನಸಂಖ್ಯಾ ಹೆಚ್ಚಳಕ್ಕೂ ಪ್ರಮುಖ ಕಾರಣವಾಗಿದೆ. ಆಫ್ರಿಕಾ, ಮಧ್ಯ ಏಷ್ಯಾ, ದಕ್ಷಿಣ ಏಷ್ಯಾ ಮೊದಲಾದೆಡೆಗಳಿಂದ ಅಧಿಕ ಸಂಖ್ಯೆಯಲ್ಲಿ ಜನರು ಯುರೋಪಿಯನ್ ಒಕ್ಕೂಟದ ರಾಷ್ಟ್ರಗಳಿಗೆ ವಲಸೆ ಹೋಗುತ್ತಾರೆ.

ಯುರೋಪ್ ಜಗತ್ತಿನ ಅತ್ಯಂತ ಹೆಚ್ಚು ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಒಂದಾಗಿದೆ. ಉತ್ತಮ ಹವಾಗುಣ, ಹೇರಳವಾದ ಪ್ರಾಕೃತಿಕ ಸಂಪನ್ಮೂಲಗಳು ಮತ್ತು ತಂತ್ರಜ್ಞಾನವು ಕೈಗಾರಿಕಾಭಿವೃದ್ಧಿಗೂ ಕೃಷಿಯಭಿವೃದ್ಧಿಗೂ ಕಾರಣವಾಗಿವೆ. ಇದುವೇ ಯುರೋಪಿಗೆ ವಲಸೆ ಹೋಗಲು ಪ್ರಮುಖ ಕಾರಣಗಳಲ್ಲಿ ಒಂದು. ಯುರೋಪಿನ ಪ್ರಮುಖ ಕೃಷಿ ವಿಧಾನಗಳು ಮತ್ತು ಪ್ರಮುಖ ಕೈಗಾರಿಕೆಗಳು ಯಾವುವೆಂದು ನೋಡೋಣ.

## ಕೃಷಿ ಮತ್ತು ಕೈಗಾರಿಕೆ

ಕೃಷಿಯಲ್ಲಿ ಪ್ರಾದೇಶಿಕ ವೈವಿಧ್ಯಗಳಿದ್ದರೂ ಕೃಷಿಭೂಮಿಯ ಲಭ್ಯತೆ ಹಾಗೂ ಜನಸಾಂದ್ರತೆಗೆ ಅನುಸಾರವಾಗಿ ತೀವ್ರಕೃಷಿ, ವ್ಯಾಪಕಕೃಷಿ, ಮಿಶ್ರಕೃಷಿ ಎಂಬೀ ಕೃಷಿ ವಿಧಾನಗಳು ಯುರೋಪಿನಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

| ತೀವ್ರ ಕೃಷಿ<br>(Intensive Farming) | ವ್ಯಾಪಕ ಕೃಷಿ<br>(Extensive Farming) | ಮಿಶ್ರ ಕೃಷಿ<br>(Mixed Farming) |
|---|---|---|
| • ಜನಸಾಂದ್ರತೆಯು ಅಧಿಕವಾಗಿರುವ ಪ್ರದೇಶಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಉತ್ತಮ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ನಡೆಸುವ ಕೃಷಿ ವಿಧಾನ. | • ಅತ್ಯಂತ ವಿಶಾಲವಾದ ಭೂಪ್ರದೇಶಗಳಲ್ಲಿ ವಾಣಿಜ್ಯೋದ್ದೇಶದಿಂದ ನಡೆಸುವ ಯಾಂತ್ರೀಕೃತ ಧಾನ್ಯ ಕೃಷಿ. | • ಕೃಷಿಯೊಂದಿಗೆ ಜಾನುವಾರು ಸಾಕಣೆಯನ್ನು ಕೈಗೊಳ್ಳುವ ವಿಧಾನ. |

| | | |
|---|---|---|
| • ಮೆಡಿಟರೇನಿಯನ್ ಹವಾಗುಣವು ಅನುಭವಕ್ಕೆ ಬರುವ ರಾಷ್ಟ್ರಗಳಲ್ಲಿ ಕೃಷಿ ಮಾಡುತ್ತಾರೆ. | • ಉತ್ತರ ಯುರೋಪಿನ ಸ್ಟೆಪ್ಪೀಸ್ ಹುಲ್ಲುಗಾವಲುಗಳಲ್ಲಿ ಈ ರೀತಿಯ ಕೃಷಿಯನ್ನು ಮಾಡುತ್ತಾರೆ. | • ಈ ರೀತಿಯ ಕೃಷಿಯು ಪ್ರಮುಖವಾಗಿ ಮಧ್ಯ ಪಶ್ಚಿಮ ಯುರೋಪಿನಲ್ಲಿ ಕಂಡುಬರುತ್ತದೆ. |
| • ಕಿತ್ತಳೆ, ಒಲೀವ್, ದ್ರಾಕ್ಷೆ ಮುಂತಾದವುಗಳನ್ನು ಪ್ರಮುಖವಾಗಿ ಬೆಳೆಸುತ್ತಾರೆ. | • ಗೋಧಿಯು ಪ್ರಮುಖ ಬೆಳೆಯಾಗಿದೆ. ಬಾರ್ಲಿ, ಜೋಳ, ಓಟ್ಸ್ ಮೊದಲಾದ ಧಾನ್ಯಗಳನ್ನೂ ಕೃಷಿ ಮಾಡುತ್ತಾರೆ. | • ಧಾನ್ಯಗಳು, ತರಕಾರಿಗಳು ಎಂಬಿವುಗಳ ಉತ್ಪಾದನೆಯೊಂದಿಗೆ ಜಾನುವಾರುಗಳನ್ನೂ ಸಾಕುತ್ತಾರೆ. |

*ಯುರೋಪಿನ ಕೃಷಿ ವಿಧಾನಗಳ ಆಧಾರದಲ್ಲಿ ಬೆಳೆಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ಪ್ರದೇಶ | ಬೆಳೆಗಳು |
|---|---|
| ಮಧ್ಯ - ಪಶ್ಚಿಮ ಯುರೋಪ್ | |
| ಮೆಡಿಟರೇನಿಯನ್ ಭೂಪ್ರದೇಶ | |
| ಸ್ಟೆಪ್ಪೀಸ್ ಹುಲ್ಲುಗಾವಲುಗಳು | |

ಯುರೋಪಿನಲ್ಲಿ ಮೀನುಗಾರಿಕೆಯೂ ಕೃಷಿಯಂತೆಯೇ ಪ್ರಾಥಮಿಕ ಆರ್ಥಿಕ ಚಟುವಟಿಕೆಯಾಗಿದೆ. ಸಮುದ್ರ ಸಾಮಿಪ್ಯವು ಯುರೋಪಿನ ಮೀನುಗಾರಿಕಾ ವಲಯದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಪರಿಶೀಲಿಸೋಣ.

## ಮೀನುಗಾರಿಕೆ

ಉತ್ತರ ಸಮುದ್ರ (North Sea), ಉತ್ತರ ಅಟ್ಲಾಂಟಿಕ್ ಸಾಗರ, ಆರ್ಕ್ಟಿಕ್ ಸಾಗರ ಎಂಬಿವುಗಳಿಗೆ ಹೊಂದಿಕೊಂಡಿರುವ ರಾಷ್ಟ್ರಗಳಾದ ನೋರ್ವೆ, ಡೆನ್ಮಾರ್ಕ್, ಪೋಲಂಡ್ ಗಳಲ್ಲಿ ಮೀನುಗಾರಿಕೆಯು ಪ್ರಮುಖ ಕಸುಬಾಗಿದೆ. ಕೋಡ್ (Cod), ಬೂತಾಯಿ (Herring), ಸಾಲ್ಮನ್ (Salmon), ಹಾಲಿಬಟ್ (Halibut), ಸಮುದ್ರ ಟ್ರೌಟ್ (Sea Trout) ಮೊದಲಾದ ಮೀನುಗಳು ಈ ಪ್ರದೇಶಗಳಲ್ಲಿ ಧಾರಾಳವಾಗಿ ಲಭಿಸುತ್ತವೆ.

### *ಗ್ರೇಟ್ ಫಿಶರ್ ಬ್ಯಾಂಕ್*
***(Great Fisher Bank)***

*ಡೆನ್ಮಾರ್ಕ್ - ನೋರ್ವೆ ತೀರದಲ್ಲಿರುವ ಗ್ರೇಟ್ ಫಿಶರ್ ಬ್ಯಾಂಕ್ ಹಾಗೂ ಡೋಗರ್ ಬ್ಯಾಂಕ್ (Dogger Bank) ಗಳು ಯುರೋಪಿನಲ್ಲೇ ಅತ್ಯಧಿಕ ಮೀನು ಲಭಿಸುವ ಸ್ಥಳಗಳಾಗಿವೆ. ಇದಲ್ಲದೆ, ಮೆಡಿಟರೇನಿಯನ್ ಸಮುದ್ರ, ಕಪ್ಪು ಸಮುದ್ರ ಮತ್ತು ಒಳನಾಡಿನ ಸರೋವರಗಳಲ್ಲಿ ಮೀನುಗಾರಿಕೆ ಉದ್ದಿಮೆಯು ಅಭಿವೃದ್ಧಿ ಹೊಂದುತ್ತಿದೆ.*



*ಚಿತ್ರ 10.33 • ಸಾಲ್ಮನ್*



*ಚಿತ್ರ 10.34 • ಹಾಲಿಬಟ್*



*ಚಿತ್ರ 10.35 • ಸಮುದ್ರ ಟ್ರೌಟ್*

## ಯುರೋಪಿನ ವಾಹನ ನಿರ್ಮಾಣ ಉದ್ಯಮ

*ಯುರೋಪಿನ ರಾಷ್ಟ್ರಗಳು ವಾಹನ ನಿರ್ಮಾಣದಲ್ಲಿ ಮುಂಚೂಣಿಯಲ್ಲಿವೆ. ಜಾಗತಿಕ ಯುದ್ಧಗಳ ಸಮಯದಲ್ಲಿ ತಮ್ಮ ದೇಶದ ಸೈನ್ಯವನ್ನು ಸುಸಜ್ಜಿತಗೊಳಿಸಲು ಅಭಿವೃದ್ಧಿಗಾಗಿ ಯುದ್ಧ ವಿಮಾನಗಳನ್ನೂ ಟ್ರಕ್ಕುಗಳನ್ನೂ ಟ್ಯಾಂಕರುಗಳನ್ನೂ ನಿರ್ಮಿಸಿದ ಹಲವು ಕಂಪನಿಗಳು ನಂತರದ ದಿನಗಳಲ್ಲಿ ವಾಹನ ನಿರ್ಮಾಣ ವಲಯಕ್ಕೆ ಆದ್ಯತೆ ನೀಡಿದವು. ಆಡಿ, ಫೆರಾರಿ, ಬುಗಾಟಿ, ಫೋಕ್ಸ್ ವ್ಯಾಗನ್, ಮರ್ಸಿಡಸ್ ಬೆನ್ಜ್, ಬಿಎಂಡಬ್ಲ್ಯು, ರೋಲ್ಸ್-ರಾಯ್ಸ್, ಸ್ಕ್ಯಾನಿಯಾ, ವೋಲ್ವೋ, ಪೋರ್ಷೆ ಮೊದಲಾದವುಗಳೆಲ್ಲ ಜಗತ್ತಿನಾದ್ಯಂತ ಅಭಿಮಾನಿಗಳನ್ನು ಹೊಂದಿರುವ ಯುರೋಪಿಯನ್ ವಾಹನ ಕಂಪನಿಗಳಾಗಿವೆ.*

## ಕೈಗಾರಿಕೆ

ಕೈಗಾರಿಕಾ ಕ್ರಾಂತಿಯು ಯುರೋಪನ್ನು ಅಭಿವೃದ್ಧಿಯತ್ತ ಸಾಗಿಸಿತು. ಯುರೋಪಿನ ಕಬ್ಬಿಣ-ಉಕ್ಕು ಕೈಗಾರಿಕೆ, ಬಟ್ಟೆ ಕೈಗಾರಿಕೆ, ಉತ್ಪಾದನಾ ವಲಯ ಎಂಬಿವು ಜಗತ್ತಿನ ಗಮನ ಸೆಳೆದವುಗಳಾಗಿವೆ.




*ಚಿತ್ರ 10.36 • ಯುರೋಪಿನ ಕೈಗಾರಿಕಾ ಭೂಪಟ*

*ಯುರೋಪಿನ ಕೈಗಾರಿಕಾ ಭೂಪಟವನ್ನು (ಚಿತ್ರ 10.36) ಪರಿಶೀಲಿಸಿ ಕೆಳಗೆ ಕೊಡಲಾದ ಪ್ರಮುಖ ಕೈಗಾರಿಕೆಗಳು ಯಾವ ಯಾವ ರಾಷ್ಟ್ರಗಳಲ್ಲಿವೆಯೆಂದು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ***ಕೈಗಾರಿಕೆಗಳು*** | ***ರಾಷ್ಟ್ರಗಳು*** |
| --- | --- |
| *ಕಬ್ಬಿಣ-ಉಕ್ಕು* | |
| *ಹಡಗು ನಿರ್ಮಾಣ* | |
| *ಬಟ್ಟೆ* | |
| *ಅಟೋಮೊಬೈಲ್* | |

ಕೃಷಿ ಮತ್ತು ಕೈಗಾರಿಕೆಗಳು ಜನರ ಸಾಮಾಜಿಕ – ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಗಮನಾರ್ಹವಾದ ಪ್ರಭಾವ ಬೀರುತ್ತವೆ. ಯುರೋಪಿನ ಪ್ರಮುಖ ಆಚರಣೆಗಳು, ಸಾಂಸ್ಕೃತಿಕ ಕೇಂದ್ರಗಳು, ನಗರಗಳು ಯಾವುವೆಂದು ಪರಿಶೀಲಿಸೋಣ.

## ಆಚರಣೆಗಳು ಮತ್ತು ಸಾಂಸ್ಕೃತಿಕ ನಗರಗಳು

ಯುರೋಪ್ ವೈವಿಧ್ಯಮಯ ಸಂಸ್ಕೃತಿಗಳ, ನಂಬಿಕೆಗಳ ಮತ್ತು ಆಚರಣೆಗಳ ಕೇಂದ್ರವಾಗಿದೆ. ಯುರೋಪಿನ ವೈವಿಧ್ಯಮಯವಾದ ಕ್ರಿಸ್ ಮಸ್ ಮತ್ತು ಹೊಸ ವರ್ಷಾಚರಣೆ, ಜರ್ಮನಿಯ ಅಕ್ಟೋಬರ್ ಫೆಸ್ಟ್ (Oktober Fest), ಸ್ಪೇನಿನ ಲಾ ಟೊಮಟಿನಾ (La Tomatina), ಗೂಳಿ ಕಾಳಗ, ನೆದರ್ ಲ್ಯಾಂಡ್ಸ್‌ನ ಕಿಂಗ್ಸ್ ಡೇ (King's Day) ಕಾರ್ನಿವಲ್ ಮತ್ತು ವೆನಿಸ್ ನ ಕಾರ್ನಿವಲ್ ಮುಂತಾದವು ಗಮನಾರ್ಹವಾದ ಆಚರಣೆಗಳಾಗಿವೆ. ಐಫೆಲ್ ಟವರ್, ಪೀಸಾದ ವಾಲಿದ ಗೋಪುರ ಮತ್ತು ಲಂಡನ್ ಬ್ರಿಡ್ಜ್ (London Bridge) ಮೊದಲಾದ ನಿರ್ಮಾಣಗಳೂ ಕಲೆ ಮತ್ತು ಸಂಸ್ಕೃತಿಯನ್ನು ಕೈಬೀಸಿ ಕರೆಯುವ ನಗರಗಳೂ ಯುರೋಪಿನ ಪ್ರಮುಖ ಪ್ರವಾಸಿ ಕೇಂದ್ರಗಳಾಗಿವೆ.


*ಚಿತ್ರ 10.37 • ಅಕ್ಟೋಬರ್ ಫೆಸ್ಟ್*


*ಚಿತ್ರ 10.38 • ಲಾ ಟೊಮಾಟಿನಾ*


*ಚಿತ್ರ 10.39 • ಗೂಳಿ ಕಾಳಗ*


*ಚಿತ್ರ 10.40 • ಕಿಂಗ್ಸ್ ಡೇ ಕಾರ್ನಿವಲ್*


*ಚಿತ್ರ 10.41 • ವೆನಿಸ್ ಕಾರ್ನಿವಲ್*


*ಚಿತ್ರ 10.42 • ವಾಲಿದ ಗೋಪುರ*

## ಪ್ರಮುಖ ನಗರಗಳು

### ಪ್ಯಾರಿಸ್

ಪ್ಯಾರಿಸ್ ಪ್ರತಿವರ್ಷವೂ ಅತ್ಯಧಿಕ ಪ್ರವಾಸಿಗರು ಭೇಟಿ ನೀಡುವ ಯುರೋಪಿನ ನಗರವಾಗಿದೆ. ಸೈನ್ (Seine) ನದೀತೀರದಲ್ಲಿರುವ ಪ್ಯಾರಿಸ್ ಫ್ರಾನ್ಸಿನ ರಾಜಧಾನಿಯಾಗಿದೆ. ಐಫೆಲ್ ಗೋಪುರ (Eiffel Tower), ಲುವ್ರೆ ಮ್ಯೂಸಿಯಂ (Louvre Museum) ಮೊದಲಾದವು ಪ್ರವಾಸಿಗರನ್ನು ಈ ನಗರಗಳಿಗೆ ಆಕರ್ಷಿಸುತ್ತವೆ.


*ಚಿತ್ರ 10.43 • ಸೈನ್ ನದಿ ಮತ್ತು ಐಫೆಲ್ ಗೋಪುರ*

### ಲಂಡನ್

ಥೇಮ್ಸ್ (Thames) ನದೀತೀರದಲ್ಲಿರುವ ಲಂಡನ್, ಇಂಗ್ಲೆಂಡ್ ಮತ್ತು ಯುನೈಟೆಡ್ ಕಿಂಗ್ ಡಮ್‌ಗಳ ರಾಜಧಾನಿಯೂ ಅತ್ಯಂತ ದೊಡ್ಡ ನಗರವೂ ಆಗಿದೆ.

### ಬರ್ಲಿನ್

ಬರ್ಲಿನ್ ಜರ್ಮನಿಯ ರಾಜಧಾನಿ ಹಾಗೂ ಅತ್ಯಂತ ದೊಡ್ಡ ನಗರವಾಗಿದೆ. ಈ ನಗರವು ಸ್ಪ್ರೀ (Spree) ನದೀತೀರದಲ್ಲಿದೆ.


*ಚಿತ್ರ 10.44 • ಲಂಡನ್ ನಗರ*



*ಚಿತ್ರ 10.45 • ಬರ್ಲಿನ್ ನಗರ*



*ಚಿತ್ರ 10.46 • ಮಾಸ್ಕೋ ನಗರ*



*ಚಿತ್ರ 10.47 • ರೋಮ್ ನಗರ*



*ಚಿತ್ರ 10.48 • ಕೊಲೋಸಿಯಂ*

### ಮಾಸ್ಕೋ

ಮಾಸ್ಕೋ ರಷ್ಯಾದ ರಾಜಧಾನಿಯಾಗಿದೆ. ಮಾಸ್ಕೋವಾ ನದೀತೀರದಲ್ಲಿರುವ ಈ ನಗರವು ಯುರೋಪಿನ ಅತ್ಯಂತ ದೊಡ್ಡ ನಗರವಾಗಿದೆ.

### ರೋಮ್

ಇಟಲಿಯ ರಾಜಧಾನಿ ನಗರವಾದ ರೋಮ್ ಟೈಬರ್ (Tiber) ನದೀತೀರದಲ್ಲಿದೆ. ರೋಮ್ ಸಾಮ್ರಾಜ್ಯದ ಮತ್ತು ಕ್ರೈಸ್ತಮತದ ಹಲವಾರು ಸ್ಮಾರಕಗಳು ಇಲ್ಲಿವೆ. ರೋಮ್ ನ ಕೊಲೋಸಿಯಂ (Colosseum) ಪುರಾತನ ಜಗತ್ತಿನ ಮಹಾ ಅದ್ಭುತಗಳಲ್ಲಿ ಒಂದಾಗಿದೆ.

ಇವುಗಳಲ್ಲದೆ ಮ್ಯಾಡ್ರಿಡ್ (Madrid), ಅಥೆನ್ಸ್ (Athens), ಆಮ್‌ಸ್ಟರ್‌ಡ್ಯಾಮ್ (Amsterdam), ವಿಯೆನ್ನಾ (Vienna), ಬಾರ್ಸಿಲೋನ (Barcelona), ಲಿಸ್ಬನ್ (Lisbon), ಡುಬ್ಲಿನ್ (Dublin) ಎಂಬಿವು ಯುರೋಪಿನ ಪ್ರಮುಖ ನಗರಗಳಾಗಿವೆ.

*ಯುರೋಪಿನ ಕೆಲವು ಪ್ರಮುಖ ನದಿಗಳನ್ನು ಕೆಳಗೆ ಕೊಡಲಾಗಿದೆ. ಅವುಗಳ ತೀರದಲ್ಲಿರುವ ನಗರಗಳು ಯಾವುವು ಎಂದು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| ನದಿ | ನಗರ |
|---|---|
| ಥೇಮ್ಸ್ | |
| ಟೈಬರ್ | |
| ಮಾಸ್ಕೋವಾ | |
| ರೈನ್ | |
| ಸ್ಪ್ರೀ | |

## ಸಾವಿರ ಸರೋವರಗಳ ನಾಡು




*ಚಿತ್ರ 10.49 • ಫಿನ್‌ಲ್ಯಾಂಡಿನ ಭೂಪಟ*

ಸಾವಿರ ಸರೋವರಗಳ ನಾಡು ಎಂದು ನೀವು ಕೇಳಿರುವಿರಾ? ಉತ್ತರ ಯುರೋಪಿನ ರಾಷ್ಟ್ರವಾದ ಫಿನ್ ಲ್ಯಾಂಡನ್ನು ಈ ರೀತಿ ಬಣ್ಣಿಸುತ್ತಾರೆ. ಸಾವಿರ ಸರೋವರಗಳ ನಾಡು ಎಂದು ಬಣ್ಣಿಸಲಾಗುತ್ತಿದ್ದರೂ ಫಿನ್ ಲ್ಯಾಂಡ್ ಒಂದು ಲಕ್ಷಕ್ಕಿಂತಲೂ ಅಧಿಕ ಸರೋವರಗಳು, ಹಲವಾರು ನದಿಗಳು ಮತ್ತು ವಿಶಾಲವಾದ ಜವುಗು ಪ್ರದೇಶವನ್ನು ಹೊಂದಿದೆ. ಫಿನ್‌ಲ್ಯಾಂಡಿನ ದಕ್ಷಿಣದಲ್ಲಿ ಬಾಲ್ಟಿಕ್ ಸಮುದ್ರ ಮತ್ತು ಫಿನ್‌ಲ್ಯಾಂಡ್ ಜಲಸಂಧಿಯೂ ನೈಋತ್ಯದಲ್ಲಿ ಬೋಸ್ನಿಯ ಜಲಸಂಧಿಯನ್ನೂ ಕಾಣಲು ಸಾಧ್ಯವಿದೆ. ಇಲ್ಲಿನ ಭೂಪ್ರಕೃತಿ, ಹವಾಗುಣ ಮತ್ತು ಸಂಸ್ಕೃತಿಯು ಹಲವು ಪ್ರವಾಸಿಗರನ್ನು ಆಕರ್ಷಿಸುತ್ತದೆ.

*ಅಟ್ಲಸ್ ನಿರೀಕ್ಷಿಸಿ ಫಿನ್‌ಲ್ಯಾಂಡಿನ ನೆರೆಯ ರಾಷ್ಟ್ರಗಳು ಯಾವುವೆಂದು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.*

| | |
|---|---|
| *ಪೂರ್ವ* | |
| *ದಕ್ಷಿಣ* | *ಎಸ್ಟೋನಿಯಾ* |
| *ಈಶಾನ್ಯ* | |
| *ಉತ್ತರ* | |

## ಹವಾಗುಣ ಮತ್ತು ಜನಜೀವನ

ಫಿನ್ ಲ್ಯಾಂಡ್‌ನಲ್ಲಿ ಸಾಮಾನ್ಯವಾಗಿ ಆರ್ಕ್ಟಿಕ್ ಹವಾಗುಣ ಮತ್ತು ಉಪ ಆರ್ಕ್ಟಿಕ್ ಹವಾಗುಣವು ಅನುಭವಕ್ಕೆ ಬರುತ್ತದೆ. ಅತೀ ಶೈತ್ಯ ಹಾಗೂ ಹಿಮಪಾತವು ಫಿನ್‌ಲ್ಯಾಂಡ್‌ನ ಉತ್ತರ ಭಾಗದ ಜನಜೀವನವನ್ನು ದುಸ್ತರವಾಗಿಸುತ್ತದೆ. ಈ ಕಾರಣದಿಂದಾಗಿ ಫಿನ್‌ಲ್ಯಾಂಡ್‌ನ ಸಮುದ್ರ ತೀರಕ್ಕೆ ಸೇರಿದ ಪ್ರದೇಶಗಳು ಪ್ರಮುಖ ಜನವಾಸ ಕೇಂದ್ರಗಳಾಗಿವೆ. ಫಿನ್ಸ್ (Finns) ಎಂದು ಕರೆಯಲ್ಪಡುವ ಫಿನ್‌ಲ್ಯಾಂಡ್ ಜನತೆಯ ಐದರಲ್ಲಿ ಒಂದು ಭಾಗವು ರಾಜಧಾನಿಯಾದ ಹೆಲ್‌ಸಿಂಕಿ (Helsinki) ಯಲ್ಲಿ ವಾಸಿಸುತ್ತಾರೆ. ಜಗತ್ತಿನ ಹೆಚ್ಚಿನ ಜನವಾಸ ಕೇಂದ್ರಗಳೆಲ್ಲವೂ ಕರಾವಳಿ ಪ್ರದೇಶದಲ್ಲಾಗಿದೆಯಲ್ಲವೇ. ಇದಕ್ಕೆ ಕಾರಣಗಳೇನಾಗಿರಬಹುದು?

- 
- 



*ಚಿತ್ರ 10.50*



*ಚಿತ್ರ 10.51 • ಹೆಲ್‌ಸಿಂಕಿ ನಗರ*

ಫಿನ್‌ಲ್ಯಾಂಡ್‌ನ ಮೂರನೇ ಎರಡರಷ್ಟು ಭಾಗವೂ ಅರಣ್ಯದಿಂದ ಕೂಡಿದೆ. ಪ್ರಾಕೃತಿಕ ಸಂಪನ್ಮೂಲಗಳು ತುಲನಾತ್ಮಕವಾಗಿ ಕಡಿಮೆಯಾಗಿರುವ ಫಿನ್‌ಲ್ಯಾಂಡ್ ನಲ್ಲಿ ಕಡಿಮೆ ಗುಣಮಟ್ಟದ ಕಲ್ಲಿದ್ದಲು (ಪೀಟ್) ಪ್ರಮುಖವಾಗಿ ಕಂಡುಬರುತ್ತದೆ. ಶೈತ್ಯವು ತೀವ್ರವಾಗಿರುವುದರಿಂದ ಚೈತನ್ಯದ ಬಳಕೆಯೂ ಅಧಿಕವಾಗಿದೆ. ಜಲವಿದ್ಯುತ್ ದೇಶದ ಚೈತನ್ಯದ ಪ್ರಮುಖ ಮೂಲವಾಗಿದೆ. ಆದರೆ ಚಳಿಯ ತೀವ್ರತೆಯು ವಿದ್ಯುತ್ ಉತ್ಪಾದನೆಗೆ ಅಡ್ಡಿಯನ್ನುಂಟುಮಾಡುತ್ತದೆ. ತೀವ್ರ ಚಳಿ ಮತ್ತು ನಿರಂತರವಾದ ಹಿಮಪಾತವು ನಿರ್ಮಾಣ ಚಟುವಟಿಕೆಗಳಿಗೂ ಸಾರಿಗೆಗೂ ಅಡ್ಡಿಯನ್ನುಂಟುಮಾಡುವುದಲ್ಲದೆ ನಿರ್ಮಾಣದ ಖರ್ಚುವೆಚ್ಚಗಳ ಹೆಚ್ಚಳಕ್ಕೂ ಕಾರಣವಾಗುತ್ತದೆ.

## ಸಂತೋಷದ ನಾಡು

ಹಲವು ಪರಿಮಿತಿಗಳು ಇದ್ದರೂ ಫಿನ್ ಲ್ಯಾಂಡ್ 2024 ರಲ್ಲಿ ವಿಶ್ವಸಂಸ್ಥೆಯ ಜಾಗತಿಕ ಸಂತೋಷ ಸೂಚ್ಯಂಕ (World Happiness Index) ದಲ್ಲಿ ಪ್ರಥಮ ಸ್ಥಾನದಲ್ಲಿದೆ. ಸತತ ಏಳನೇ ಬಾರಿ ಫಿನ್‌ಲ್ಯಾಂಡ್ ಈ ಸಾಧನೆಯನ್ನು ತನ್ನದಾಗಿಸಿಕೊಂಡಿದೆ.

### *ಸಂತೋಷ ಸೂಚ್ಯಂಕವನ್ನು ಹೇಗೆ ತಯಾರಿಸಲಾಗುತ್ತದೆ?*

*ತಲಾ ಆದಾಯ, ಸಾಮಾಜಿಕ ಬೆಂಬಲ, ಆರೋಗ್ಯಪೂರ್ಣವಾದ ಜೀವಿತಾವಧಿ, ಸ್ವಾತಂತ್ರ್ಯ, ದಾನಶೀಲ ಮತ್ತು ಭ್ರಷ್ಟಾಚಾರ ಎಂಬೀ ಆರು ಘಟಕಗಳ ಆಧಾರದಲ್ಲಿ ಸಂತೋಷ ಸೂಚ್ಯಂಕವನ್ನು ತಯಾರಿಸಲಾಗುತ್ತದೆ.*

ಸ್ಕ್ಯಾಂಡಿನೇವಿಯಾ ಭೂಪ್ರಕೃತಿ ಹಾಗೂ ಆರ್ಕ್ಟಿಕ್ ಹವಾಗುಣವು ಅನುಭವಕ್ಕೆ ಬರುವ ರಾಷ್ಟ್ರಗಳಾದ ನೋರ್ವೆ, ಸ್ವೀಡನ್, ಡೆನ್ಮಾರ್ಕ್, ಐಸ್ ಲ್ಯಾಂಡ್ ಎಂಬೀ ರಾಷ್ಟ್ರಗಳು ಜಾಗತಿಕ ಸಂತೋಷ ಸೂಚ್ಯಂಕದಲ್ಲಿ ಫಿನ್ ಲ್ಯಾಂಡ್ ನ ನಂತರದ ಅಗ್ರ ಹತ್ತು ಸ್ಥಾನಗಳನ್ನು ಹೊಂದಿವೆ. ಅಲ್ಲದೆ, ಪ್ರಪಂಚದಾದ್ಯಂತ ರಾಷ್ಟ್ರಗಳ ಅಭಿವೃದ್ಧಿಯನ್ನು ಅಳೆಯಲು ವಿಶ್ವಸಂಸ್ಥೆಯು ತಯಾರಿಸಿದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲೂ (Human Development Index) ಈ ರಾಷ್ಟ್ರಗಳು ತುಂಬಾ ಮುಂದಿವೆ.

ಅತ್ಯುತ್ತಮ ಹವಾಗುಣ, ಭೂಪ್ರಕೃತಿ, ಪ್ರಾಕೃತಿಕ ಸಂಪನ್ಮೂಲಗಳನ್ನು ಹೊಂದಿರುವ ಅನೇಕ ರಾಷ್ಟ್ರಗಳು ಸಂತೋಷ ಸೂಚ್ಯಂಕದಲ್ಲಿ ಫಿನ್ ಲ್ಯಾಂಡ್ ಗಿಂತಲೂ ಹಿಂದಿವೆ. ಪ್ರತಿಕೂಲ ಹವಾಗುಣ ಮತ್ತು ಭೂಪ್ರಕೃತಿಯನ್ನು ಎದುರಿಸಿಕೊಂಡು ಅಭಿವೃದ್ಧಿಯತ್ತ ದಾಪುಗಾಲು ಹಾಕಲು ಫಿನ್ ಲ್ಯಾಂಡ್ ಜನರ ಇಚ್ಛಾಶಕ್ತಿ ಮತ್ತು ಕಠಿಣ ಪರಿಶ್ರಮವು ಜಗತ್ತಿಗೆ ಮಾದರಿಯಾಗಿದೆ.

## ಮುಂದುವರಿದ ಚಟುವಟಿಕೆಗಳು

- ಯುರೋಪಿನ ಭೂಪಟ ರೂಪುರೇಷೆಯಲ್ಲಿ ಪ್ರಮುಖ ಭೌಗೋಳಿಕ ವಿಭಾಗಗಳನ್ನು ಗುರುತಿಸಿ, ವಿಭಿನ್ನ ಬಣ್ಣಗಳನ್ನು ನೀಡಿ ತರಗತಿಯಲ್ಲಿ ಪ್ರದರ್ಶಿಸಿರಿ.
- ಯುರೋಪಿನ ಪ್ರಮುಖ ಸಸ್ಯ ಮತ್ತು ಪ್ರಾಣಿಜಾಲಗಳ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.
- 'ಯುರೋಪಿನ ಭೂಪ್ರಕೃತಿ ಮತ್ತು ಹವಾಗುಣಗಳು ನೈಸರ್ಗಿಕ ಸಸ್ಯಜಾಲಗಳ ಹಾಗೂ ಜೀವಜಾಲಗಳ ಮೇಲೆ ಬೀರುವ ಪ್ರಭಾವ' ಎಂಬ ವಿಷಯದ ಆಧಾರದಲ್ಲಿ ಪ್ರೊಜೆಕ್ಟ್ ತಯಾರಿಸಿರಿ.
- ಯುರೋಪಿನ ಪ್ರಮುಖ ಪ್ರವಾಸಿ ತಾಣಗಳನ್ನು ಸೂಚಿಸುವ ಬ್ರೋಷರ್ ತಯಾರಿಸಿರಿ.

ಅಧ್ಯಾಯ 11



# ಫ್ಯೂಡಲಿಸಂ ಮತ್ತು ಮಧ್ಯಕಾಲದ ಜಗತ್ತು




*ಚಿತ್ರ 11.1 • ಮನೋರಿಯಲ್ ಎಸ್ಟೇಟ್*

ಮಧ್ಯಕಾಲದಲ್ಲಿ ಅಸ್ತಿತ್ವದಲ್ಲಿದ್ದ ಫ್ಯೂಡಲ್ ವ್ಯವಸ್ಥೆಗೆ ಸಂಬಂಧಿಸಿದ ಮನೋರಿಯಲ್ ಎಸ್ಟೇಟ್ ನ ಚಿತ್ರವನ್ನು 11.1 ರಲ್ಲಿ ನೀಡಲಾಗಿದೆ.ಮನೋರಿಯಲ್ ಎಸ್ಟೇಟ್ ಪ್ರಭುಗಳು ವಾಸಿಸುತ್ತಿದ್ದ ವಿಶಾಲವಾದ ಪ್ರದೇಶವಾಗಿದೆ. ಇಲ್ಲಿ ಏನೇನು ಸೌಲಭ್ಯಗಳಿದ್ದವು ಎಂಬುದನ್ನು ಚಿತ್ರದಿಂದ ಕಂಡುಹಿಡಿಯಬಹುದಲ್ಲವೆ?

ಫ್ಯೂಡಲಿಸಂ ಮತ್ತು ಮಧ್ಯಕಾಲದ ಅಧಿಕಾರ ಕೇಂದ್ರಗಳ ಕುರಿತು ಇನ್ನಷ್ಟು ವಿಚಾರಗಳನ್ನು ನಾವು ಚರ್ಚಿಸೋಣ.

## ಫ್ಯೂಡಲಿಸಂ

ಪಶ್ಚಿಮ ರೋಮನ್ ಸಾಮ್ರಾಜ್ಯದ ಪತನದ ನಂತರ ಮಧ್ಯಕಾಲೀನ ಯುರೋಪಿನಲ್ಲಿ ಜಾರಿಗೆ ಬಂದ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯೇ 'ಫ್ಯೂಡಲಿಸಂ'. 'ಒಂದು ತುಂಡು ಭೂಮಿ' ಎಂಬ ಅರ್ಥವನ್ನು ನೀಡುವ 'ಫ್ಯೂಡ್' ಎಂಬ ಜರ್ಮನ್ ಪದದಿಂದ 'ಫ್ಯೂಡಲಿಸಂ' ಎಂಬ ಪದವು ರೂಪುಗೊಂಡಿತು. ಫ್ರಾನ್ಸಿನಲ್ಲಿ ಹುಟ್ಟಿಕೊಂಡ ಫ್ಯೂಡಲಿಸಂ ಅನಂತರ ಕಾಲದಲ್ಲಿ ಇಂಗ್ಲೆಂಡ್ ಮತ್ತು ಇಟಲಿಗೆ ವ್ಯಾಪಿಸಿತು. ಫ್ಯೂಡಲ್ ವ್ಯವಸ್ಥೆಯಲ್ಲಿ ಮೂರು ಹಂತಗಳಿವೆ. ಅವು ಈ ಕೆಳಗಿನಂತಿವೆ.

**ಫ್ಯೂಡಲ್ ವ್ಯವಸ್ಥೆಯ ಮೂರು ಹಂತಗಳು**

- **ಪುರೋಹಿತರು**
- **ಪ್ರಭುಗಳು**
- **ಕೃಷಿಕರು**



*ಚಿತ್ರ 11.2 • ಬೇಟೆಗೆ ಹೊರಡುವ ಫ್ರೆಂಚ್ ಪ್ರಭುಗಳು*

ಫ್ಯೂಡಲ್ ವ್ಯವಸ್ಥೆಯಲ್ಲಿ ಸಂಪೂರ್ಣ ಭೂಮಿಯ ಒಡೆತನದ ಹಕ್ಕು ರಾಜನಿಗಾಗಿತ್ತು. ರಾಜನು ತನ್ನ ಒಡೆತನದಲ್ಲಿದ್ದ ಭೂಮಿಯನ್ನು ಪ್ರಭುಗಳಿಗೆ ಬಿಟ್ಟುಕೊಟ್ಟಿದ್ದನು. ಇದಕ್ಕೆ ಪ್ರತಿಯಾಗಿ ಪ್ರಭುಗಳು ರಾಜನಿಗೆ ನಿಷ್ಠಾವಂತ ರಾಗಿ ಇರುವೆವು ಎಂದೂ ಅಗತ್ಯದ ಸಂದರ್ಭಗಳಲ್ಲಿ ಸೈನಿಕ ಸೇವೆಯನ್ನು ಒದಗಿಸಿ ಸಹಾಯ ಮಾಡುತ್ತೇವೆ ಎಂದೂ ಪ್ರತಿಜ್ಞೆ ಮಾಡಿದ್ದರು. ಪ್ರಭುಗಳಿಗೆ ಸೈನ್ಯವನ್ನು ರೂಪಿಸುವ, ನೀತಿ ನ್ಯಾಯ ವ್ಯವಸ್ಥೆಯನ್ನು ಜಾರಿಗೊಳಿಸುವ ಮತ್ತು ತಮ್ಮದೇ ಆದ ಸ್ವಂತ ನಾಣ್ಯಗಳನ್ನು ಮುದ್ರಿಸುವ ಅಧಿಕಾರವಿತ್ತು. ಫ್ಯೂಡಲ್ ವ್ಯವಸ್ಥೆಯಲ್ಲಿ ಒಂದು ಮತ್ತು ಎರಡನೇ ವಿಭಾಗದವರ ಯೋಗಕ್ಷೇಮವನ್ನು ಪರಿಪಾಲಿಸುತ್ತಿದ್ದ ಮೂರನೇ ವಿಭಾಗವಾದ ಕೃಷಿಕರಲ್ಲಿ ಎರಡು ಪಂಗಡದವರಿದ್ದರು. ಆ ಎರಡು ಪಂಗಡಗಳು ಯಾವುವೆಂದು ನೋಡೋಣ.

- **ಸ್ವತಂತ್ರ ಕೃಷಿಕರು**
- **ಅಡಿಯಾಳರು**

ಇವರ ಪರಿಸ್ಥಿತಿ ಹೇಗಿತ್ತು ಎಂದು ಪರಿಶೀಲಿಸೋಣ.

- ಇವರಿಗೆ ಸ್ವಂತ ಭೂಮಿ ಇರಲಿಲ್ಲ.
- ಪ್ರಭುಗಳ ಕೃಷಿ ಭೂಮಿಯಲ್ಲಿ ಮತ್ತು ಮನೆಗಳಲ್ಲಿ ಕೆಲಸ ಮಾಡಬೇಕಾಗಿತ್ತು.
- ಸಂಬಳ ಸಿಗುತ್ತಿರಲಿಲ್ಲ.
- ಪ್ರಭುವಿನ ಅನುಮತಿ ಇಲ್ಲದೆ ಆ ಭೂಮಿಯನ್ನು ಬಿಟ್ಟು ಹೊರಟು ಹೋಗಲು ಸಾಧ್ಯವಿರಲಿಲ್ಲ.

*ಫ್ಯೂಡಲ್ ಸಮಾಜದ ವಿಶೇಷತೆಗಳ ಕುರಿತು ಚರ್ಚಿಸಿ ಭಿತ್ತಿಪತ್ರಿಕೆ ತಯಾರಿಸಿರಿ.*

ಹದಿನಾಲ್ಕನೇ ಶತಮಾನಕ್ಕಾಗುವಾಗ ಫ್ಯೂಡಲಿಸಂ ಪತನ ಹೊಂದಲು ಆರಂಭವಾಯಿತು. ಇದಕ್ಕೆ ಕಾರಣವಾದ ಸನ್ನಿವೇಶಗಳು ಯಾವುವು?

| ಸನ್ನಿವೇಶಗಳು |
|---|
| ಹವಾಗುಣ ಬದಲಾವಣೆ |
| ಲೋಹದ ನಾಣ್ಯಗಳ ಕೊರತೆ |
| ರಾಜಾಧಿಕಾರ ಪ್ರಬಲವಾಯಿತು |
| ಪ್ಲೇಗ್ ಅಥವಾ ಕಪ್ಪು ಮರಣ (Black Death) ಎಂಬ ಸಾಂಕ್ರಾಮಿಕ ರೋಗದ ವ್ಯಾಪಿಸುವಿಕೆ |
| ಸಿಡಿಮದ್ದಿನ ಸಂಶೋಧನೆ |
| ಶಿಲುಬೆ ಯುದ್ಧಗಳು |

## ಪವಿತ್ರ ರೋಮನ್ ಸಾಮ್ರಾಜ್ಯ (Holy Roman Empire)

ರೋಮ್ ಆಡಳಿತ ಕೇಂದ್ರವಾಗಿದ್ದ ಸಾಮ್ರಾಜ್ಯದ ಕುರಿತು ನೀವು ಹಿಂದಿನ ತರಗತಿಯಲ್ಲಿ ಕಲಿತಿದ್ದೀರಲ್ಲವೆ? ನಂತರದ ಕಾಲದಲ್ಲಿ ರೋಮನ್ ಸಾಮ್ರಾಜ್ಯವು ಪಶ್ಚಿಮ ರೋಮನ್ ಸಾಮ್ರಾಜ್ಯ ಮತ್ತು ಪೂರ್ವ ರೋಮನ್ ಸಾಮ್ರಾಜ್ಯವೆಂದು ಎರಡಾಗಿ ವಿಭಜಿಸಲ್ಪಟ್ಟಿತು. ಪಶ್ಚಿಮ ರೋಮನ್ ಸಾಮ್ರಾಜ್ಯವನ್ನು ನಂತರದ ಕಾಲದಲ್ಲಿ ಯುರೋಪಿನ ಬುಡಕಟ್ಟು ಜನಾಂಗದವರಾದ ಫ್ರಾಂಕುಗಳು ವಶಪಡಿಸಿದರು. ಫ್ರಾಂಕಿಷ್ ಸಾಮ್ರಾಜ್ಯವು ಇವರು ಸ್ಥಾಪಿಸಿದ ಸಾಮ್ರಾಜ್ಯವಾಗಿದೆ. ಷಾಲಮೀನ್ (Charlemagne) ಈ ಸಾಮ್ರಾಜ್ಯದ ಪ್ರಸಿದ್ಧ ಆಡಳಿತಾಧಿಕಾರಿಯಾಗಿದ್ದನು. ಪೋಪ್ ಲಿಯೋ ಮೂರನೇಯವನನ್ನು ಶತ್ರುಗಳು ರೋಮ್ ನಗರದಿಂದ ಹೊರಹಾಕಿದಾಗ ಷಾಲಮೀನನು ಅವರನ್ನು ಪರಾಜಯಗೊಳಿಸಿ ಲಿಯೊ ಅವರನ್ನು ಪುನಃ ಪೋಪ್ ಆಗಿ ನೇಮಿಸಿದನು. ಇದಕ್ಕೆ ಪ್ರತ್ಯುಪಕಾರವಾಗಿ ಪೋಪನು ಷಾಲಮೀನನ್ನು ಮೊದಲ ಪವಿತ್ರ ರೋಮನ್ ಚಕ್ರವರ್ತಿಯಾಗಿ ಕಿರೀಟಧಾರಣೆ ಮಾಡಿದನು. ಆದುದರಿಂದ ಈ ಸಾಮ್ರಾಜ್ಯವನ್ನು ಪವಿತ್ರ ರೋಮನ್ ಸಾಮ್ರಾಜ್ಯ (Holy Roman Empire) ಎಂಬ



*ಚಿತ್ರ 11.3 • ಕರೋಲಿಂಜಿಯನ್*

### *ವಾಸ್ತು ಶಿಲ್ಪ ಕಲೆಯಲ್ಲಿ ಕರೋಲಿಂಜಿಯನ್ ಶೈಲಿ*

*ಕರೋಲಿಂಜಿಯನ್ ಶೈಲಿಯು ಬೈಝಾಂಟೈನ್ ಶೈಲಿಯನ್ನು ಮತ್ತು ಪ್ರಾಚೀನ ರೋಮನ್ ಶೈಲಿಯನ್ನು ಸಂಯೋಜಿಸಿದ ಶೈಲಿಯಾಗಿತ್ತು. ಕಮಾನಿನ ಆಕಾರದ ಬಾಗಿಲುಗಳು, ಗುಮ್ಮಟಗಳು ಮತ್ತು ಮೊಸಾಯಿಕ್ ನೆಲವು ಇದರ ವಿಶೇಷತೆಯಾಗಿದೆ.*



ಚಿತ್ರ 11.4 ● ಪೋಪ್ ಷಾಲಮೀನನಿಗೆ ಕಿರೀಟಧಾರಣೆ ಮಾಡುತ್ತಿದ್ದಾರೆ

ಹೆಸರಿನಿಂದಲೂ ಕರೆಯುತ್ತಾರೆ. ಈ ಕಾಲದ ವಾಸ್ತುಶಿಲ್ಪಶೈಲಿಯು ಕರೋಲಿಂಜಿಯನ್ ಶೈಲಿ ಎಂದು ತಿಳಿಯಲ್ಪಡುತ್ತದೆ. ಷಾಲಮೀನನ ಕಾಲದಲ್ಲಿ ಉಂಟಾದ ವೈಜ್ಞಾನಿಕ ಪ್ರಗತಿಯನ್ನು ಕರೋಲಿಂಜಿಯನ್ ನವೋತ್ಥಾನ ಎಂದು ಕರೆಯುತ್ತಾರೆ.

## ಪೂರ್ವ ರೋಮನ್ ಸಾಮ್ರಾಜ್ಯ (Eastern Roman Empire)

ರೋಮ್‌ನ್ನು ಆಡಳಿತ ಕೇಂದ್ರವಾಗಿರಿಸಿಕೊಂಡು ಅಸ್ತಿತ್ವದಲ್ಲಿದ್ದ ಪಶ್ಚಿಮ ರೋಮನ್ ಸಾಮ್ರಾಜ್ಯದ ಪತನದ ತರುವಾಯ ಪೂರ್ವದಲ್ಲಿ ಉದಯಿಸಿದ ಸಾಮ್ರಾಜ್ಯವೇ ಪೂರ್ವ ರೋಮನ್ ಸಾಮ್ರಾಜ್ಯ. ಕಾನ್ಸ್ಟಾಂಟಿನೋಪಲ್ ಇದರ ರಾಜಧಾನಿಯಾಗಿತ್ತು. ಕಾನ್ಸ್ಟಾಂಟಿನೋಪಲ್‌ನ ಹಳೆಯ ಹೆಸರು ಬೈಝಾಂಟೈನ್ ಎಂದಾಗಿತ್ತು. ಆದುದರಿಂದ ಈ ಸಾಮ್ರಾಜ್ಯವನ್ನು ಬೈಝಾಂಟೈನ್ ಸಾಮ್ರಾಜ್ಯವೆಂದೂ ಕರೆಯುತ್ತಾರೆ. ಜಸ್ಟೀನಿಯನ್ ಪೂರ್ವ ರೋಮನ್ ಸಾಮ್ರಾಜ್ಯದ ಪ್ರಸಿದ್ಧ ಆಡಳಿತಾಧಿಕಾರಿಯಾಗಿದ್ದನು. ಜಸ್ಟೀನಿಯನ್ ನಿಯಮ ಸಂಹಿತೆಯು (Code of Justinian) ಜಸ್ಟೀನಿಯನ್ ಚಕ್ರವರ್ತಿಯು ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ದೇಶದಲ್ಲಿ ಅಸ್ತಿತ್ವದಲ್ಲಿದ್ದ ಕಾನೂನುಗಳು, ನ್ಯಾಯಶಾಸ್ತ್ರ ಮತ್ತು ಕಾನೂನು ಶಾಸನಗಳನ್ನು ಕ್ರೋಡೀಕರಿಸಿ ಸ್ಪಷ್ಟವಾದ ಒಂದು ಕಾನೂನು ಸಂಹಿತೆಯನ್ನು ರಚಿಸಲು ಕಾನೂನು ತಜ್ಞರ ಸಮಿತಿಯೊಂದನ್ನು ರೂಪಿಸಿದನು. ಕೋರ್ಪ್ವಸ್ ಜ್ಯೂರಿಸ್ ಸಿವಿಲ್ಸ್ (Corpus Juris Civils) ಎಂಬುದು ಹೀಗೆ ತಯಾರಿಸಿದ ಕಾನೂನಾಗಿದೆ. ಇದಕ್ಕೆ ಮೂರು ವಿಭಾಗಗಳಿದ್ದವು.




ಚಿತ್ರ 11.5 ● ಪೂರ್ವ ರೋಮನ್ ಸಾಮ್ರಾಜ್ಯ




## ಮಧ್ಯ ಇಸ್ಲಾಮಿಕ್ ಪ್ರದೇಶಗಳು

ಅರೇಬಿಯಾ ಪರ್ಯಾಯ ದ್ವೀಪವು ಕೆಂಪು ಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಗಳ ನಡುವೆ ಅರಬಿಗಳು ವಾಸಿಸುತ್ತಿದ್ದ ವಿಶಾಲವಾದ ಭೂಪ್ರದೇಶವಾಗಿದೆ. ಅರಬಿಗಳು ಹಲವು ಗೋತ್ರಗಳಾಗಿ ವಿಭಜಿಸಲ್ಪಟ್ಟಿದ್ದರು. ಬಹುಭಾಗ ಗೋತ್ರಗಳು ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದರು. ಆದರೆ ನಗರಗಳಲ್ಲಿ ವಾಸಿಸುತ್ತಿದ್ದ ಕೆಲವು ವಿಭಾಗಗಳು ವ್ಯಾಪಾರ ಮತ್ತು ಕೃಷಿಯಲ್ಲಿ ಮಗ್ನರಾಗಿದ್ದರು. ಇವರು ವ್ಯಾಪಾರಕ್ಕಾಗಿ ವಿವಿಧ

ಪ್ರದೇಶಗಳಿಗೆ ಸಂಚರಿಸಿದರು. ಮಕ್ಕಾದ ಕಾಬಾ (Kaba) ವು ಅರಬರ ತೀರ್ಥಾಟನ ಕೇಂದ್ರವಾಗಿತ್ತು. ತೀರ್ಥಾಟನ ಕಾಲವು ಶಾಂತಿ ಸಮಾಧಾನದ ಕಾಲವಾಗಿತ್ತು.

ಪ್ರವಾದಿಯಾಗಿದ್ದ ಮುಹಮ್ಮದ್ ನಬಿಯು ಪರಸ್ಪರ ಕಲಹದಲ್ಲಿ ಏರ್ಪಟ್ಟಿದ್ದ ಅರಬ್ ಗೋತ್ರಗಳನ್ನು ಏಕೀಕರಿಸಿದರು. ಆದರೆ ಅವರ ಆಶಯಗಳನ್ನು ಮಕ್ಕಾದಲ್ಲಿದ್ದ ಶ್ರೀಮಂತರಾದ ವ್ಯಾಪಾರಿಗಳು ವಿರೋಧಿಸಿದರು. ಆದುದರಿಂದ ಸಿ.ಇ 622 ರಲ್ಲಿ ಮುಹಮ್ಮದ್ ನಬಿ ತನ್ನ ಅನುಯಾಯಿಗಳೊಂದಿಗೆ ಮಕ್ಕಾದಿಂದ ಮದೀನದೆಡೆಗೆ ಪಲಾಯನ ಮಾಡಿದರು. ಇದನ್ನು ಹಿಜಿರ ಎನ್ನುತ್ತಾರೆ. ಬಹಳ ಬೇಗನೆ ಅವರು ಮದೀನದ ಆಡಳಿತಾಧಿಕಾರಿಯಾಗಿ ಬದಲಾದರು. ಅನಂತರ ಮಕ್ಕಾದ ನಿಯಂತ್ರಣವು ಅವರಿಗೆ ಲಭಿಸಿದಾಗ ಮದೀನ ಇಸ್ಲಾಮಿಕ ರಾಷ್ಟ್ರದ ಆಡಳಿತ ಕೇಂದ್ರವಾಯಿತು. ಮಕ್ಕಾ ಧಾರ್ಮಿಕ ಕೇಂದ್ರವಾಗಿ ಬದಲಾಯಿತು. ಹೀಗೆ ಅರೇಬಿಯಾದ ವಿಸ್ತಾರವಾದ ಭೂ ಪ್ರದೇಶವನ್ನು ಏಕೀಕರಿಸಿ ಅರಬ್ ಸಂಸ್ಕೃತಿಯನ್ನು ಕಟ್ಟಿ ಬೆಳೆಸಲು ಮುಹಮ್ಮದ್ ನಬಿಗೆ ಸಾಧ್ಯವಾಯಿತು.




*ಭೂಪಟ 11.6 • ಮಧ್ಯ ಇಸ್ಲಾಮಿಕ್ ಭೂಪ್ರದೇಶಗಳು*

## ಖಲೀಫರ ಆಳ್ವಿಕೆ

ಮುಹಮ್ಮದ್ ನಬಿಯ ಮರಣಾನಂತರ ಅಧಿಕಾರಕ್ಕೇರಿದ ಅವರ ಉತ್ತರಾಧಿಕಾರಿಗಳನ್ನು ಖಲೀಫರು ಎಂದು ಕರೆಯುತ್ತಾರೆ. ಅವರ ಆಡಳಿತವು ಖಲೀಫರ

ಆಳ್ವಿಕೆಯಾಗಿದೆ (Caliphate). ಖಲೀಫ ಇಸ್ಲಾಂ ಮತದ ಅಧ್ಯಕ್ಷನೂ ಅರಬ್ ರಾಷ್ಟ್ರದ ಮುಖ್ಯಸ್ಥನೂ ಆಗಿದ್ದನು. ಆರಂಭದ ನಾಲ್ಕು ಖಲೀಫರ ಕಾಲದಲ್ಲಿ ಅರಬ್ ಸಾಮ್ರಾಜ್ಯದ ರಾಜಧಾನಿಯು ಮದೀನ ಆಗಿತ್ತು. ಆರಂಭಕಾಲದ ಖಲೀಫರು ಯಾರೆಂದು ನೋಡೋಣ.

**ಆರಂಭಕಾಲದ ಖಲೀಫರು**

- ಅಬೂಬಕ್ಕರ್
- ಉಮರ್
- ಉಸ್ಮಾನ್
- ಅಲಿ

*ಮುಹಮ್ಮದ್ ನಬಿಯ ನಂತರ ಅರೇಬಿಯಾದಲ್ಲಿ ಅಧಿಕಾರಕ್ಕೆ ಬಂದ ಖಲೀಫರ ಪ್ರೊಫೈಲ್ ಆಲ್ಬಂ ತಯಾರಿಸಿರಿ.*

## ಉಮವಿಯ್ಯ ರಾಜವಂಶ



ಚಿತ್ರ 11.7 • ಡೋಂ ಓಫ್ ದಿ ರೋಕ್

ನಾಲ್ಕನೇ ಖಲೀಫನಾದ ಅಲಿಯ ಮರಣಾನಂತರ ಉಂಟಾದ ರಾಜಕೀಯ ಅನಿಶ್ಚಿತತೆಯಿಂದಾಗಿ ಸಿರಿಯಾದ ಗವರ್ನರ್ ಆಗಿದ್ದ ಮುಆವಿಯ (Muawiya) ಅಧಿಕಾರವನ್ನು ವಶಪಡಿಸಿದನು. ಉಮವಿಯ್ಯ ರಾಜವಂಶವು ಅವನು ಸ್ಥಾಪಿಸಿದ ರಾಜವಂಶವಾಗಿದೆ. ಅವನು ರಾಜಧಾನಿಯನ್ನು ಸಿರಿಯಾದ ಡಮಾಸ್ಕಸ್ ಗೆ ಸ್ಥಳಾಂತರಿಸಿದನು. ಉಮವಿಯ್ಯ ರಾಜವಂಶದ ಖಲೀಫರಾಗಿದ್ದ ಅಬ್ ದ್ ಅಲ್ ಮಲಿಕ್ ಅರಬ್ ತತ್ವಗಳಿಗೆ ಪ್ರಾಧಾನ್ಯ ನೀಡಿದನು. ಅವು ಯಾವುವೆಂದು ಪರಿಶೀಲಿಸೋಣ.

- ಅರಬಿಯನ್ನು ಆಡಳಿತ ಭಾಷೆಯನ್ನಾಗಿಸಿದನು.
- ಇಸ್ಲಾಮಿಕ್ ನಾಣ್ಯ ವ್ಯವಸ್ಥೆಯನ್ನು ಜಾರಿಗೊಳಿಸಿದನು.
- ಜೆರುಸಲೇಮಿನಲ್ಲಿ ಡೋಂ ಓಫ್ ದಿ ರೋಕ್ ನಿರ್ಮಿಸಿದನು.

## ಅಬ್ಬಾಸಿಯಾ



ಚಿತ್ರ 11.8 • ಹಾರೂನ್ ಅಲ್ ರಶೀದ್

ಉಮವಿಯ್ಯ ರಾಜವಂಶವನ್ನು ಆಡಳಿತದಿಂದ ಹೊರದಬ್ಬಿ ಅಬುಲ್ ಅಬ್ಬಾಸಿ (Abul Abbas) ನೇತೃತ್ವದಲ್ಲಿ ಅಬ್ಬಾಸಿಯಾ ಆಡಳಿತ ಅಸ್ತಿತ್ವಕ್ಕೆ ಬಂತು. ಇವರು ರಾಜಧಾನಿಯನ್ನು ಡಮಾಸ್ಕಸ್ ನಿಂದ ಬಾಗ್ದಾದಿಗೆ ಸ್ಥಳಾಂತರಿಸಿದರು. ಇವರಲ್ಲಿ ಹಾರೂನ್ ಅಲ್ ರಶೀದ್ (Harun-al-Rashid) ಪ್ರಮುಖ ಕವಿ ಮತ್ತು ಪಂಡಿತನಾಗಿದ್ದನು.

*ಖಲೀಫರ ಆಡಳಿತದ ನಂತರ ಅರೇಬಿಯಾದಲ್ಲಿ ಆಧಿಪತ್ಯವನ್ನು ಸುದೃಢಗೊಳಿಸಿದ ರಾಜವಂಶಗಳ ವಿಶೇಷತೆಗಳನ್ನು ಚರ್ಚಿಸಿ ಫ್ಲಿಪ್ ಆಲ್ಬಂ ತಯಾರಿಸಿರಿ.*

## ಜಗತ್ತಿಗೆ ಅರಬರು ನೀಡಿದ ಕೊಡುಗೆಗಳು

ಅರಬರು ತಮ್ಮದೇ ಆದ ಒಂದು ಸ್ವಂತ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದವರಾಗಿದ್ದರು. ಅವರಿಗೆ ಕಾರ್ಯದಕ್ಷತೆಯಿಂದ ಕೂಡಿದ ಒಂದು ಆಡಳಿತ ಕ್ರಮ, ಅಂಚೆ ವ್ಯವಸ್ಥೆ ಮತ್ತು

ತೆರಿಗೆ ಸಂಗ್ರಹ ವ್ಯವಸ್ಥೆಗಳಿದ್ದವು. ಶೈಕ್ಷಣಿಕ ವಲಯದಲ್ಲೂ ಉತ್ತಮ ಪ್ರಗತಿಯನ್ನು ಸಾಧಿಸಲು ಅವರಿಗೆ ಸಾಧ್ಯವಾಗಿತ್ತು.ಬಾಗ್ದಾದ್, ಡಮಾಸ್ಕಸ್, ಕೈರೋ, ಕಾರ್ಡೋವ ಎಂಬೆಡೆಗಳಲ್ಲಿರುವ ವಿಶ್ವವಿದ್ಯಾಲಯಗಳು ಇದಕ್ಕೆ ಉದಾಹರಣೆಗಳಾಗಿವೆ.

ಅರಬರು ಜಗತ್ತಿಗೆ ಬೀಜಗಣಿತ ಮತ್ತು ಅರಬಿ ಅಂಕೆಗಳನ್ನು ಕೊಡುಗೆಯಾಗಿ ನೀಡಿದರು. ಭಾರತದ ಕೊಡುಗೆಯಾದ 'ಸೊನ್ನೆ'ಯನ್ನು ಪ್ರಪಂಚದಾದ್ಯಂತ ಅರಬರು ಪ್ರಚಾರ ಮಾಡಿದರು. ರಸಾಯನಶಾಸ್ತ್ರದಲ್ಲಿನ ಅನೇಕ ರಾಸಾಯನಿಕ ಪ್ರಕ್ರಿಯೆಗಳ ಸಂಶೋಧಕರೂ ಅರಬರಾಗಿದ್ದಾರೆ. ಇವರು ಪ್ರಕಾಶ ಶಾಸ್ತ್ರದ (Optics) ಸಂಶೋಧಕರೂ ಆಗಿದ್ದರು. ಅವರಿಗೆ ಕ್ಷಯ, ಸಿಡುಬು, ಉದರ ಕ್ಯಾನ್ಸರ್ (ಟೈಫಸ್) ಮತ್ತು ಪ್ಲೇಗ್ ಮೊದಲಾದ ರೋಗಗಳ ಬಗ್ಗೆ ತಿಳುವಳಿಕೆಯಿತ್ತು. 'ಸಾವಿರದ ಒಂದು ರಾತ್ರಿಗಳು' *(The Thousand and One Nights)* ಅರಬ್ಬಿಸಾಹಿತ್ಯದ ಪ್ರಸಿದ್ಧಗ್ರಂಥವಾಗಿದೆ. ಇತರ ಕ್ಷೇತ್ರಗಳಿಗೆ ಅವರು ನೀಡಿದ ಕೊಡುಗೆಗಳು ಯಾವುವೆಂದು ಪರಿಶೀಲಿಸೋಣ.

| ಶಾಸ್ತ್ರಜ್ಞರು/ ಸಾಹಿತಿಗಳು | ವಲಯ | ಗ್ರಂಥಗಳು |
|---|---|---|
| ಅಲ್‌ರಾಸಿ | ವೈದ್ಯಕೀಯ ಶಾಸ್ತ್ರ | ಕಿತಾಬ್-ಅಲ್-ಹಾವಿ *(Kithab-Al-Hawi)* |
| ಅವಿಸೆನ್ನ (ಇಬ್ನ್ ಸೀನ) | ವೈದ್ಯಕೀಯ ಶಾಸ್ತ್ರ | ಅಲ್-ಖಾನುನ್ ಫಿತ್ತಿಬ್ *(Al-Qanun Fittib)* |
| ಅಲ್ ಬಿರುನಿ | ಭೂಮಿ ಶಾಸ್ತ್ರ | ತಹ್‌ಖೀಕ್ ಮಾ ಲಿಲ್-ಹಿಂದ್ *(Tahqiq ma lil-Hind)* |
| ಒಮರ್ ಖಯ್ಯಾಮ್ | ಸಾಹಿತ್ಯ | ರುಬಯ್ಯಾತ್ *(Rubaiyyat)* |
| ಫಿರ್ದೌಸಿ | ಸಾಹಿತ್ಯ | ಷಾಹ್ನಾಮ *(Shahnama)* |

*ಅರಬರು ಜಗತ್ತಿಗೆ ನೀಡಿದ ಕೊಡುಗೆಗಳನ್ನು ಪಟ್ಟಿ ಮಾಡಿರಿ.*

## ಮಂಗೋಲಿಯಾ ಸಾಮ್ರಾಜ್ಯ

ಮಂಗೋಲಿಯನ್ನರು ಮಧ್ಯ ಏಷ್ಯಾದ ಪೂರ್ವಭಾಗದಲ್ಲಿ ವಾಸಿಸುತ್ತಿದ್ದ ಅಲೆಮಾರಿ ಬುಡಕಟ್ಟು ಜನಾಂಗದವರಾಗಿದ್ದರು. ಮಂಗೋಲಿಯನ್ನರು ಹಗಲು ಪೂರ್ತಿ ಹುಲ್ಲುಗಾವಲುಗಳನ್ನು ಹುಡುಕುತ್ತಾ ಕುದುರೆಯ ಮೇಲೆ ಕುಳಿತು ಪ್ರಯಾಣಿಸುತ್ತಿದ್ದರು ಹಾಗೂ ರಾತ್ರಿಯಲ್ಲಿ ಡೇರೆಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಜನಾಂಗದವರಾಗಿದ್ದಾರೆ. ಚೆಂಗಿಸ್ ಖಾನ್ ಪರಸ್ಪರ ಹೋರಾಡುತ್ತಿದ್ದ ವಿವಿಧ ಮಂಗೋಲ್ ಬುಡಕಟ್ಟು ವಿಭಾಗಗಳನ್ನು ಏಕೀಕರಿಸಿ ಮಂಗೋಲಿಯಾ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದನು. ಅವನ ನಿಜನಾಮವು ಟೆಮುಜಿನ್ (Temujin) ಎಂದಾಗಿತ್ತು.ಮಂಗೋಲಿಯನ್ ಗೋತ್ರ ಸಭೆಯು ಆತನಿಗೆ ಚೆಂಗಿಸ್ ಖಾನ್ ಎಂಬ ಹೆಸರನ್ನು ನೀಡಿತು. ಮಂಗೋಲಿಯನ್ನರ ರಾಜಧಾನಿಯು ಕಾರಕೋರಂ ಆಗಿತ್ತು. ದೇಶದ ವಿವಿಧ ಪ್ರದೇಶಗಳನ್ನು ಪರಸ್ಪರ ಜೋಡಿಸುವುದಕ್ಕಾಗಿ ಒಂದು ಅಂಚೆ ವ್ಯವಸ್ಥೆಯನ್ನು ಚೆಂಗಿಸ್‌ಖಾನ್ ಆರಂಭಿಸಿದನು. ಇದು 'ಯಾಂ' ಎಂಬ ಹೆಸರಿನಲ್ಲಿ ತಿಳಿಯಲ್ಪಟ್ಟಿತು.



*ಚಿತ್ರ 11.9 • ಚೆಂಗಿಸ್ ಖಾನ್*

ಕಾರ್ಯದಕ್ಷತೆಯಿಂದ ಕೂಡಿದ ಈ ವ್ಯವಸ್ಥೆಯಲ್ಲಿ ಕುದುರೆಗಳನ್ನು ಬಳಸುತ್ತಿದ್ದರು. ಅವನು 'ಯಾಸ' ಎಂಬ ಹೆಸರಿನ ನಿಯಮಸಂಹಿತೆಗೆ ರೂಪು ನೀಡಿದನು.

## ಮಾಲಿ ಸಾಮ್ರಾಜ್ಯ

ಮಾಲಿ ಸಾಮ್ರಾಜ್ಯವು ಆಫ್ರಿಕಾದ ಪಶ್ಚಿಮ ಭಾಗದಲ್ಲಿ ವ್ಯಾಪಿಸಿಕೊಂಡಿದ್ದ ಪ್ರಸಿದ್ಧವಾದ ಸಾಮ್ರಾಜ್ಯಗಳಲ್ಲೊಂದಾಗಿತ್ತು. ಮನ್ಸ ಕಂಕನ್ ಮೂಸ ಈ ಸಾಮ್ರಾಜ್ಯದ ಅತ್ಯಂತ ಪ್ರಬಲನಾದ ಆಡಳಿತಾಧಿಕಾರಿಯಾಗಿದ್ದನು. ಇಬಿನ್ ಬತ್ತೂತನ ಬರಹಗಳಿಂದ ಆಫ್ರಿಕಾದ ಅತ್ಯಂತ ಸಂಪದ್ಭರಿತ ರಾಜ್ಯವಾದ ಮಾಲಿಯ ಕುರಿತು ಮಾಹಿತಿಯು ಲಭಿಸುತ್ತದೆ. ಮನ್ಸ ಕಂಕನ್ ಮೂಸ ಶಿಕ್ಷಣ, ಕರಕುಶಲ ವಿದ್ಯೆ ಎಂಬಿವುಗಳನ್ನು ಪ್ರೋತ್ಸಾಹಿಸಿದನು. ರಾಜ್ಯದ ದಕ್ಷಿಣ ಭಾಗವು ಚಿನ್ನದ ನಿಕ್ಷೇಪಕ್ಕೆ ಮತ್ತು ಉತ್ತರ ಭಾಗವು ಉಪ್ಪಿನ ನಿಕ್ಷೇಪಕ್ಕೆ ಹೆಸರುವಾಸಿಯಾಗಿತ್ತು. ಗಾವೋ (Gao), ಜೆನೆ (Jenne), ತಿಂಬುಕ್ತು (Timbuktu) ಎಂಬಿವು ಸಾಮ್ರಾಜ್ಯದ ಪ್ರಸಿದ್ಧ ಪಟ್ಟಣಗಳಾಗಿದ್ದುವು. ತಿಂಬುಕ್ತು ವ್ಯಾಪಾರ ಕೇಂದ್ರವೂ ಶೈಕ್ಷಣಿಕ ಕೇಂದ್ರವೂ ಆಗಿತ್ತು. ಇಲ್ಲಿರುವ ಗ್ರೇಟ್ ಮೋಸ್ಕ್ ಇಸ್ಲಾಮಿಕ್ ಅಧ್ಯಯನ ಕೇಂದ್ರವಾಗಿತ್ತು. ಜಗತ್ತಿನ ನಾನಾ ಭಾಗಗಳಿಂದ ಅನೇಕ ಪಂಡಿತರು ತಿಂಬುಕ್ತು ಪಟ್ಟಣಕ್ಕೆ ಬರುತ್ತಿದ್ದರು.




*ಚಿತ್ರ 11.10 • ಮಾಲಿ ಸಾಮ್ರಾಜ್ಯ*

*ಮಂಗೋಲಿಯ ಮತ್ತು ಮಾಲಿ ಸಾಮ್ರಾಜ್ಯದ ವಿಶೇಷತೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ಅಮೇರಿಕಾದ ರಾಷ್ಟ್ರ ವ್ಯವಸ್ಥೆಗಳು



*ಚಿತ್ರ 11.11 •*

*"ಮಣ್ಣಿನ ಆಳಕ್ಕೆ ನಿನ್ನನ್ನು ನೀನು ನೋಡು ಉಳುವವನೇ,*
*ನೇಕಾರನೇ, ನಾಲಗೆ ಎತ್ತದ ಕುರುಬನೇ....*
*ನಿನ್ನ ರಕ್ತ, ನೀನು ಸುರಿಸಿದ ಬೆವರು ನನಗೆ ತೋರಿಸು*
*ನನ್ನಲ್ಲಿ ಹೇಳು !*
*ನನ್ನನ್ನು ಚಾಟಿಯಿಂದ ಹೊಡೆದದ್ದು ಇಲ್ಲಿ*
*ಒಂದು ರತ್ನದ ಕಲ್ಲಿಗೆ ಹೊಳಪು ಸಾಕಾಗಲಿಲ್ಲವಂತೆ,*
*ಜೋಳದ ರತ್ನದ*
*ಬಾಡಿಗೆಯನ್ನು ಪಾವತಿಸಲು ಮಣ್ಣು ತಡ ಮಾಡಿತಂತೆ"*

*ಪಾಬ್ಲೋ ನೆರುದ, ದಿ ಹೈಟ್ಸ್ ಓಫ್ ಮಾಚ್ಚುಪಿಚ್ಚು*

ಇವು ಚಿತ್ರ 11.11ರಲ್ಲಿ ಕೊಟ್ಟಿರುವ ನಿರ್ಮಿತಿಗೆ ಸಂಬಂಧಿಸಿ ಪಾಬ್ಲೋ ನೆರುದ ಬರೆದ ಸಾಲುಗಳಾಗಿವೆ. ಈ ಪ್ರಾಚೀನ ನಿರ್ಮಿತಿ ಯಾವುದು? ಇದು ಯಾವ ಭೂಖಂಡದಲ್ಲಿದೆ ? ಈ ನಿರ್ಮಿತಿಯು ಅಮೇರಿಕಾದಲ್ಲಿ ಸಂಘಟಿತವಾದ ರಾಷ್ಟ್ರ ವ್ಯವಸ್ಥೆಗಳು ಅಸ್ತಿತ್ವದಲ್ಲಿದ್ದವು ಎಂಬುದನ್ನು ನಮಗೆ ನೆನಪಿಸುತ್ತದೆ. ಆದರೆ ಈ ರಾಷ್ಟ್ರ ವ್ಯವಸ್ಥೆಗಳ ಕುರಿತು ಹೊರ ಜಗತ್ತಿಗೆ ತಿಳಿದಿರಲಿಲ್ಲ. 15ನೆಯ ಶತಮಾನದಲ್ಲಿ ಯುರೋಪಿಯನ್ನರ

ಅಮೆರಿಕಾದೆಡೆಗಿನ ಪರ್ಯಟನೆಗಳ ಮೂಲಕ ಇವುಗಳ ಕುರಿತಾದ ಮಾಹಿತಿಯು ಹೊರ ಜಗತ್ತಿಗೆ ಲಭ್ಯವಾಯಿತು. ಆಜ್‌ಟೆಕ್, ಮಾಯಾ, ಇಂಕಾ (ಭೂಪಟ 11.12) ಎಂಬಿವು ಅಮೆರಿಕಾದಲ್ಲಿ ಅಸ್ತಿತ್ವದಲ್ಲಿದ್ದ ರಾಷ್ಟ್ರ ವ್ಯವಸ್ಥೆಗಳಾಗಿದ್ದುವು. ಅವುಗಳ ಕುರಿತು ವಿವರವಾಗಿ ತಿಳಿಯೋಣ.



*ಭೂಪಟ 11.12 • ಮಧ್ಯ ದಕ್ಷಿಣ ಅಮೆರಿಕಾದ ರಾಷ್ಟ್ರ ವ್ಯವಸ್ಥೆಗಳು*

## ಆಜ್‌ಟೆಕ್‌ಗಳು (The Aztecs)

12 ನೇ ಶತಮಾನದಲ್ಲಿ ಆಜ್‌ಟೆಕ್‌ಗಳು ಮೆಕ್ಸಿಕೋ ಕಣಿವೆಗೆ ವಲಸೆ ಬಂದರು. ಆಜ್‌ಟೆಕ್ ಸಮಾಜವು ಶ್ರೇಣಿಯಾಧಾರಿತವಾಗಿತ್ತು. ಟೆನೋಚ್‌ಟಿಟ್‌ಲಾನ್ (Tenochtitlan) ಇವರ ರಾಜಧಾನಿಯಾಗಿತ್ತು. ಇವರು ಮೆಕ್ಸಿಕೋ ಸರೋವರದಲ್ಲಿ ಚಿನಂಬಗಳೆಂಬ (Chinampas) ಕೃತಕ ದ್ವೀಪಗಳನ್ನು ನಿರ್ಮಿಸಿದ್ದರು. ಇದು ಅವರ ನಿರ್ಮಾಣ ಕೌಶಲ್ಯಗಳಿಗೆ ಉದಾಹರಣೆಯಾಗಿದೆ. ಕೃಷಿಗೆ ಪ್ರಾಧಾನ್ಯ ನೀಡಿದ ಇವರು ಜೋಳ, ಬೀನ್ಸ್, ಕುಂಬಳಕಾಯಿ, ಚೀನಿಕಾಯಿ, ಮರಗೆಣಸು, ಬಟಾಟೆ ಇತ್ಯಾದಿಗಳನ್ನು ಕೃಷಿ ಮಾಡುತ್ತಿದ್ದರು.ಇದಕ್ಕೆ ಹೊರತಾಗಿ ವ್ಯಾಪಾರ ಮತ್ತು ಕರಕುಶಲ ಕೆಲಸಗಳಲ್ಲಿಯೂ ನಿರತರಾಗಿದ್ದರು. ಚಿನ್ನ, ತಾಮ್ರ, ಟಿನ್ ಎಂಬೀ ಲೋಹಗಳ ನಾಣ್ಯಗಳನ್ನು ಇವರು ಉಪಯೋಗಿಸುತ್ತಿದ್ದರು. ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಪ್ರಭುಗಳ ಮಕ್ಕಳಿಗಾಗಿ ಕಾಲ್‌ಮೆಕಾಕ್ (Calmecac) ಮತ್ತು ಇತರ ವಿಭಾಗದವರ ಮಕ್ಕಳಿಗಾಗಿ ಟೆಪ್ಪೋಚ್‌ಕಲ್ಲೀ (Tepochcalli) ಎಂಬ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ಮಿಸಿದ್ದರು.

## ಮಾಯಾ

ಮಾಯಾ ನಾಗರಿಕತೆಯು 11 ಮತ್ತು 14ನೇ ಶತಮಾನಗಳ ನಡುವೆ ಮೆಕ್ಸಿಕೋದಲ್ಲಿ ಪ್ರಗತಿ ಹೊಂದಿದ ಪ್ರಾಚೀನ ನಾಗರಿಕತೆಯಾಗಿತ್ತು. ಇವರು ಕಾಡನ್ನು ಕಡಿದು ಜೋಳದ ಕೃಷಿ ಮಾಡಿದರು. ಕಗ್ಗಲ್ಲುಗಳಿಂದ ಅರಮನೆಗಳನ್ನು ಮತ್ತು ದೇವಾಲಯಗಳನ್ನು ನಿರ್ಮಿಸಿದರು. ಇವರು ಚಿನ್ನ ಮತ್ತು ಬೆಳ್ಳಿಯಿಂದ ತಯಾರಿಸಿದ ಆಭರಣಗಳನ್ನೂ ಮನೋಹರವಾದ ಮಣ್ಣಿನ ಪಾತ್ರೆಗಳನ್ನೂ ತಯಾರಿಸುತ್ತಿದ್ದರು. ಚಿತ್ರಲಿಪಿಗಳಿಂದ ಕೂಡಿದ ಅಕ್ಷರಮಾಲೆಯನ್ನು ಇವರು ಉಪಯೋಗಿಸುತ್ತಿದ್ದರು. ಮರದ ತೊಗಟೆ ಮತ್ತು ಪ್ರತ್ಯೇಕ ವಿಧದಲ್ಲಿರುವ ಗಿಡದಿಂದ ತಯಾರಿಸಿದ ಕಾಗದಗಳನ್ನು ಬರೆಯಲು ಉಪಯೋಗಿಸುತ್ತಿದ್ದರು. ಗಣಿತಶಾಸ್ತ್ರ ಮತ್ತು ಜ್ಯೋತಿಶಾಸ್ತ್ರದಲ್ಲಿ ಪ್ರಗತಿಯನ್ನು ಸಾಧಿಸಿದ ಇವರಿಗೆ ಒಂದು ಪಂಚಾಂಗವೂ ಇತ್ತು.

### *ಚಿನಂಬಗಳು*


*ಚಿತ್ರ 11.13 • ಚಿನಂಬಗಳು*

*ಚಿನಂಬಗಳು ಮೆಕ್ಸಿಕೋ ಸರೋವರದಲ್ಲಿ ನಿರ್ಮಿಸಿದ ಕೃತಕ ದ್ವೀಪಗಳಾಗಿವೆ. ಜೊಂಡು ಚಾಪೆ (ಎತ್ತರಕ್ಕೆ ಬೆಳೆಯುವ ಒಂದು ಜಾತಿಯ ಹುಲ್ಲು ವರ್ಗ) ಗಳನ್ನು ಕೆಸರಿನಿಂದ ಮುಚ್ಚಿ ಅದರ ಮೇಲೆ ಗಿಡಗಳನ್ನು ನೆಟ್ಟು ದ್ವೀಪಗಳನ್ನು ನಿರ್ಮಿಸುತ್ತಿದ್ದರು.ಈ ದ್ವೀಪಗಳ ಮಧ್ಯೆ ಅರಮನೆಗಳನ್ನೂ ಪಿರಮಿಡ್ಡುಗಳನ್ನೂ ನಿರ್ಮಿಸಿದ್ದರು.*



*ಚಿತ್ರ 11.14* ● ಮಾಯಾ ಸಂಸ್ಕೃತಿಯ ಆರಾಧನಾಲಯ



*ಚಿತ್ರ 11.15* ● ಕ್ವಿಪ್ಪು (Quipu) (ಹಗ್ಗದಲ್ಲಿ ವಿಶೇಷ ರೀತಿಯ ಗಂಟುಗಳನ್ನು ಬಳಸಿ ಗಣಿತದ ಯೂನಿಟ್ ಗಳನ್ನು ಸೂಚಿಸುವ ರಹಸ್ಯ ಭಾಷೆ)

## ಇಂಕಾ

ಪೆರುವಿನಲ್ಲಿದ್ದ ಇಂಕಾ ನಾಗರಿಕತೆಯು ದಕ್ಷಿಣ ಅಮೇರಿಕಾದಲ್ಲಿ ಅಸ್ತಿತ್ವದಲ್ಲಿದ್ದ ಅತ್ಯಂತ ದೊಡ್ಡ ಪ್ರಾದೇಶಿಕ ನಾಗರಿಕತೆಯಾಗಿದೆ. ಅಲ್ಲಿ ಕೇಂದ್ರೀಕೃತ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು. ರಾಜನು ಪರಮಾಧಿಕಾರಿಯಾಗಿದ್ದನು. ಕುಸ್ಕೋ (Cuzco) ರಾಜಧಾನಿಯಾಗಿತ್ತು. ಕಗ್ಗಲ್ಲುಗಳಿಂದ ನಿರ್ಮಿಸಿದ ದೇವಾಲಯಗಳು, ಅರಮನೆಗಳು ಮತ್ತು ನಯನ ಮನೋಹರವಾದ ಮನೆಗಳು ಈ ನಗರದಲ್ಲಿದ್ದುವು. ರಸ್ತೆಯ ಮೂಲಕ ರಾಜಧಾನಿಯು ದೇಶದ ವಿವಿಧ ಭಾಗಗಳೊಂದಿಗೆ ಸಂಪರ್ಕವನ್ನು ಹೊಂದಿತ್ತು. ಪೆರುವಿನ ಮಧ್ಯ ಭಾಗದಲ್ಲಿ 3500 ಮೀಟರ್ ಎತ್ತರದಲ್ಲಿರುವ ಮಾಚ್ಚುಪಿಚ್ಚು ಇವರ ನಿರ್ಮಾಣ ಕೌಶಲ್ಯಕ್ಕೆ ಉತ್ತಮ ಉದಾಹರಣೆಯಾಗಿದೆ. ಚಿನ್ನ, ಬೆಳ್ಳಿ, ತಾಮ್ರ ಎಂಬಿವುಗಳಿಂದ ಆಭರಣಗಳನ್ನು ತಯಾರಿಸುತ್ತಿದ್ದರು. ಇವರು ಕಂಬಳಿ ವಸ್ತ್ರವನ್ನು ನಿರ್ಮಿಸಲು ಲಾಮ (Lama), ಅಲ್‌ಪಾಕ (Alpaca) ಮುಂತಾದ ಪ್ರಾಣಿಗಳ ಚರ್ಮವನ್ನು ಉಪಯೋಗಿಸುತ್ತಿದ್ದರು. ಕೃಷಿ ಮಾಡಲು ಅಗತ್ಯವಿರುವಷ್ಟು ಭೂಮಿಯನ್ನು ಸರಕಾರವು ಕೃಷಿಕರಿಗೆ ಒದಗಿಸಿತ್ತು. ಜೋಳ ಮತ್ತು ಬಟಾಟೆ ಪ್ರಮುಖ ಕೃಷಿ ಬೆಳೆಗಳಾಗಿದ್ದುವು. ಕ್ವಿಪ್ಪು (Quipu) ಎಂಬ ಲೆಕ್ಕಾಚಾರಗಳನ್ನು ದಾಖಲಿಸುವ ವಿಧಾನವು ಅಸ್ತಿತ್ವದಲ್ಲಿತ್ತು. ಸ್ಪೈನ್ ನವರು ಅಮೇರಿಕಾವನ್ನು ವಸಾಹತನ್ನಾಗಿಸಿದುದು ಈ ನಾಗರಿಕತೆಗಳ ನಾಶಕ್ಕೆ ಕಾರಣವಾಯಿತು.

*ಅಮೇರಿಕಾದಲ್ಲಿ ಅಸ್ತಿತ್ವದಲ್ಲಿದ್ದ ವಿವಿಧ ನಾಗರಿಕತೆಗಳ ಸಾಮಾನ್ಯ ವಿಶೇಷತೆಗಳನ್ನು ಚರ್ಚಿಸಿ ಸೆಮಿನಾರ್ ನಡೆಸಿರಿ.*

ಯುರೋಪ್, ಏಷ್ಯಾ, ಆಫ್ರಿಕಾ, ಅಮೇರಿಕಾ ಎಂಬೆಡೆಗಳಲ್ಲಿ ವಿವಿಧ ಕಾಲದಲ್ಲಿ ಉಂಟಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬದಲಾವಣೆಗಳ ಕುರಿತು ಈ ಪಾಠಭಾಗದಿಂದ ತಿಳಿಯಿತಲ್ಲವೇ? ಈ ಬದಲಾವಣೆಗಳು ಮೇಲೆ ಸೂಚಿಸಲಾದ ಪ್ರದೇಶಗಳ ಆಧುನಿಕತೆಯೆಡೆಗಿನ ಬದಲಾವಣೆಯ ಹೆಜ್ಜೆಗಳಾಗಿದ್ದವು.

## ಮುಂದುವರಿದ ಚಟುವಟಿಕೆಗಳು

- 'ಫ್ಯೂಡಲಿಸಂ ಯುರೋಪಿನ ಸಮಾಜದಲ್ಲಿ ಉಂಟು ಮಾಡಿದ ಬದಲಾವಣೆಗಳು' ಎಂಬ ವಿಷಯದ ಆಧಾರದಲ್ಲಿ ಪ್ರಬಂಧ ತಯಾರಿಸಿರಿ.
- ಅರಬ್ ಸಾಮ್ರಾಜ್ಯದ ಹುಟ್ಟು ಮತ್ತು ಅರಬ್ ಜನಾಂಗದವರ ಏಕೀಕರಣವನ್ನು ಸೇರಿಸಿ ಮೈಂಡ್ ಮ್ಯಾಪ್ ತಯಾರಿಸಿರಿ.
- ನೀವು ಅಮೆರಿಕಾದ ರಾಷ್ಟ್ರ ವ್ಯವಸ್ಥೆಗಳ ಕುರಿತು ಅಧ್ಯಯನ ನಡೆಸಿದ ಗುಂಪಿನ ಒಬ್ಬರು ಸದಸ್ಯರಾಗಿದ್ದರೆ ನೀವು ಕಂಡುಕೊಂಡ ವಿಚಾರಗಳನ್ನು ವಿವರಿಸಿಕೊಂಡು ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.
- ವಿವಿಧ ಸಾಮ್ರಾಜ್ಯಗಳ ರೂಪೀಕರಣಕ್ಕೆ ಕಾರಣರಾದ ಆಡಳಿತಾಧಿಕಾರಿಗಳ ಒಂದು ಡಿಜಿಟಲ್ ಸಂಚಿಕೆಯನ್ನು ತಯಾರಿಸಿರಿ.

ಅಧ್ಯಾಯ 12



# ಕೃಷಿ ವಲಯ ಹಾಗೂ ನೂತನ ಒಲವುಗಳು




ಚಿತ್ರ 12.1

*"ವಿದ್ಯಾರ್ಥಿಯಾಗಿರುವಾಗಲೇ ಕೃಷಿಕನಾಗಿದ್ದೇನೆಂಬುದರಲ್ಲಿ ನಾನು ಹೆಮ್ಮೆಪಡುತ್ತೇನೆ. ಶಾಲೆಯಲ್ಲಿ ಕೃಷಿ ಇಲಾಖೆ ನಡೆಸಿದ ತರಗತಿಯು ಕೃಷಿಯನ್ನು ಪ್ರಾರಂಭಿಸಲು ನನಗೆ ಪ್ರಚೋದನೆಯನ್ನು ನೀಡಿತು. ನನ್ನ ಕೃಷಿ ಸ್ಥಳದಲ್ಲಿ ಹಣ್ಣುಗಳು ಮತ್ತು ತರಕಾರಿಗಳಿವೆ. ನಾನು ಶಾಲೆಯಿಂದ ಹಿಂತಿರುಗಿ ಬಂದು ಚಹಾ ಕುಡಿದ ನಂತರ, ಕೃಷಿ ಸ್ಥಳಕ್ಕೆ ಹೋಗುತ್ತೇನೆ. ನಾನು ಮತ್ತು ತಂಗಿ ಸೇರಿ ಕೃಷಿ ಸ್ಥಳಕ್ಕೆ ನೀರುಣಿಸುತ್ತೇವೆ. ನಾನು ಸಂಪೂರ್ಣವಾಗಿ ಸಾವಯವ ಕೃಷಿ ಮಾಡುತ್ತೇನೆ. ಅಗತ್ಯವಿರುವ ಎರೆಹುಳ ಗೊಬ್ಬರವನ್ನು ಸ್ವತ: ತಯಾರಿಸುತ್ತೇನೆ. ವಿದ್ಯಾರ್ಥಿ ಜೀವನದೆಡೆಯಲ್ಲಿ ಸಿಗುವ ಬಿಡುವಿನ ವೇಳೆಯನ್ನು ಫಲಪ್ರದವಾಗಿ ಬಳಸಿಕೊಳ್ಳಲು ನನಗೆ ಸಾಧ್ಯವಾಗುತ್ತದೆ. ಕೃಷಿಯು ನನಗೆ ಸಂತೋಷ ಮತ್ತು ಸಂತೃಪ್ತಿಯೊಂದಿಗೆ ಆದಾಯವನ್ನೂ ನೀಡುತ್ತದೆ. ಕೃಷಿಯ ಪ್ರಾಧಾನ್ಯವನ್ನು ಹಾಗೂ ಅಗತ್ಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ.*

ಕೃಷಿ ಇಲಾಖೆಯ 'ಕುಟ್ಟಿಕರ್ಷಕ' (ಬಾಲಕೃಷಿಕ) ಪ್ರಶಸ್ತಿ ವಿಜೇತನಾದ ನವೀನನು ಸಿಂಹ ಮಾಸ 1 ಕೃಷಿಕ ದಿನಾಚರಣೆಯಂದು ಶಾಲೆಯಲ್ಲಿ ಗೌರವ ಸ್ವೀಕರಿಸಿದ ನಂತರ ಅವರು ಮಾಡಿದ ಭಾಷಣವನ್ನು ಮೇಲೆ ನೀಡಲಾಗಿದೆ. ನವೀನನ ಹಾಗೆ ನೀವೂ ಕೃಷಿ ಮಾಡುತ್ತೀರಾ? ಕೃಷಿಯ ಪ್ರಾಧಾನ್ಯದ ಕುರಿತು ಬರೆಯಬಲ್ಲಿರಾ?

- ಆಹಾರಕ್ಕಾಗಿ
- 
- 
- 



ಕೃಷಿ ವಲಯವು ಆರ್ಥಿಕ ವ್ಯವಸ್ಥೆಯ ಅತ್ಯಂತ ಹಳೆಯ ಮತ್ತು ಪ್ರಮುಖ ವಲಯಗಳಲ್ಲೊಂದಾಗಿದೆ. ಇದು ಭಾರತದ ಅತಿದೊಡ್ಡ ಅಸಂಘಟಿತ ವಲಯವೂ ಆಗಿದೆ. ಕೃಷಿಯು ಜನರಿಗೆ ಅಗತ್ಯವಾದ ಆಹಾರವನ್ನು ಹಾಗೂ ಜಾನುವಾರುಗಳಿಗೆ ಅಗತ್ಯವಾದ ಮೇವನ್ನು ಒದಗಿಸುತ್ತದೆ. ದೇಶದ ಆಹಾರ ಭದ್ರತೆಯನ್ನು ಖಾತರಿಪಡಿಸುವಲ್ಲಿ ಮತ್ತು ಉದ್ಯೋಗವನ್ನು ಒದಗಿಸುವಲ್ಲಿ ಕೃಷಿ ವಲಯವು ಪ್ರಮುಖ ಪಾತ್ರ ವಹಿಸುತ್ತದೆ. ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಒದಗಿಸುವ ಮೂಲಕ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ. ನಮ್ಮ ದೈನಂದಿನ ಜೀವನದಲ್ಲಿಯೂ ಕೃಷಿ ಉತ್ಪನ್ನಗಳಿಗೆ ಅತ್ಯಂತ ಪ್ರಾಧಾನ್ಯವಿದೆ.

*ಚಿತ್ರ 12.2* •

*ನೀವು ಪ್ರತಿದಿನ ಉಪಯೋಗಿಸುವ ಕೃಷಿ ಸಂಪನ್ಮೂಲಗಳನ್ನು ನಿಮ್ಮ ಮನೆಯಲ್ಲೋ ಅಥವಾ ಪ್ರದೇಶದಲ್ಲೋ ಕೃಷಿ ಮಾಡುವವು ಹಾಗೂ ಮಾಡದಿರುವವು ಎಂದು ವರ್ಗೀಕರಿಸಿ ಪೂರ್ತಿಗೊಳಿಸಿರಿ.*

| *ಮನೆಯಲ್ಲೋ, ಸ್ಥಳೀಯವಾಗಿಯೋ ಕೃಷಿ ಮಾಡುವವುಗಳು* | *ಸ್ಥಳೀಯವಾಗಿ ಕೃಷಿ ಮಾಡದಿರುವವುಗಳು* |
|---|---|
| • | • |

ನಾವು ಬಳಸುವ ಎಲ್ಲಾ ಕೃಷಿ ಸಂಪನ್ಮೂಲಗಳು ನಮ್ಮ ನಾಡಿನಲ್ಲಿ ಕೃಷಿ ಮಾಡುವವುಗಳಲ್ಲವೆಂದು ತಿಳಿದುಕೊಂಡಿರಲ್ಲವೇ? ಭಾರತದ ಎಲ್ಲಾ ಕಡೆಗಳಲ್ಲಿ ಏಕರೀತಿಯ ಬೆಳೆಗಳನ್ನು ಮತ್ತು ಕೃಷಿ ಪದ್ಧತಿಗಳನ್ನು ಕೃಷಿಗಾಗಿ ಬಳಸಲಾಗುವುದಿಲ್ಲ. ಇದಕ್ಕೆ ಕಾರಣಗಳೇನಾಗಿರಬಹುದು? ಸ್ಥಳ ಮತ್ತು ಕಾಲ ವ್ಯತ್ಯಾಸವನ್ನು ಅವಲಂಬಿಸಿ ವಿಭಿನ್ನ ಬೆಳೆಗಳು ಮತ್ತು ಕೃಷಿ ಪದ್ಧತಿಗಳನ್ನು ಆಯ್ಕೆ ಮಾಡಲು ಕಾರಣಗಳಿವೆ.







*ಚಿತ್ರಗಳು 12.3* • *ವಿಭಿನ್ನ ಬೆಳೆಗಳು*

## ಬೆಳೆ ಪದ್ಧತಿಯ ಮೇಲೆ ಪ್ರಭಾವ ಬೀರುವ ಘಟಕಗಳು

| ಬೆಳೆ ಪದ್ಧತಿಯ ಮೇಲೆ ಪ್ರಭಾವ ಬೀರುವ ಘಟಕಗಳು | ಉಪ ಘಟಕಗಳು |
|---|---|
| • ಪ್ರಾಕೃತಿಕ ಘಟಕಗಳು | • ಮಣ್ಣಿನ ಗುಣ • ಭೂ ಪ್ರಕೃತಿ<br>• ಹವಾಮಾನ • ಜಲ ಲಭ್ಯತೆ |
| • ಆರ್ಥಿಕ ಘಟಕಗಳು | • ಕೃಷಿ ಸಂಪನ್ಮೂಲಗಳ ದರ<br>• ಕೃಷಿಕರ ಆದಾಯ<br>• ಕೈವಶವಿರುವ ಕೃಷಿ ಭೂಮಿಯ ವಿಸ್ತೀರ್ಣ |
| • ಮೂಲಭೂತ ಸೌಕರ್ಯಗಳು | • ನೀರಾವರಿ • ವಿದ್ಯುತ್<br>• ಸಾರಿಗೆ<br>• ಮಾರುಕಟ್ಟೆಯ ಸೌಲಭ್ಯ<br>• ಬೀಜಗಳು, ಗೊಬ್ಬರಗಳು ಮತ್ತು ಕೀಟನಾಶಕಗಳು ಇತ್ಯಾದಿಗಳ ಲಭ್ಯತೆ |
| • ಸಾಮಾಜಿಕ ಘಟಕಗಳು | • ಆಹಾರ ವಿಧಾನ • ವಿದ್ಯಾಭ್ಯಾಸ<br>• ಕೃಷಿ ಮಾಡುವ ತಲೆಮಾರುಗಳ ವ್ಯತ್ಯಾಸ<br>• ಸಾಮಾಜಿಕ ಪರಿಸರ |
| • ಸರಕಾರದ ಧೋರಣೆಗಳು | • ಬೆಳೆಗಳ ರಫ್ತು ಮತ್ತು ಆಮದು<br>• ತೆರಿಗೆ<br>• ಸಾಲ ಲಭ್ಯತೆ<br>• ಸಬ್ಸಿಡಿ |
| • ತಾಂತ್ರಿಕ ಘಟಕಗಳು | • ಅಧಿಕ ಇಳುವರಿ ಸಾಮರ್ಥ್ಯವಿರುವ ಬೀಜದ ವಿವಿಧ ತಳಿಯ ಬೀಜಗಳು<br>• ವೈಜ್ಞಾನಿಕವಾದ ನೀರಾವರಿ<br>• ಆಧುನಿಕ ತಂತ್ರಜ್ಞಾನದ ಉಪಯೋಗ |

ಕೃಷಿ ಪದ್ಧತಿಗಳ ಮೇಲೆ ಪ್ರಭಾವ ಬೀರುವ ಘಟಕಗಳ ಹಂಚಿಕೆಯು ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿಯಲ್ಲಿಲ್ಲ. ಆದುದರಿಂದ ದೇಶದ ವಿವಿಧ ಭಾಗಗಳಲ್ಲಿ ಕೃಷಿಗಾಗಿ ವಿಭಿನ್ನ ಬೆಳೆ ಪದ್ಧತಿಗಳನ್ನು ಆಯ್ಕೆ ಮಾಡಲಾಗುತ್ತದೆ.



*ಚಿತ್ರ 12.4 • ಗೋಧಿ ಕೃಷಿ*

*ನೀಡಿರುವವುಗಳಿಂದ ಸೂಕ್ತವಾದವುಗಳನ್ನು ಆರಿಸಿ ಡಯಗ್ರಂ ಪೂರ್ತಿಗೊಳಿಸಿರಿ.*

***ವೈಜ್ಞಾನಿಕವಾದ ನೀರಾವರಿ, ತೆರಿಗೆ, ಪ್ರಾಕೃತಿಕ ಘಟಕಗಳು, ಆರ್ಥಿಕ ಘಟಕಗಳು, ಮೂಲಭೂತ ಸೌಲಭ್ಯಗಳು, ವಿದ್ಯಾಭ್ಯಾಸ***

| | | | | | |
|---|---|---|---|---|---|
| ಸಾಮಾಜಿಕ ಘಟಕಗಳು | .............. | ತಾಂತ್ರಿಕ ಘಟಕಗಳು | .............. | ಸರಕಾರದ ನೀತಿಗಳು | .............. |
| ↓ | ↓ | ↓ | ↓ | ↓ | ↓ |
| .............. | ಹವಾಮಾನ | .............. | ಕೃಷಿಕರ ಆದಾಯ | .............. | ಸಾರಿಗೆ |

## ಬೆಳೆ ಪದ್ಧತಿಗಳು (Cropping Systems)

ಒಂದು ನಿಶ್ಚಿತ ಕಾಲಾವಧಿಯಲ್ಲಿ ಒಂದು ಕೃಷಿ ಸ್ಥಳದಲ್ಲಿ ಬೆಳೆಗಳನ್ನು ಕೃಷಿ ಮಾಡುವ ಕ್ರಮವನ್ನು ಬೆಳೆ ಪದ್ಧತಿ ಎಂದು ಕರೆಯುತ್ತಾರೆ. ಬೆಳೆ ಪದ್ಧತಿಯನ್ನು ಕೆಳಗೆ ಕೊಡಲಾದ ರೀತಿಯಲ್ಲಿ ವರ್ಗೀಕರಿಸಬಹುದು.

**ಬೆಳೆ ಪದ್ಧತಿಗಳು**

- **ಏಕಬೆಳೆ ಕೃಷಿ**
- **ಬಹುಬೆಳೆ ಕೃಷಿ**
- **ಕೂಳೆ ಕೃಷಿ**



*ಚಿತ್ರ 12.5 • ರಬ್ಬರ್ ಕೃಷಿ*

## ಏಕಬೆಳೆ ಕೃಷಿ (Monocropping)

ಒಂದು ಕೃಷಿ ಸ್ಥಳದಲ್ಲಿ ಒಂದು ಸಮಯದಲ್ಲಿ ಒಂದೇ ಬೆಳೆ ಕೃಷಿ ಮಾಡುವ ರೀತಿಯು ಏಕಬೆಳೆ ಕೃಷಿಯಾಗಿದೆ. ಇದು ಮುಖ್ಯವಾಗಿ ರಫ್ತನ್ನು ಗುರಿಯಾಗಿಟ್ಟುಕೊಂಡಿರುವ ಬೆಳೆ ಪದ್ಧತಿಯಾಗಿದೆ. ಒಂದೇ ಬೆಳೆ ಮಾತ್ರವಾಗಿರುವುದರಿಂದ ನಾಟಿ, ಪರಿಪಾಲನೆ, ಕೊಯ್ಲು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಿದೆ. ಕೃಷಿಯ ಮೂಲಕ ಲಾಭವನ್ನು ಹೆಚ್ಚಿಸಲು ಸಾಧ್ಯವಿದೆ ಎಂಬುದು ಇದರ ಪ್ರಮುಖ ಹಿರಿಮೆಯಾಗಿದೆ. ಏಕಬೆಳೆ ಪದ್ಧತಿಯು ಕೀಟಬಾಧೆಯ ಸಾಧ್ಯತೆಯನ್ನು ಹೆಚ್ಚಿಸುವುದಕ್ಕೆ ಕಾರಣವಾಗುತ್ತದೆ. ಉದಾಹರಣೆ: ರಬ್ಬರ್, ಚಹಾ, ಮರಗೆಣಸು.

*ಏಕಬೆಳೆ ಕೃಷಿಗೆ ಹೆಚ್ಚಿನ ಉದಾಹರಣೆಗಳನ್ನು ನಿಮ್ಮ ಪ್ರದೇಶಗಳಿಂದ ಕಂಡುಕೊಂಡು ಪಟ್ಟಿ ಮಾಡಿರಿ.*

## ಬಹುಬೆಳೆ ಕೃಷಿ (Multiple Cropping or Poly Cropping)

ಮಣ್ಣಿನ ನೈಸರ್ಗಿಕ ಫಲವತ್ತತೆಗೆ ಧಕ್ಕೆಯಾಗದಂತೆ ಒಂದು ಕೃಷಿ ಸ್ಥಳದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಕೃಷಿ ಮಾಡುವ ಬೆಳೆ ಪದ್ಧತಿಯು ಬಹುಬೆಳೆ ಕೃಷಿಯಾಗಿದೆ. ಕೃಷಿ ಸ್ಥಳದಿಂದಿರುವ ಒಟ್ಟು ಉತ್ಪಾದನೆ ಹಾಗೂ ಆ ಮೂಲಕ ಆದಾಯವನ್ನು ಹೆಚ್ಚಿಸುತ್ತದೆ ಎಂಬುದು ಇದರ ಹಿರಿಮೆಯಾಗಿದೆ.




### ಮಿಶ್ರ ಬೆಳೆ (Mixed Cropping)

ಇದು ಕೃಷಿ ಭೂಮಿಯಲ್ಲಿ ನಾಟಿಯ ಅಂತರವನ್ನು ಕಾಯ್ದುಕೊಳ್ಳದೆ ಏಕಕಾಲದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಕೃಷಿ ಮಾಡುವ ವಿಧಾನವಾಗಿದೆ. ಒಣ ಪ್ರದೇಶಗಳಲ್ಲಿ ಈ ಕೃಷಿ ವಿಧಾನ ಹೆಚ್ಚಾಗಿ ಕಂಡುಬರುತ್ತದೆ. ಪ್ರತಿಕೂಲ ಹವಾಮಾನದಿಂದಾಗಿ ಒಂದು ಬೆಳೆಯ ಇಳುವರಿ ಕಳಪೆಯಾಗಿದ್ದರೂ ಇತರ ಬೆಳೆಗಳಿಂದ ಇಳುವರಿ ಲಭಿಸುತ್ತದೆ ಎಂಬುದು ಇದರ ಹಿರಿಮೆಯಾಗಿದೆ.

ಉದಾಹರಣೆ: ಜೋಳ- ನೆಲಕಡಲೆ, ತೆಂಗು-ತೊಗರಿ



ಚಿತ್ರ 12.6 • ಮಿಶ್ರ ಬೆಳೆ - ಜೋಳ ನೆಲಕಡಲೆ

### ಅಂತರ ಬೆಳೆ (Inter Cropping)

ಅಂತರ ಬೆಳೆಯೆಂದರೆ ನಿಯಮಿತ ಸಾಲುಗಳಲ್ಲಿ ನೆಟ್ಟ ಮುಖ್ಯ ಬೆಳೆಯ ಎರಡು ಸಾಲುಗಳ ನಡುವಿನಲ್ಲಿರುವ ಜಾಗದಲ್ಲಿ ಮತ್ತೊಂದು ಬೆಳೆಯನ್ನು ಕೃಷಿ ಮಾಡುವ ಪದ್ಧತಿಯಾಗಿದೆ. ಸಂಪನ್ಮೂಲಗಳ ಸಮರ್ಥ ಬಳಕೆಯ ಮೂಲಕ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ. ಇದು ಕಳೆ ಮತ್ತು ಕೀಟಗಳನ್ನು ನಿಯಂತ್ರಿಸಲು ಸೂಕ್ತವಾದ ವಿಧಾನವಾಗಿದೆ.

ಉದಾಹರಣೆ: ಆರಂಭಿಕ ಹಂತದಲ್ಲಿ ನಿಧಾನವಾಗಿ ಬೆಳೆಯುವ ಹತ್ತಿಯ ಅಂತರ ಬೆಳೆಯಾಗಿ ನೆಲಗಡಲೆಯನ್ನು ಕೃಷಿ ಮಾಡುವುದು, ತೆಂಗಿನ ಅಂತರ ಬೆಳೆಯಾಗಿ ಬಾಳೆ ಕೃಷಿ ಮಾಡುವುದು.



ಚಿತ್ರ 12.7 • ಅಂತರ ಬೆಳೆ - ತೆಂಗು - ಬಾಳೆ

### ಅನುಕ್ರಮ ಕೃಷಿ (Sequence Cropping)

ಕೊಯ್ಲಿನ ನಂತರ ಕೃಷಿ ಸ್ಥಳದಲ್ಲಿ ಉಳಿದಿರುವ ತೇವಾಂಶ, ಪೋಷಕಾಂಶ ಇತ್ಯಾದಿಗಳನ್ನು ಬಳಸಿಕೊಂಡು ಹೆಚ್ಚಿನ ಪೂರ್ವಸಿದ್ಧತೆ ಇಲ್ಲದೆ ಅದೇ ಕೃಷಿ ಸ್ಥಳದಲ್ಲಿ ಮತ್ತೊಂದು ಅಲ್ಪಾವಧಿಯ ಕೃಷಿ ಮಾಡುವುದನ್ನು ಅನುಕ್ರಮ ಕೃಷಿ ಎಂದು ಕರೆಯುತ್ತಾರೆ. ಕೃಷಿ ಸ್ಥಳಗಳು ಪಾಳು ಬೀಳುವುದಿಲ್ಲವೆಂಬುದು ಇದರ ಪ್ರಯೋಜನವಾಗಿದೆ.

ಉದಾಹರಣೆ: ಭತ್ತದ ಗದ್ದೆಗಳಲ್ಲಿ, ಮುಖ್ಯ ಬೆಳೆಯಾದ ಭತ್ತದ ನಂತರ ಅಲಸಂಡೆ ಅಥವಾ ಎಳ್ಳು ಕೃಷಿ ಮಾಡುವುದು.



ಚಿತ್ರ 12.8 • ಭತ್ತ



ಚಿತ್ರ 12.9 • ಎಳ್ಳು

### ಸರಣಿ ಕೃಷಿ (Relay Cropping)

ಸರಣಿ ಕೃಷಿಯು ಒಂದು ಕೃಷಿ ಸ್ಥಳದಲ್ಲಿ ಮೊದಲ ಕೃಷಿ ಕೊಯ್ಲು ಮಾಡುವ ಮೊದಲು ಎರಡನೇ ಬೆಳೆ ಕೃಷಿ ಮಾಡಲು ಪ್ರಾರಂಭಿಸುವ ವಿಧಾನವಾಗಿದೆ.

ಉದಾಹರಣೆ: ಬಾಳೆ ಕೊಯ್ಲಿನ ಮೊದಲು ತರಕಾರಿ ಕೃಷಿ ಮಾಡುವುದು.

### ಪರಿಕ್ರಮಣ ಬೆಳೆ/ ಪರ್ಯಾಯ ಬೆಳೆ (Crop Rotation)

ಒಂದೇ ಕೃಷಿ ಭೂಮಿಯಲ್ಲಿ ಪ್ರತಿಯೊಂದು ಬೆಳೆಯ ನಂತರ ನಿರಂತರವಾಗಿ ವಿಭಿನ್ನ ಸಸ್ಯ ಕುಟುಂಬಕ್ಕೆ ಸೇರಿರುವ ಬೆಳೆಗಳನ್ನು ಕೃಷಿ ಮಾಡುವುದನ್ನು ಪರಿಕ್ರಮಣ ಬೆಳೆ ಎಂದು ಕರೆಯುತ್ತಾರೆ. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ ಎಂಬುದು ಪರ್ಯಾಯ ಬೆಳೆಯ ಪ್ರಧಾನ ಹಿರಿಮೆಯಾಗಿದೆ. ಇದು ಮಣ್ಣಿನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಕಳೆಗಳನ್ನು ಮತ್ತು ಕೀಟಗಳನ್ನು ನಿಯಂತ್ರಿಸಲೂ ಯೋಗ್ಯವಾದ ವಿಧಾನವಾಗಿದೆ.



*ಚಿತ್ರ 12.10 • ಅಲಸಂಡೆ ಕೃಷಿ*

ಉದಾಹರಣೆ: ಭತ್ತದ ನಂತರ ಅಲಸಂಡೆ ಕೃಷಿ ಮಾಡುವುದು.

### ಬಹುಹಂತದ ಕೃಷಿ (Muti-storied Cropping/Multi-tier Cropping)

ವಿಭಿನ್ನ ಎತ್ತರದಲ್ಲಿ ಬೆಳೆಯುವ, ವಿಭಿನ್ನ ಆಳದಲ್ಲಿ ಬೇರೂರುವ ಹಾಗೂ ಏಕಕಾಲದಲ್ಲಿ ವಿಭಿನ್ನ ಪ್ರಮಾಣದ ಸೂರ್ಯಪ್ರಕಾಶ ಅಗತ್ಯವಾಗಿರುವ ಬೆಳೆಗಳನ್ನು ಒಂದೇ ಅವಧಿಯಲ್ಲಿ ಒಂದೇ ಕೃಷಿಸ್ಥಳದಲ್ಲಿ ಕೃಷಿ ಮಾಡುವುದನ್ನು ಬಹುಹಂತದ ಕೃಷಿ ಎಂದು ಕರೆಯುತ್ತಾರೆ. ಮಣ್ಣು, ಜಲ, ಸೂರ್ಯಪ್ರಕಾಶ ಇತ್ಯಾದಿಗಳನ್ನು ಹೆಚ್ಚು ಫಲಪ್ರದವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಇದರ ಹಿರಿಮೆಯಾಗಿದೆ.



*ಚಿತ್ರ 12.11 • ಬಹುಹಂತದ ಕೃಷಿ - ತೆಂಗು - ಕರಿಮೆಣಸು - ಬಾಳೆ*

ಉದಾಹರಣೆ: ತೆಂಗು, ಕರಿಮೆಣಸು, ಶುಂಠಿ, ಅರಶಿನ ಇತ್ಯಾದಿ ಒಂದೇ ಸಮಯದಲ್ಲಿ ಒಂದೇ ಕೃಷಿಸ್ಥಳದಲ್ಲಿ ಕೃಷಿ ಮಾಡುವುದು.



*ಚಿತ್ರ 12.12 • ತೆಂಗು - ಅರಶಿನ*

### ಕೂಳೆ ಕೃಷಿ (Ratoon Cropping)

ಕೊಯ್ಲಿನ ಸಮಯದಲ್ಲಿ ಬೆಳೆಯ ಬೇರುಗಳು ಅಥವಾ ಕೆಳಗಿನ ಭಾಗವನ್ನು ಕತ್ತರಿಸದೆ ಬಿಡಲಾಗುತ್ತದೆ. ಕೊಯ್ಲು ಮಾಡಿದ ನಂತರ ಕೃಷಿ ಮಾಡಿರುವ ಬೆಳೆಯು ಪುನಃ ಬೆಳೆದು ಇಳುವರಿ ನೀಡುತ್ತದೆ. ಒಮ್ಮೆ ಮಾಡಿದ ಕೃಷಿಯಿಂದ ಪುನ: ಇಳುವರಿ ಲಭಿಸುತ್ತದೆ ಎಂಬುದು ಇದರ ಹಿರಿಮೆಯಾಗಿದೆ. ಇಳುವರಿ ಕಡಿಮೆಯಾಗುವ, ರೋಗ ಮತ್ತು ಕೀಟಗಳ ಬಾಧೆ ಹೆಚ್ಚಾಗುವ ಸಾಧ್ಯತೆಯು ಈ ವ್ಯವಸ್ಥೆಯ ಕೊರತೆಯಾಗಿದೆ. ಉದಾ: ಹರಿವೆ, ಕಬ್ಬು.



*ಚಿತ್ರ 12.13 • ಕಬ್ಬಿನ ಕೃಷಿ*

*ವಿವಿಧ ಬೆಳೆ ಪದ್ಧತಿಗಳನ್ನು ಹಾಗೂ ಅವುಗಳ ವಿಶೇಷತೆಗಳನ್ನು ನಾವು ಪರಿಚಯಿಸಿಕೊಂಡೆವು. ಇದರ ಆಧಾರದಲ್ಲಿ ನಿಮ್ಮ ಪ್ರದೇಶಕ್ಕೆ ಸೂಕ್ತವಾದ ಬೆಳೆ ಪದ್ಧತಿಯನ್ನು ಕಂಡುಕೊಳ್ಳಿರಿ. ಯಾಕೆ ಈ ಬೆಳೆ ಪದ್ಧತಿಯನ್ನು ಆಯ್ಕೆ ಮಾಡಿದಿರಿ ಎಂದು ವೈಯಕ್ತಿಕವಾಗಿ ಬರೆಯಿರಿ.*

## ಕೃಷಿ ವಲಯದ ನೂತನ ಒಲವುಗಳು

### ಡ್ರೋನ್ ಕೃಷಿಕ ತಲುಪಿದ: ಇನ್ನು ಹಾರುತ್ತಾ ಬಿತ್ತನೆ ಮಾಡಬಹುದು



ಚಿತ್ರ 12.14 • ಡ್ರೋನ್

ಪಾಲ್ಘಾಟ್: ಇನ್ನು ಹಾರುತ್ತಾ ಬಿತ್ತನೆ ಮಾಡಬಹುದು. ರಾಜ್ಯದಲ್ಲಿ ಡ್ರೋನ್ ತಂತ್ರಜ್ಞಾನದ ಮೂಲಕ ಬೀಜ ಬಿತ್ತನೆಯು ಯಶಸ್ವಿಯಾಗಿ ನಡೆಯಿತು. ಸಾಮಾನ್ಯವಾಗಿ ಬೀಜ ಬಿತ್ತಲು ತಗಲುವ ಸಮಯಕ್ಕಿಂತ ಕಡಿಮೆ ಸಮಯ ಸಾಕಾಗುತ್ತದೆ ಎಂಬುದು ಇದರ ಮುಖ್ಯ ಸಾಧನೆಯಾಗಿದೆ. ಕೀಟನಾಶಕ ಬಳಕೆ ಹಾಗೂ ಗೊಬ್ಬರ ಬಳಕೆಗಳನ್ನು ಡ್ರೋನ್ ಉಪಯೋಗಿಸಿ ಪರಿಣಾಮಕಾರಿಯಾಗಿ ಮಾಡಬಹುದು.

ಮೇಲೆ ನೀಡಲಾದ ವಾರ್ತೆಯನ್ನು ನೀವು ಓದಿದಿರಲ್ಲವೆ? ಹೆಚ್ಚುತ್ತಿರುವ ವಿಶ್ವಜನಸಂಖ್ಯೆ, ಹವಾಮಾನ ಬದಲಾವಣೆ ಮತ್ತು ತಾಂತ್ರಿಕತೆಯ ಬೆಳವಣಿಗೆ ಎಂಬಿವುಗಳಿಗೆ ಅನುಗುಣವಾಗಿ ಕೃಷಿ ಚಟುವಟಿಕೆಗಳು ನಿರಂತರವಾಗಿ ಬದಲಾಗುತ್ತಿವೆ.ಕಳೆದ ಕೆಲವು ದಶಕಗಳಿಂದ ಭಾರತದ ಕೃಷಿ ವಲಯವು ಆಮೂಲಾಗ್ರವಾದ ಬದಲಾವಣೆಗೆ ಒಳಗಾಗಿದೆ. ಪರಂಪರಾಗತವಾದ ಕೃಷಿ ವಿಧಾನದಿಂದ ನೂತನ ತಾಂತ್ರಿಕತೆಯನ್ನು ಬಳಸಿಕೊಂಡಿರುವ ಕೃಷಿ ವಿಧಾನದ ಕಡೆಗಿನ ಬದಲಾವಣೆಯು ಗಮನಾರ್ಹವಾಗಿದೆ. ನೂತನ ತಂತ್ರಜ್ಞಾನವು ಕೃಷಿಯ ಸವಾಲುಗಳನ್ನು ಎದುರಿಸಿಕೊಂಡು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿರುವ ನವೀನ ವಿಧಾನಗಳನ್ನು ಅವಲಂಬಿಸಿಕೊಂಡಿದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಕೃಷಿಕರಿಗೆ ಸಹಾಯ ಮಾಡುವುದು ಕೃಷಿವಲಯದಲ್ಲಿ ತಂತ್ರಜ್ಞಾನವನ್ನು ಬಳಸುವುದರ ಪ್ರಮುಖ ಉದ್ದೇಶವಾಗಿದೆ.

*ನಿಮ್ಮ ಪ್ರದೇಶದ ಕೃಷಿ ವಲಯದಲ್ಲಿ ಉಂಟಾದ ಬದಲಾವಣೆಗಳನ್ನು ಪಟ್ಟಿ ಮಾಡಿರಿ.*

## ಮಳೆ ಮೇಲಾವರಣ ಕೃಷಿ (Rain Shelter Farming)

ಮಳೆ ಮೇಲಾವರಣ ಎಂದರೆ ಪಾಲಿಥೀನ್ ಹಾಳೆಗಳಿಂದ ಆವೃತವಾದ ಮೇಲ್ಹಾವಣಿ (ಮೇಲಾವರಣ)ಯಾಗಿದೆ. ಸೂಕ್ತವಾದ ಪಾಲಿಥೀನ್ ಹಾಳೆಗಳನ್ನು ಮೇಲ್ಹಾವಣಿಯಾಗಿ ಉಪಯೋಗಿಸುವುದರ ಮೂಲಕ ಕೃಷಿಗೆ ಅಗತ್ಯವಾದ ಸೂರ್ಯಪ್ರಕಾಶವು ಲಭಿಸುವುದರೊಂದಿಗೆ ಅತಿಯಾದ ಮಳೆಯಿಂದ ಬೆಳೆಗಳಿಗೆ ಸಂರಕ್ಷಣೆಯನ್ನೂ ಖಚಿತಪಡಿಸುತ್ತದೆ. ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿಯೂ ವರ್ಷವಿಡೀ ಹೆಚ್ಚಿನ ಉತ್ಪಾದನೆಯನ್ನು ಗಳಿಸಲು ಮಳೆ ಮೇಲಾವರಣ ಕೃಷಿ ಸೂಕ್ತವಾಗಿದೆ. ಪ್ರತಿಯೊಂದು ಮನೆಯಲ್ಲೂ ಮಳೆ ಮೇಲಾವರಣವಿದ್ದರೆ, ಮನೆಗೆ ಅಗತ್ಯವಿರುವ ತರಕಾರಿಗಳನ್ನು ಯಾವುದೇ ಹವಾಮಾನದಲ್ಲಿಯೂ ಕೃಷಿ ಮಾಡಬಹುದು.



ಚಿತ್ರ 12.15 • ಮಳೆ ಮೇಲಾವರಣ

## ಪಾಲಿಹೌಸ್ ಕೃಷಿ (Polyhouse Farming)



ಚಿತ್ರ 12.16 • ಪೋಲಿ ಹೌಸ್

ಪಾಲಿಹೌಸ್ ಫಾರ್ಮಿಂಗ್ ಅಥವಾ ಗ್ರೀನ್ ಹೌಸ್ ಫಾರ್ಮಿಂಗ್ ಎಂಬುದು ಉಷ್ಣತೆ, ಮಳೆ, ಶೈತ್ಯ ಮತ್ತು ಬಿಸಿಲು ಎಂಬಿವುಗಳಿಂದ ಗಿಡಗಳನ್ನು ಸಂರಕ್ಷಿಸಿ ಬೆಳವಣಿಗೆಗೆ ಯೋಗ್ಯವಾದ ವಾತಾವರಣವನ್ನು ಕೃತಕವಾಗಿ ಸೃಷ್ಟಿಸುವ ವಿಧಾನವಾಗಿದೆ. ಇದು ಸಂಪೂರ್ಣವಾಗಿ ಪಾಲಿಥೀನ್ ಹಾಳೆಗಳಿಂದ ಮುಚ್ಚಿದ ಪಾಲಿಹೌಸ್‌ಗಳಲ್ಲಿ ಕೃಷಿ ಮಾಡುವ ವಿಧಾನವಾಗಿದೆ.

*ಪಾಲಿಹೌಸ್ ಫಾರ್ಮಿಂಗ್ ಮತ್ತು ಮಳೆ ಮೇಲಾವರಣ ಕೃಷಿಯನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.*

## ನಿಖರ ಕೃಷಿ (Precision Farming)

ನಿಖರ ಕೃಷಿಯು ಪ್ರತಿಯೊಂದು ಬೆಳೆಗೆ ಅಗತ್ಯವಾದ ನೀರು, ಪೋಷಕಾಂಶಗಳು ಮತ್ತು ಬೆಳೆ ಸಂರಕ್ಷಣ ವಸ್ತುಗಳನ್ನು ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ ಮಾತ್ರ ಒದಗಿಸಿ ಅಧಿಕ ಇಳುವರಿಯನ್ನು ಪಡೆಯಲಿರುವ ತಂತ್ರಜ್ಞಾನವಾಗಿದೆ. ಈ ವಿಧಾನವನ್ನು ಮಳೆ ಮೇಲಾವರಣಗಳಲ್ಲಿ ಮತ್ತು ತೆರೆದ ಪ್ರದೇಶಗಳಲ್ಲಿ ಕಾರ್ಯಗತಗೊಳಿಸಬಹುದು. ನೀರು ಮತ್ತು ಪೋಷಕಾಂಶಗಳ ನಿಖರವಾದ ಬಳಕೆ, ಯಂತ್ರೋಪಕರಣಗಳ ಕಾರ್ಯದಕ್ಷತೆಯಿಂದ ಕೂಡಿದ ಬಳಕೆ ಮತ್ತು ಕೃಷಿ ಭೂಮಿಯ ಉತ್ತಮ ಪರಿಪಾಲನೆ ಎಂಬಿವು ಈ ಕೃಷಿ ವಿಧಾನದ ಹಿರಿಮೆಗಳಾಗಿವೆ. ಸೂಕ್ಷ್ಮ ನೀರಾವರಿ (ಗಿಡಗಳ ಬೆಳವಣಿಗೆಗೆ ಅಗತ್ಯವಾದ ನೀರನ್ನು ಹನಿಗಳಾಗಿ ಅಥವಾ ಕಿರು ಗೊಬ್ಬರ ನಿರ್ವಹಣೆ ಧಾರೆಯಾಗಿ ಒದಗಿಸುವ ವಿಧಾನ), ಗೊಬ್ಬರ ನಿರ್ವಹಣೆ ಮತ್ತು ಸಂಯೋಜಿತ ಕೀಟರೋಗ ನಿಯಂತ್ರಣ ಎಂಬಿವು ನಿಖರ ಕೃಷಿಯ ಪ್ರಧಾನ ಘಟಕಗಳಾಗಿವೆ.

***ರಸಾವರಿ ಗೊಬ್ಬರ* Fertigation**

*ರಸಾವರಿ ಗೊಬ್ಬರವು ನೀರಿನಲ್ಲಿ ಕರಗುವ ಗೊಬ್ಬರವನ್ನು ನೀರಾವರಿಯ ಮೂಲಕ ನೀಡುವ ವಿಧಾನವಾಗಿದೆ.*

## ಡಿಜಿಟಲ್ ಕೃಷಿ (Digital Farming)



ಚಿತ್ರ 12.17 • ಅಗ್ರಿಬೋಟ್

ಇದು ವೈವಿಧ್ಯಮಯವಾದ ತಂತ್ರಜ್ಞಾನಗಳನ್ನು ಒಳಗೊಂಡಿರುವ ಕೃಷಿ ವಿಧಾನವಾಗಿದೆ. ಡಿಜಿಟಲ್ ಕೃಷಿಯಲ್ಲಿ ಬಿಗ್ ಡೇಟಾ ವಿಶ್ಲೇಷಣ ಉಪಕರಣಗಳು, ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಮೊಬೈಲ್ ಫೋನ್‌ಗಳಂತಹ ಡಿಜಿಟಲ್ ಆಶಯ ವಿನಿಮಯ ತಂತ್ರಜ್ಞಾನಗಳು, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು, ರೋಬೋಟಿಕ್ಸ್ ಮತ್ತು ಕೃಷಿ ಸಲಹಾ ಅಪ್ಲಿಕೇಶನ್‌ಗಳಂತಹ ತಂತ್ರಜ್ಞಾನಗಳನ್ನು ಬಳಸಲಾಗುತ್ತದೆ.

## ಲಂಬ ಕೃಷಿ (Vertical Farming)



ಚಿತ್ರ 12.18 • ಲಂಬ ಕೃಷಿ

ನಗರೀಕರಣ ಮತ್ತು ಕೃಷಿ ಭೂಮಿಯ ಕೊರತೆಯ ಪರಿಣಾಮವಾಗಿ ನಗರಗಳಲ್ಲಿ ಆಹಾರಧಾನ್ಯಗಳನ್ನು ಉತ್ಪಾದಿಸಲು ಲಂಬ ಕೃಷಿಯನ್ನು ಪ್ರಾಯೋಗಿಕವಾಗಿ ಬಳಸಲಾಗುತ್ತಿದೆ. ಈ ತಂತ್ರಜ್ಞಾನವು ಲಂಬವಾಗಿ ಜೋಡಿಸಲಾದ ಪದರಗಳಲ್ಲಿಯೋ ಕಟ್ಟಡಗಳಲ್ಲಿಯೋ ಬೆಳೆಗಳನ್ನು ಬೆಳೆಸುವ ವಿಧಾನವಾಗಿದೆ. ಹೈಡ್ರೋಪೋನಿಕ್, ಏರೋಪೋನಿಕ್ ಮತ್ತು ಅಕ್ವಾಪೋನಿಕ್ ವ್ಯವಸ್ಥೆಗಳನ್ನು ಉಪಯೋಗಿಸಿಕೊಂಡು ಕಡಿಮೆ ನೀರು ಬಳಸುವ ಮೂಲಕ ವರ್ಷದಾದ್ಯಂತ ಆಹಾರ ಧಾನ್ಯಗಳನ್ನು ಉತ್ಪಾದಿಸಬಹುದು.

## ಜೈವಿಕ ಕೃಷಿ (Organic Farming)

ಇದು ಜೈವಿಕ ಕೀಟನಾಶಕಗಳು, ಕಾಂಪೋಸ್ಟ್, ಹಸಿರೆಲೆ ಗೊಬ್ಬರ, ಅಂತರಬೆಳೆ ಕೃಷಿ, ಯಂತ್ರ ಮುಂತಾದವುಗಳನ್ನು ಅವಲಂಬಿಸಿಕೊಂಡಿರುವ ಹಾಗೂ ರಸಗೊಬ್ಬರವನ್ನು ಮತ್ತು ರಾಸಾಯನಿಕ ಕೀಟನಾಶಕಗಳನ್ನು ಸಂಪೂರ್ಣವಾಗಿ ಹೊರತುಪಡಿಸಿರುವ ಕೃಷಿ ವಿಧಾನವಾಗಿದೆ. ಈ ವಿಧಾನದಲ್ಲಿ ಸಸ್ಯಗಳ ಬೆಳವಣಿಗೆಯನ್ನು ನಿಯಂತ್ರಿಸುವ ವಸ್ತುಗಳನ್ನು ಮತ್ತು ಜೈವಿಕ ಬದಲಾವಣೆಗೊಳಪಡಿಸಿದ ಬೀಜಗಳನ್ನು ಬಳಸಲಾಗುವುದಿಲ್ಲ.

### *ಕ್ಲೈಮೇಟ್-ಸ್ಮಾರ್ಟ್ ಅಗ್ರಿಕಲ್ಚರ್ (ಸಿಎಸ್ಎ)*

*ಕ್ಲೈಮೇಟ್-ಸ್ಮಾರ್ಟ್ ಅಗ್ರಿಕಲ್ಚರ್ (CSA) ಎಂಬುದು ಹವಾಮಾನ ಬದಲಾವಣೆಯನ್ನು ನಿಭಾಯಿಸಲು ಕೃಷಿಕರನ್ನು ಸಹಾಯ ಮಾಡುವ ಒಂದು ಸಮೀಪನವಾಗಿದೆ. ಉತ್ಪಾದನಾ ಕ್ಷಮತೆಯನ್ನು ಹಾಗೂ ಆದಾಯವನ್ನು ಹೆಚ್ಚಿಸುವುದು, ಹವಾಮಾನ ಬದಲಾವಣೆಯೊಂದಿಗೆ ಹೊಂದಿಕೊಳ್ಳುವುದು ಮತ್ತು ಹಸಿರುಮನೆ ಅನಿಲದ ಹೊರಸೂಸುವಿಕೆಯನ್ನು (Greenhouse Gas Emission) ಕಡಿಮೆ ಮಾಡುವುದು ಇತ್ಯಾದಿಗಳು ಇದರ ಪ್ರಧಾನ ಗುರಿಗಳಾಗಿವೆ.*

*'ಕೃಷಿ ವಲಯದ ಆಧುನಿಕ ಒಲವುಗಳು' ಎಂಬ ವಿಷಯದಲ್ಲಿ ಸೆಮಿನಾರ್ ಆಯೋಜಿಸಿರಿ.*

## ಕೃಷಿ ವಲಯವು ಎದುರಿಸುತ್ತಿರುವ ಸವಾಲುಗಳು




ಮೇಲೆ ನೀಡಿರುವ ವಾರ್ತಾ ಶೀರ್ಷಿಕೆಗಳನ್ನು ಗಮನಿಸಿದಿರಲ್ಲವೇ. ಕೃಷಿ ವಲಯದಲ್ಲಿನ ಯಾವ ಯಾವ ಸಮಸ್ಯೆಗಳನ್ನು ಇದರಿಂದ ಕಂಡುಕೊಳ್ಳಲು ಸಾಧ್ಯ.

ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಬಳಸುವ ಸಣ್ಣ ಹಿಡುವಳಿದಾರರಲ್ಲಿ ಹೆಚ್ಚಿನವರೂ ರಾಸಾಯನಿಕ ಗೊಬ್ಬರಗಳ ಅಮಿತ ಬೆಲೆಯನ್ನು ತಾಳಿಕೊಳ್ಳಲು ಸಾಧ್ಯವಾಗದವರಾಗಿದ್ದಾರೆ. ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಂಡುಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ, ಬಂಡವಾಳದ ಕೊರತೆ ಮತ್ತು ಹೆಚ್ಚಿದ ಉತ್ಪಾದನ ವೆಚ್ಚ ಎಂಬಿವು ಕೃಷಿಕರನ್ನು ಪ್ರತಿಕೂಲವಾಗಿ ಬಾಧಿಸುತ್ತವೆ. ಮಣ್ಣಿನ ಫಲವತ್ತತೆ ಪ್ರತಿದಿನ ಕಡಿಮೆಯಾಗುವುದು ಹಾಗೂ ಬೀಜ ಮತ್ತು ನೀರಾವರಿಗೆ ತಗಲುವ ಅಮಿತ ವೆಚ್ಚವು ಕೃಷಿಕರನ್ನು ಬಿಕ್ಕಟ್ಟಿಗೆ ಸಿಲುಕಿಸುತ್ತದೆ. ಇಂತಹ ಸಮಸ್ಯೆಗಳ ಹೊರತಾಗಿ ಕೃಷಿ ವಲಯವು ಇನ್ನಿತರ ಯಾವ ಯಾವ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬುದನ್ನು ಪರಿಶೀಲಿಸೋಣ.

- ಬೆಳೆ ಪರಿವರ್ತನೆಯನ್ನು ನಿರ್ಲಕ್ಷಿಸಲಾಗುತ್ತಿದೆ
- ಬೆಳೆ ವೈಫಲ್ಯ/ಬೆಳೆ ನಾಶ
- ಕೃಷಿ ಸಾಲ
- ಮೂಲಭೂತ ಸೌಕರ್ಯಗಳ ಲಭ್ಯತೆಯ ಕೊರತೆ
- ಕೃಷಿ ಸಂಶೋಧನೆಯಲ್ಲಿ ಅಸಮರ್ಪಕತೆ
- ಸಾಲ ಲಭ್ಯತೆ ಮತ್ತು ಮರುಪಾವತಿ
- ಕೃಷಿ ಉತ್ಪನ್ನಗಳ ಬೆಲೆ ಕುಸಿತ
- ಯಾಂತ್ರೀಕರಣದ ಕೊರತೆ
- ಹವಾಮಾನ ಬದಲಾವಣೆ

> *'ಕೃಷಿ ವಲಯವು ಎದುರಿಸುತ್ತಿರುವ ಸವಾಲುಗಳು' ಎಂಬ ವಿಷಯದಲ್ಲಿ ಪ್ರಾಜೆಕ್ಟ್ ತಯಾರಿಸಲು ಅಗತ್ಯವಾದ ಮಾಹಿತಿಗಳನ್ನು ಕೃಷಿಕರಿಂದ ಸಂಗ್ರಹಿಸುವುದಕ್ಕಾಗಿ ಒಂದು ಪ್ರಶ್ನಾವಳಿಯನ್ನು ತಯಾರಿಸಿರಿ.*

ಕೃಷಿ ವಲಯದ ನೂತನ ಒಲವುಗಳು, ಕೃಷಿ ವಲಯವು ಎದುರಿಸುತ್ತಿರುವ ಸವಾಲುಗಳು ಇತ್ಯಾದಿಗಳನ್ನೆಲ್ಲ ಪರಿಚಯಿಸಿಕೊಂಡೆವಲ್ಲವೆ? ಈ ಸವಾಲುಗಳನ್ನು ಎದುರಿಸುವುದಕ್ಕಾಗಿ ಕೇಂದ್ರ, ರಾಜ್ಯ ಸರಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿವೆ. 'ನಾವೂ ಕೃಷಿಯ ಕಡೆಗೆ' ಎಂಬ ಯೋಜನೆಯ ಅಂಗವಾಗಿ ಮನೆಯಲ್ಲಿಯೂ ಶಾಲೆಯಲ್ಲಿಯೂ ಕೃಷಿ ಮಾಡಲು ಮತ್ತು ಕೃಷಿಯನ್ನು ಒಂದು ಸಂಸ್ಕೃತಿಯಾಗಿ ಬೆಳೆಸಲು ಕೇರಳ ಸರಕಾರ ಹೊರಡಿಸಿದ ಈ ಪ್ರತಿಜ್ಞೆಯನ್ನು ನಾವೆಲ್ಲರೂ ಸೇರಿ ಹೇಳೋಣ.




*ಕೃಷಿಯು ಒಂದು ಸಂಸ್ಕೃತಿಯಾಗಿದೆ. ಅದಕ್ಕಿಂತಲೂ ಮಿಗಿಲಾಗಿ ಕೃಷಿಯೇ ಜೀವನವಾಗಿದೆಯೆಂಬ ಅರಿವು ನಮಗಿದೆ. ಕೃಷಿಯನ್ನು ಮೊದಲು ಮನಸ್ಸಿಗೆ ಅನಂತರ ಮಣ್ಣಿಗೆ ತಂದು ಅದನ್ನೊಂದು ಕೇರಳ ಸಂಪ್ರದಾಯವನ್ನಾಗಿ ಪರಿವರ್ತಿಸುವುದಕ್ಕೆ ನಾವೂ ಕೃಷಿಯೆಂಬ ಉದ್ಯಮಕ್ಕೆ ಜೀವ ನೀಡಿ, ಉತ್ತಮ ಬೀಜಗಳು, ಫಲವತ್ತಾದ ಮಣ್ಣು, ಜೀವಜಲವನ್ನಿತ್ತು, ಇತರ ಆರೈಕೆಗಳನ್ನು ಮಾಡಿ ಉತ್ತಮ ಇಳುವರಿಯನ್ನು ಪಡೆಯಲು ಯಾವಾಗಲೂ ನಾವು ಜೊತೆಗಿದ್ದೇವೆಂದು ಘೋಷಿಸುತ್ತೇವೆ. 'ನಾವೂ ಕೃಷಿಯ ಕಡೆಗೆ' ಎಂಬ ಯೋಜನೆಯನ್ನು ಪ್ರತಿಯೊಂದು ಮನೆ ಹಾಗೂ ಪ್ರತಿಯೊಂದು ನಾಡಿನ ಯೋಜನೆಯನ್ನಾಗಿ ಪರಿವರ್ತಿಸಲು ನಾವು ಶಕ್ತಿ ಮೀರಿ ಪ್ರಯತ್ನಿಸುತ್ತೇವೆಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇವೆ. ಪ್ರತಿಜ್ಞೆ ಪ್ರತಿಜ್ಞೆ ಪ್ರತಿಜ್ಞೆ*

## ಕೃಷಿ ಆಧಾರಿತ ಕಿರು ಗುಡಿಕೈಗಾರಿಕೆ



*ಚಿತ್ರಗಳು 12.19 • ಕಿರು ಗುಡಿಕೈಗಾರಿಕೆ*

ಚಿತ್ರಗಳನ್ನು ನಿರೀಕ್ಷಿಸಿ ಕಿರುಕೈಗಾರಿಕೆಗಳು ಹಾಗೂ ಅವುಗಳ ಕಚ್ಚಾ ವಸ್ತುಗಳು ಯಾವುವು ಎಂದು ಕಂಡುಹಿಡಿದು ಬರೆಯಿರಿ.

ಈ ಕೈಗಾರಿಕ ಉತ್ಪನ್ನಗಳ ಕಚ್ಚಾವಸ್ತುಗಳು ಕೃಷಿ ಸಂಪನ್ಮೂಲಗಳೆಂದು ತಿಳಿದುಕೊಂಡಿರಲ್ಲವೆ? ಕೃಷಿ ಆಧಾರಿತ ಕಿರು ಗುಡಿಕೈಗಾರಿಕೆಗಳು ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಒಂದು ಮಿತಿಯವರೆಗೆ ಪರಿಹಾರವನ್ನೊದಗಿಸುತ್ತವೆ.

ಕೃಷಿ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಾದೇಶಿಕವಾಗಿ ಕಾರ್ಯವೆಸಗುವ ಕಿರು-ಗುಡಿ ಕೈಗಾರಿಕೆಗಳಿಗೆ ನಮ್ಮ ಪರಿಸರದಲ್ಲಿ ತುಂಬ ಪ್ರಾಧಾನ್ಯವಿದೆ. ಹತ್ತು ಕೋಟಿಗಿಂತ ಕಡಿಮೆ ಹೂಡಿಕೆ ಹಾಗೂ ವಾರ್ಷಿಕವಾಗಿ ಐವತ್ತು ಕೋಟಿಗಳಿಗಿಂತ ಕಡಿಮೆ ವಹಿವಾಟು ಹೊಂದಿರುವ ಕೈಗಾರಿಕೆಗಳೇ ಕಿರು ಕೈಗಾರಿಕೆಗಳಾಗಿವೆ.

ಗುಡಿಕೈಗಾರಿಕೆಗಳೆಂದರೆ ಒಬ್ಬ ವ್ಯಕ್ತಿ ಅಥವಾ ಕುಟುಂಬವು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು, ಸಾಂಪ್ರದಾಯಿಕ ತಂತ್ರಜ್ಞಾನವನ್ನು ಬಳಸಿಕೊಂಡು ಉತ್ಪನ್ನಗಳಾಗಿ ಪರಿವರ್ತಿಸುವುದಾಗಿದೆ. ಇದಕ್ಕೆ ಆರಂಭಿಕ ಹೂಡಿಕೆ ಕಡಿಮೆ. ಗುಡಿ ಕೈಗಾರಿಕೆಗಳು ಕುಟುಂಬದ ಸದಸ್ಯರ ಪರಿಶ್ರಮವನ್ನು ಮಾತ್ರ ಬಳಸಿಕೊಳ್ಳುತ್ತವೆ. ನೇಯ್ಗೆ, ಜಮಖಾನೆ ತಯಾರಿ, ಚರ್ಮದ ಉದ್ಯಮ, ಕರಕುಶಲ ವಸ್ತುಗಳ ನಿರ್ಮಾಣ ಮತ್ತು ಸಣ್ಣ ಪ್ರಮಾಣದ ಆಹಾರ ಸಂಸ್ಕರಣ ಘಟಕ ಎಂಬಿವು ಗುಡಿ ಕೈಗಾರಿಕೆಗಳಿಗೆ ಉದಾಹರಣೆಗಳಾಗಿವೆ. ಗುಡಿಕೈಗಾರಿಕೆಗಳು ಪ್ರಪಂಚದಾದ್ಯಂತವಿರುವ ಅನೇಕ ಗ್ರಾಮೀಣ ಆರ್ಥಿಕ ವ್ಯವಸ್ಥೆಗಳ ಬೆನ್ನೆಲುಬಾಗಿವೆ.

## ಬದಲಾಗುತ್ತಿರುವ ಕೃಷಿ ಆಧಾರಿತ ಕಿರು ಗುಡಿಕೈಗಾರಿಕೆಗಳು

ಇಂದು ಕೃಷಿ ಆಧಾರಿತ ಸ್ಟಾರ್ಟ್‌ಅಪ್‌ಗಳಿಗೆ ಪ್ರಚಾರ ಹೆಚ್ಚುತ್ತಿದೆ. ಸರಕಾರವು ಅಂತಹ ಸ್ಟಾರ್ಟ್‌ಅಪ್‌ಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದೆ. ಹುಡಿ ಮಾಡುವುದು, ರುಬ್ಬುವುದು, ಪ್ಯಾಕ್ ಮಾಡುವುದು ಮುಂತಾದ ಸರಳ ತಂತ್ರಜ್ಞಾನಗಳನ್ನು ಬಳಸಿಕೊಂಡು ಹಣ್ಣುಗಳು ಮತ್ತು ತರಕಾರಿಗಳು ಎಂಬಿವುಗಳನ್ನು ಹಲವು ವಿಧದ ಮೌಲ್ಯವರ್ಧಿತ ಉತ್ಪನ್ನಗಳಾಗಿ ಪರಿವರ್ತಿಸುವ ರೀತಿಯಲ್ಲಿರುವ ಕಿರು-ಗುಡಿಕೈಗಾರಿಕೆಗಳಿಗೆ ಇಂದು ಹೆಚ್ಚು ಪ್ರಾಧಾನ್ಯವಿದೆ. ಅಡಿಕೆಯ ಹಾಳೆ, ಆಹಾರ ಉತ್ಪನ್ನಗಳು ಮತ್ತು ಹಣ್ಣು ಹಂಪಲಿನ ಉತ್ಪನ್ನಗಳಿಗೆ ಸಂಬಂಧಿಸಿದ ಕೈಗಾರಿಕೆಗಳು ಮುಖ್ಯವಾಗಿ ಕೃಷಿ ಉತ್ಪನ್ನಗಳನ್ನು ಅವಲಂಬಿಸಿಕೊಂಡಿವೆ.

**ಆಗ್ರೋ ಪಾರ್ಕ್**

*ಆಗ್ರೋ ಪಾರ್ಕ್‌ಗಳು ಕೇರಳದ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೇಂದ್ರಗಳಾಗಿವೆ. ಇವು ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿಸುವ ಮೂಲಕ ಕೃಷಿಕರ ಆದಾಯವನ್ನು ಖಚಿತಪಡಿಸುತ್ತವೆ. ಆಗ್ರೋ ಪಾರ್ಕ್‌ಗಳು ಕೃಷಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ.*



*ಚಿತ್ರ 12.20 • ಅಡಿಕೆಯ ಹಾಳೆಯಿಂದ ತಯಾರಿಸಿದ ಉತ್ಪನ್ನಗಳು*

*ನಮ್ಮ ಪ್ರದೇಶದಲ್ಲಿರುವ ಕೃಷಿ ಸಂಪನ್ಮೂಲಗಳನ್ನು ಬಳಸಿಕೊಂಡು ಒಂದು ಸ್ಟಾರ್ಟ್‌ಅಪ್ ಆರಂಭಿಸಲಿರುವ ಆಶಯವನ್ನು ಕಂಡುಹಿಡಿದು ರೂಪರೇಖೆ ತಯಾರಿಸಿರಿ.*

## ಕೈಮಗ್ಗ ಉದ್ಯಮ

*"ನೂಲು ಮತ್ತು ನೇಯ್ಗೆಯನ್ನು ಯಾವುದೇ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಅತ್ಯಗತ್ಯ ಘಟಕವಾಗಿ ನಾನು ಪರಿಗಣಿಸುತ್ತೇನೆ."*

**ಮಹಾತ್ಮ ಗಾಂಧಿ**



*ಚಿತ್ರ 12.21 • ಕೈಮಗ್ಗ*

ಇದು ಕೈಮಗ್ಗದ ಮಹತ್ವವನ್ನು ಅರ್ಥಮಾಡಿಕೊಂಡು ಗಾಂಧೀಜಿ ಹೇಳಿದ ಮಾತುಗಳಾಗಿವೆ. ಕೈಮಗ್ಗ ವಲಯವು ಭಾರತದ ಅಸಂಘಟಿತ ಆರ್ಥಿಕ ಚಟುವಟಿಕೆಗಳಲ್ಲೊಂದಾಗಿದೆ. ಈ ವಲಯವು ಗ್ರಾಮೀಣ - ಅರೆ ಗ್ರಾಮೀಣ

ಜನರ ವೃತ್ತಿಯ ಅವಿಭಾಜ್ಯ ಘಟಕವೂ ಸ್ತ್ರೀಯರ ಆರ್ಥಿಕ ಸಬಲೀಕರಣದ ಮೂಲವೂ ಆಗಿದೆ. ದೇಶದ ಬಟ್ಟೆ ಉತ್ಪಾದನೆಯಲ್ಲಿ ಕೈಮಗ್ಗ ವಲಯದ ಕೊಡುಗೆ ಕಡಿಮೆಯೇನಲ್ಲ. ಕೈಮಗ್ಗವು ಕೇರಳದ ಒಂದು ಪ್ರಮುಖ ಪಾರಂಪರಿಕ ಕಿರು-ಗುಡಿ ಕೈಗಾರಿಕೆಯಾಗಿದೆ. ಹುರಿ ಹಗ್ಗ ವಲಯದ ನಂತರ ಕೈಮಗ್ಗವು ಅತ್ಯಧಿಕ ಉದ್ಯೋಗ ನೀಡುವ ವಲಯವಾಗಿದೆ.

### *ಕತಿರ್ ಆ್ಯಪ್*

*ಕೃಷಿ ಮತ್ತು ಕೃಷಿ ವಿಧಾನಗಳನ್ನು ಚುರುಕಾಗಿಸಲು ಮಾಹಿತಿ ತಂತ್ರಜ್ಞಾನದ ಸಾಧ್ಯತೆಯನ್ನು ಬಳಸಿಕೊಳ್ಳಬೇಕೆಂಬ ಉದ್ದೇಶದಿಂದ ಕತಿರ್ ಆ್ಯಪ್ ತಯಾರಿಸಲಾಗಿದೆ. (Kerala Agriculture Technology Hub and Information Repository - KATHIR). ಹವಾಮಾನ ಮಾಹಿತಿ, ಬೆಳೆ ಸಲಹೆಗಳು, ಮಾರುಕಟ್ಟೆ ಗುಪ್ತಚರ ಮಾಹಿತಿ, ಕೃಷಿ ಯೋಜನಾ ಮಾಹಿತಿ, ಕೃಷಿ ಭೂಮಿಗೆ ಸಂಬಂಧಿಸಿದ ಮಾಹಿತಿ ಇತ್ಯಾದಿಗಳು ಈ ಆ್ಯಪ್ ಮೂಲಕ ಲಭಿಸುತ್ತದೆ. ಈ ಆ್ಯಪ್ ಮೂಲಕ ನೋಂದಾಯಿಸಿಕೊಳ್ಳುವ ಕೃಷಿಕರಿಗೆ ಗುರುತಿನ ಚೀಟಿಯು ಲಭಿಸುತ್ತದೆ.*

## ಕೃಷಿ ಮಾರುಕಟ್ಟೆ



*ಚಿತ್ರ 12.22 • ಸ್ಥಳೀಯ ಮಾರುಕಟ್ಟೆ*



*ಚಿತ್ರ 12.23 • ತರಕಾರಿ ಅಂಗಡಿ*



*ಚಿತ್ರ 12.24 • ಹೈಪರ್ ಮಾರ್ಕೆಟ್*

VFPCK Online Shopping

*ಚಿತ್ರ 12.25 • ಆನ್ಲೈನ್ ಮಾರ್ಕೆಟ್*

ಮೇಲೆ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿರಿ. ಇವು ದೇಶದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಅಸ್ತಿತ್ವದಲ್ಲಿರುವ ಕೆಲವು ವ್ಯವಸ್ಥೆಗಳಾಗಿವೆ. ಇವುಗಳಲ್ಲಿ ನಿಮ್ಮ ಮನೆಗಿರುವ ಕೃಷಿ ಉತ್ಪನ್ನಗಳನ್ನು ಎಲ್ಲಿಂದ ಖರೀದಿಸುತ್ತೀರಿ? ಕೃಷಿ ಮಾರುಕಟ್ಟೆಯು ಕೃಷಿ ಉತ್ಪನ್ನಗಳನ್ನು ಖರೀದಿಸಲು ಮತ್ತು ಮಾರಾಟ ಮಾಡಲಿರುವ ವ್ಯವಸ್ಥೆಯಾಗಿದೆ. ಕಾರ್ಯದಕ್ಷತೆಯಿಂದ ಕೂಡಿದ ಒಂದು ಕೃಷಿ ಮಾರುಕಟ್ಟೆಯು ಕೃಷಿ ಪ್ರಗತಿಗೆ ಅತ್ಯಗತ್ಯ. ಸಾಧ್ಯವಾದಷ್ಟು ಹೆಚ್ಚಿನ ಉತ್ತಮ ಆದಾಯ ಲಭಿಸಲು ಪ್ರಾಥಮಿಕ ಉತ್ಪಾದಕರಿಗೆ ಅನುವು ಮಾಡಿಕೊಡುವುದು, ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡಿಕೊಂಡು ನ್ಯಾಯಯುತವಾದ ಬೆಲೆಗಳನ್ನು ಒದಗಿಸುವುದು ಮುಂತಾದವು ಕೃಷಿ ಮಾರುಕಟ್ಟೆಯ ಪ್ರಧಾನ ಉದ್ದೇಶಗಳಾಗಿವೆ.

## ಕೃಷಿಕರು ಮತ್ತು ಮಾರುಕಟ್ಟೆ

ಕೃಷಿ ಉತ್ಪನ್ನಗಳು ಎಲ್ಲೆಲ್ಲಿಗೆ ಮಾರಾಟಕ್ಕಾಗಿ ಹೋಗುತ್ತವೆ ಎಂದು ನಿಮಗೆ ತಿಳಿದಿದೆಯೆ? ನಾವು ಪರಿಶೀಲಿಸೋಣ.




ಉತ್ಪನ್ನಗಳಿಗೆ ನ್ಯಾಯಯುತವಾದ ಬೆಲೆ ಪಡೆಯುವುದು ಕೃಷಿಕನ ಹಕ್ಕಾಗಿದೆ. ಆದುದರಿಂದಲೇ ಕೃಷಿಕರು ಗರಿಷ್ಠ ಬೆಲೆ ಲಭಿಸುವ ಮಾರುಕಟ್ಟೆಗಳನ್ನು ಹುಡುಕಲು ಪ್ರಯತ್ನಿಸುತ್ತಿರುತ್ತಾರೆ. ಆನ್‌ಲೈನ್ ಮಾರುಕಟ್ಟೆಗಳನ್ನು ಬಳಸಿಕೊಳ್ಳುವ ಮೂಲಕ ಕೃಷಿಕರಿಗೆ ಮತ್ತು ಗ್ರಾಹಕರಿಗೆ ತಮ್ಮ ನಡುವೆ ಮಧ್ಯವರ್ತಿಗಳಿಲ್ಲದೆ ವ್ಯಾಪಾರವನ್ನು ಮಾಡಲು ಸಾಧ್ಯವಾಗುತ್ತದೆ.

*ಕೃಷಿ ವಲಯದಲ್ಲಿ ಕೃಷಿ ಮಾರುಕಟ್ಟೆಗಳ ಪ್ರಾಧಾನ್ಯದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ವಿವಿಧ ರೀತಿಯ ಕೃಷಿ ಮಾರುಕಟ್ಟೆಗಳು

ಕೃಷಿ ಕ್ಷೇತ್ರದ ಪ್ರಗತಿಗೆ ರಚನಾತ್ಮಕ ಮತ್ತು ಕ್ರಿಯಾತ್ಮಕವಾದ ಮಾರುಕಟ್ಟೆಗಳು ಅತ್ಯಗತ್ಯವಾಗಿವೆ. ಕೃಷಿ ಮಾರುಕಟ್ಟೆಗಳನ್ನು ಸಂಘಟಿತ ಕೃಷಿ ಮಾರುಕಟ್ಟೆ (Organised Agriculture Market) ಮತ್ತು ಅಸಂಘಟಿತ ಕೃಷಿ ಮಾರುಕಟ್ಟೆ (Un-organised Agriculture Market) ಎಂದು ಎರಡಾಗಿ ವರ್ಗೀಕರಿಸಲಾಗಿದೆ. ಸಂಘಟಿತ ಕೃಷಿ ಮಾರುಕಟ್ಟೆಗಳು ಸರಕಾರದ ನೀತಿ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುತ್ತವೆ. ಇವುಗಳು ಮುಖ್ಯವಾಗಿ ಎ.ಪಿ.ಎಂ.ಸಿ. ನಿಯಮಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಅಸಂಘಟಿತ ಕೃಷಿ ಮಾರುಕಟ್ಟೆಗಳು ಯಾವುದೇ ನಿರ್ದಿಷ್ಟ ರಚನೆಯಿಲ್ಲದೆ ಕಾರ್ಯನಿರ್ವಹಿಸುತ್ತವೆ.

### *ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಿ (APMC)*

*ಎ.ಪಿ.ಎಂ.ಸಿ ಎಂಬುದು ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳ ಶೋಷಣೆಯಿಂದ ಕೃಷಿಕರನ್ನು ಸಂರಕ್ಷಿಸುವುದಕ್ಕಾಗಿ ದೇಶದ ರಾಜ್ಯ ಸರಕಾರಗಳು ಸ್ಥಾಪಿಸಿದ ಮಾರ್ಕೆಟಿಂಗ್ ಬೋರ್ಡ್ ಆಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಕಾಯಿದೆ (APMR Act) ಯ ಮೂಲಕ ರಾಜ್ಯಗಳು ಎ.ಪಿ.ಎಂ.ಸಿ. ಗಳನ್ನು ನಿಯಂತ್ರಿಸುತ್ತವೆ.*

## ಗ್ರಾಮೀಣ ಪ್ರಾಥಮಿಕ ಮಾರುಕಟ್ಟೆಗಳು (Rural Primary Markets)

ಗ್ರಾಮೀಣ ಪ್ರಾಥಮಿಕ ಮಾರುಕಟ್ಟೆಗಳೆಂದರೆ ಕೃಷಿಕರು ಉತ್ಪಾದಿಸುವ ಉತ್ಪನ್ನಗಳು ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಹಕರಿಗೆ ತಲುಪಿಸುವ ಮಾರುಕಟ್ಟೆಗಳಾಗಿವೆ. ಸಣ್ಣ ಗ್ರಾಮಗಳಲ್ಲಿ ಕೇಂದ್ರೀಕೃತವಾಗಿರುವ, ಗ್ರಾಮದ ವ್ಯಕ್ತಿಗಳು ಮುಖ್ಯ ಮಾರಾಟಗಾರರು ಹಾಗೂ ಗ್ರಾಹಕರಾಗಿರುವ ವಿನಿಮಯ ವ್ಯವಸ್ಥೆಯೇ ಗ್ರಾಮೀಣ ಪ್ರಾಥಮಿಕ ಮಾರುಕಟ್ಟೆಗಳಾಗಿವೆ. ಈ ಮಾರುಕಟ್ಟೆಗಳು ವಾರದಲ್ಲಿ ಒಂದು ಅಥವಾ ಎರಡು ಬಾರಿ ತೆರೆದ ಪ್ರದೇಶಗಳಲ್ಲಿ ಸೇರುತ್ತವೆ. ಉದಾಹರಣೆ: ಗ್ರಾಮೀಣ ಸಂತೆ, ಹಾಟ್ಸ್.

### *ಗ್ರಾಮೀಣ ಹಾಟ್ಟುಗಳು*

*ಹಾಟ್ಟುಗಳು ಎಂದರೆ ಒಂದು ಗ್ರಾಮದ ಉತ್ಪಾದಕರು, ಮಧ್ಯವರ್ತಿಗಳು, ಗ್ರಾಹಕರು ಮುಂತಾದವರು ಕೃಷಿ ಉತ್ಪನ್ನಗಳನ್ನು ಖರೀದಿಸಲು ಹಾಗೂ ಮಾರಾಟ ಮಾಡಲು ಒಟ್ಟು ಸೇರುವ ಮಾರುಕಟ್ಟೆಗಳಾಗಿವೆ.*

### *ಮಂಡಿಗಳು*

*ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಇತರ ಪಟ್ಟಣಗಳಲ್ಲಿ ದೈನಂದಿನ ವಹಿವಾಟುಗಳಿಗಿರುವ ಶಾಶ್ವತವಾದ ಸಗಟು ವ್ಯಾಪಾರ ಮಾರುಕಟ್ಟೆಗಳಾಗಿವೆ.*

### *ಸಂತೆಗಳು/ಮೇಳಗಳು*

*ಮೇಳಗಳೆಂದರೆ ಧಾರ್ಮಿಕ ಹಬ್ಬಗಳು ಅಥವಾ ಸ್ಥಳೀಯ ಹಬ್ಬಗಳ ಸಮಯದಲ್ಲಿ ಮಾತ್ರ ತೀರ್ಥಯಾತ್ರಾ ಸ್ಥಳಗಳಲ್ಲಿ ಹಾಗೂ ಪ್ರಮುಖ ಕೇಂದ್ರಗಳಲ್ಲಿ ನಡೆಸುವ ಮಾರುಕಟ್ಟೆಗಳಾಗಿವೆ.*

### *'ಕೇರಳಗ್ರೋ'*

*ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಉತ್ತೇಜಿಸಲು ಮತ್ತು ಆ ಮೂಲಕ ಕೃಷಿಕರ ಆದಾಯವನ್ನು ಹೆಚ್ಚಿಸಲು ಹಾಗೂ ಗ್ರಾಹಕರಿಗೆ ಉತ್ಪನ್ನಗಳನ್ನು ನ್ಯಾಯೋಚಿತವಾದ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಲು 'ಕೇರಳಗ್ರೋ' ಎಂಬ ಏಕೀಕೃತ ಬ್ರಾಂಡ್ ನಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಕೃಷಿ ಇಲಾಖೆಯು ಪ್ರಾರಂಭಿಸಿತು.*

## ಸಗಟು ವ್ಯಾಪಾರ ಮಾರುಕಟ್ಟೆಗಳು ಅಥವಾ ದ್ವಿತೀಯ ಸಗಟು ಮಾರುಕಟ್ಟೆಗಳು

(Wholesale Markets or Secondary Wholesale Markets)

ಇವು ಕೃಷಿ ಪ್ರದೇಶಗಳೊಂದಿಗೆ ಸಂಬಂಧಿಸಿದ ನಗರಗಳಲ್ಲಿ ಕಾರ್ಯನಿರ್ವಹಿಸುವ ಮಾರುಕಟ್ಟೆಗಳಾಗಿವೆ. ಉತ್ಪಾದಕರಾದ ಕೃಷಿಕರೇ ಇಲ್ಲಿಗೆ ಕೃಷಿ ಉತ್ಪನ್ನಗಳನ್ನು ತಲುಪಿಸುತ್ತಾರೆ. ಇವು ಜಿಲ್ಲಾ ಕೇಂದ್ರಗಳ ಅಥವಾ ರೈಲ್ವೇ ನಿಲ್ದಾಣಗಳ ಹತ್ತಿರವಿರುವ ಮಾರಾಟ ಕೇಂದ್ರಗಳಾಗಿವೆ. ಗ್ರಾಮೀಣ ರೈತರು ಮತ್ತು ಸಗಟು ವ್ಯಾಪಾರಿಗಳ ನಡುವೆ ಇಲ್ಲಿ ವ್ಯಾಪಾರ ನಡೆಯುತ್ತದೆ. ಇತರ ಮಾರುಕಟ್ಟೆಗಳಿಂದಲೂ ಇಲ್ಲಿಗೆ ಸರಕುಗಳನ್ನು ತರಲಾಗುತ್ತದೆ. ಉದಾ: ಮಂಡಿಗಳು

ರಾಜ್ಯ ಸ್ವಯಂ ಆಡಳಿತ ಸಂಸ್ಥೆಗಳ ಮತ್ತು ಕೃಷಿ ಉತ್ಪಾದನ ಸಂಘಗಳ ಬೆಂಬಲದೊಂದಿಗೆ ರಾಜ್ಯದಲ್ಲಿ ಕೃಷಿ ಮಾರುಕಟ್ಟೆಗಳು ಕಾರ್ಯಾಚರಿಸುತ್ತವೆ. ನಗರ-ಗ್ರಾಮ ಪ್ರದೇಶಗಳಲ್ಲಿ ಸ್ಥಾಪಿಸಲಾದ ಮಾರುಕಟ್ಟೆ ಜಾಲಗಳ ಮೂಲಕ ಇದನ್ನು ಕಾರ್ಯಗತಗೊಳಿಸಲಾಗುತ್ತದೆ. ಕೇರಳದಲ್ಲಿ ಸಗಟು ವ್ಯಾಪಾರ ಮಾರುಕಟ್ಟೆಗಳ ಪೈಕಿ ಮೂರು ನಗರ ಪ್ರದೇಶಗಳಲ್ಲಿಯೂ ಮೂರು ಗ್ರಾಮೀಣ ಪ್ರದೇಶಗಳಲ್ಲಿಯೂ ಕಾರ್ಯಾಚರಿಸುತ್ತವೆ. ಇವುಗಳಲ್ಲದೆ ಐದು ಜಿಲ್ಲಾ ಖರೀದಿ ಮಾರುಕಟ್ಟೆ ಕೇಂದ್ರಗಳು

ಕೂಡ ಕಾರ್ಯನಿರ್ವಹಿಸುತ್ತಿವೆ. ಕೃಷಿ ಇಲಾಖೆಯ ಅಧೀನದಲ್ಲಿರುವ ಈ ಕೇಂದ್ರಗಳು ಕೇರಳ ಸರಕಾರದ ಮಾರುಕಟ್ಟೆ ನಿಯಮಗಳ ಪ್ರಕಾರ ಕಾರ್ಯಾಚರಿಸುತ್ತವೆ. ಆರು ಸಗಟು ಮಾರುಕಟ್ಟೆಗಳನ್ನು ಇ-ನಾಮ್ (E-Nam) ನ ಅಧೀನದಲ್ಲಿ ನೋಂದಾಯಿಸಲಾಗಿದೆ. ಇವುಗಳಲ್ಲದೆ ವಿವಿಧ ಹಂತಗಳಲ್ಲಿನ ಸ್ಥಳೀಯ ಮಾರುಕಟ್ಟೆ ಕೇಂದ್ರಗಳು ನೇರವಾಗಿ ಹಾಗೂ ಕೃಷಿಕರ ಸಂಘಗಳ ಮೂಲಕ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಸೌಕರ್ಯವನ್ನು ಒದಗಿಸುತ್ತವೆ. ವಿ.ಎಫ್.ಪಿ.ಸಿ.ಕೆ. ಉತ್ಪಾದನ ಕೇಂದ್ರಗಳಲ್ಲಿ ಸ್ಥಾಪಿಸಲಾದ ಸ್ವ-ಸಹಾಯ ಕೃಷಿಕರ ಸಮಿತಿಗಳ ಮೂಲಕ ಮಧ್ಯವರ್ತಿ ರಹಿತವಾದ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮಾರಾಟವು ನಡೆಯುತ್ತದೆ.

ನ್ಯಾಷನಲ್ ಅಗ್ರಿಕಲ್ಚರಲ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ (NAFED) ಎಂಬುದು ಭಾರತದ ಕೃಷಿ ಉತ್ಪನ್ನಗಳು ಹಾಗೂ ಅರಣ್ಯಸಂಪನ್ಮೂಲಗಳ ಮಾರುಕಟ್ಟೆಯನ್ನು ಉತ್ತೇಜಿಸುವ ಒಂದು ಸಂಸ್ಥೆಯಾಗಿದೆ. ಕೃಷಿ ಉತ್ಪನ್ನಗಳ ಸಂಗ್ರಹ ಹಾಗೂ ಮಾರುಕಟ್ಟೆ, ಮೌಲ್ಯವರ್ಧನೆ, ಗ್ರೇಡಿಂಗ್, ಬ್ರ್ಯಾ ಡಿಂಗ್ ಮತ್ತು ಪ್ಯಾಕಿಂಗ್ ಮೊದಲಾದ ಸೇವೆಗಳನ್ನು ಕೈಗೊಳ್ಳುವ ಮೂಲಕ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು (PACS) ಗ್ರಾಮೀಣ ಕೃಷಿ ಚಟುವಟಿಕೆಗಳನ್ನು ಬಲಪಡಿಸುತ್ತವೆ.

### *ಇ-ನಾಮ್ (E-Nam)*

*ರಾಷ್ಟ್ರೀಯ ಕೃಷಿ ಮಾರುಕಟ್ಟೆಯು (National Agriculture Market) ಕೃಷಿಕರಿಗೆ ಅವರ ಉತ್ಪನ್ನಗಳು ಇಚ್ಛೆಯಂತೆ ಮಾರಾಟ ಮಾಡುವುದಕ್ಕಾಗಿ ಸರಕಾರವು ಆರಂಭಿಸಿದ ಯೋಜನೆಯಾಗಿದೆ. ಇದು ಕೃಷಿ ಉತ್ಪನ್ನಗಳಿಗಿರುವ ಒಂದು ಆನ್‌ಲೈನ್ ವೇದಿಕೆಯಾಗಿದೆ.*

## ಕೃಷಿ ಮಾರುಕಟ್ಟೆ ಎದುರಿಸುತ್ತಿರುವ ಸವಾಲುಗಳು

- ಸಾರಿಗೆ ಸೌಲಭ್ಯಗಳ ಕೊರತೆ
- ಸಾಲಗಳ ಲಭ್ಯತೆಯ ಕೊರತೆ
- ಅಸಮರ್ಪಕ ಮಾರುಕಟ್ಟೆ ಮಾಹಿತಿ
- ಗೋದಾಮುಗಳ ಕೊರತೆ
- ಆಮದು ನೀತಿಗಳು
- ಮಧ್ಯವರ್ತಿಗಳ ಶೋಷಣೆ




*ಚಿತ್ರ 12.26 • ಕೃಷಿ ಸಗಟು ವ್ಯಾಪಾರ ಮಾರುಕಟ್ಟೆ*

### *ವೆಜಿಟೇಬಲ್ ಫ್ರೂಟ್ ಪ್ರೊಮೋಷನ್ ಕೌನ್ಸಿಲ್ ಕೇರಳ (VFPCK)*

*ಕೇರಳದ ಕೃಷಿಕರಿಗೆ ವಾಣಿಜ್ಯ ಆಧಾರದಲ್ಲಿ ಹಣ್ಣು, ತರಕಾರಿಗಳನ್ನು ಕೃಷಿ ಮಾಡುವುದಕ್ಕಾಗಿ ಬೀಜದಿಂದ ಆರಂಭಿಸಿ ಮಾರುಕಟ್ಟೆಯವರೆಗೆ ವಿವಿಧ ಕೃಷಿ ಚಟುವಟಿಕೆಗಳಿಗೆ ಬೆಂಬಲ ನೀಡುವುದು ವಿ.ಎಫ್.ಪಿ.ಸಿ.ಕೆ. ಯ ಉದ್ದೇಶವಾಗಿದೆ.*

### *ಕೃಷಿ ವಿಜ್ಞಾನ ಕೇಂದ್ರಗಳು*

*ಕೃಷಿ ವಿಜ್ಞಾನ ಕೇಂದ್ರಗಳೆಂದರೆ ಕೃಷಿಕರ ಸಮಸ್ಯೆಗಳನ್ನು ಗುರುತಿಸಲು ಹಾಗೂ ಪರಿಹರಿಸಲು ಮತ್ತು ಹೊಸ ಕೃಷಿ ತಂತ್ರಜ್ಞಾನಗಳು ಹಾಗೂ ಸಾಮರ್ಥ್ಯಗಳನ್ನು ವರ್ಗಾಯಿಸಲು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ದೇಶದಾದ್ಯಂತ ಸ್ಥಾಪಿಸಿದ ಸಂಸ್ಥೆಗಳಾಗಿವೆ.*

*ವಿವಿಧ ರೀತಿಯ ಕೃಷಿ ಮಾರುಕಟ್ಟೆಗಳ ಕುರಿತು ವಿಚಾರಗೋಷ್ಠಿಯನ್ನು ನಡೆಸಿರಿ.*

ವಿವಿಧ ರೀತಿಯ ತೋಟಗಾರಿಕಾ ಬೆಳೆಗಳು, ಆಹಾರ ಬೆಳೆಗಳು, ವಾಣಿಜ್ಯ ಬೆಳೆಗಳು, ಸುಗಂಧ ದ್ರವ್ಯಗಳು, ತರಕಾರಿಗಳು ಎಂಬಿವುಗಳ ಕೃಷಿಗೆ ಅನುಕೂಲಕರವಾದ ವೈವಿಧ್ಯಮಯವಾದ ಕೃಷಿ ಹವಾಮಾನ ಸನ್ನಿವೇಶಗಳು ಹಾಗೂ ಸಣ್ಣ ಕೃಷಿ ಸ್ಥಳಗಳು ಕೇರಳದ ಕೃಷಿ ವಲಯದ ವಿಶೇಷತೆಗಳಾಗಿವೆ. ಕೃಷಿ ಇಲಾಖೆ, ರಾಜ್ಯ ಹೋರ್ಟಿಕಲ್ಚರ್ ಮಿಷನ್, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು, ಸ್ಥಳೀಯ ಸ್ವಯಂಆಡಳಿತ ಸಂಸ್ಥೆಗಳು, ಕೇರಳ ಕೃಷಿ ವಿಶ್ವವಿದ್ಯಾಲಯ, ವಿವಿಧ ಕೃಷಿ ಸಂಶೋಧನ ಕೇಂದ್ರಗಳು, ಕೃಷಿಕರ ಉತ್ಪಾದನಾ ಗುಂಪುಗಳು ಮೊದಲಾದವು ಕೃಷಿ ವಲಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ತಾಂತ್ರಿಕತೆಯಲ್ಲಿ ಉಂಟಾದ ಪ್ರಗತಿಯು ಕೃಷಿ ವಲಯದಲ್ಲಿ ಹೊಸತೊಂದು ಕ್ರಾಂತಿಗೆ ನಾಂದಿ ಹಾಡಿದೆ. ಕೃಷಿ ವಲಯದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಆಹಾರ ಭದ್ರತೆ ಹಾಗೂ ಪರಿಸರ ಸುಸ್ಥಿರತೆಯನ್ನು ಸಾಧಿಸಲಿರುವ ಚಟುವಟಿಕೆಗಳನ್ನು ತಂತ್ರಜ್ಞಾನದ ಮೂಲಕ ಆವಿಷ್ಕರಿಸಲಾಗಿದೆ. ಭವಿಷ್ಯದ ಪೀಳಿಗೆಯ ಆಹಾರ ಭದ್ರತೆ ಹಾಗೂ ದೇಶದ ಆರ್ಥಿಕ ಭದ್ರತೆಯನ್ನು ಕಾಪಾಡಿಕೊಳ್ಳುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಹೊಸ ಪೀಳಿಗೆಯಾಗುವುದೇ ನಮ್ಮ ಗುರಿಯಾಗಿದೆ.

## ಮುಂದುವರಿದ ಚಟುವಟಿಕೆಗಳು

- ಹತ್ತಿರದ ಪ್ರದೇಶಗಳ ಕೃಷಿ ಸ್ಥಳಗಳನ್ನು ಸಂದರ್ಶಿಸಿ ವಿವಿಧ ಬೆಳೆಗಳ ಹಾಗೂ ಬೆಳೆ ಪದ್ಧತಿಗಳ ಕುರಿತು ವರದಿ ತಯಾರಿಸಿರಿ.
- ಶಾಲಾ ಪರಿಸರದಲ್ಲಿರುವ ಕೃಷಿ ಕಚೇರಿಯನ್ನು ಸಂದರ್ಶಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ಕೃಷಿ ಕಚೇರಿಯ ಚಟುವಟಿಕೆಗಳನ್ನು ತಿಳಿದುಕೊಳ್ಳಿರಿ.
- ಶಾಲೆಯಲ್ಲಿ ಒಂದು ಕೃಷಿಮೇಳ ಆಯೋಜಿಸಿರಿ.
- ಮುಂಚಿತವಾಗಿ ತಯಾರಿಸಿದ ಪ್ರಶ್ನಾವಳಿಯ ಆಧಾರದಲ್ಲಿ ಕೃಷಿಕರೊಂದಿಗೆ ಚರ್ಚಿಸಿ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪ್ರಾಜೆಕ್ಟ್ ತಯಾರಿಸಿರಿ.
- ಪಾಠ ಭಾಗದಲ್ಲಿ ಚರ್ಚಿಸಲಾದ ಕೃಷಿ ವಿಧಾನಗಳು ಹಾಗೂ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ಶಾಲೆಯಲ್ಲಿ ಒಂದು ಕೃಷಿಸ್ಥಳವನ್ನು ಸಿದ್ಧಗೊಳಿಸಿರಿ.

ಅಧ್ಯಾಯ 13

# ಹೊಸ ರಾಷ್ಟ್ರಗಳು ಉದಯವಾಗುತ್ತಿವೆ





IN CONGRESS, JULY 4, 1776.

A DECLARATION

BY THE REPRESENTATIVES OF THE

UNITED STATES OF AMERICA,

IN GENERAL CONGRESS ASSEMBLED.

Signed by ORDER and in BEHALF of the CONGRESS,

JOHN HANCOCK, PRESIDENT.

ATTEST.

CHARLES THOMSON, SECRETARY.

## ಸ್ವಾತಂತ್ರ್ಯ ಘೋಷಣೆ

"ಎಲ್ಲಾ ಮನುಷ್ಯರನ್ನು ಸಮಾನವಾಗಿ ಸೃಷ್ಟಿಸಲಾಗಿದೆ. ಅವರ ಸೃಷ್ಟಿಕರ್ತನು ಹೊರತುಪಡಿಸಲಾಗದ ಕೆಲವು ಹಕ್ಕುಗಳನ್ನು ಎಲ್ಲರಿಗೂ ನೀಡಿದ್ದಾನೆ. ಜೀವನ, ಸ್ವಾತಂತ್ರ್ಯ ಮತ್ತು ಸುಖ ಜೀವನ ಎಂಬಿವುಗಳಿಗಿರುವ ಹಕ್ಕಗಳು ಅವುಗಳಲ್ಲಿ ಒಳಗೊಂಡಿವೆ. ಈ ಹಕ್ಕುಗಳನ್ನು ಪಡೆಯಲು ಆಡಳಿತಕ್ಕೆ ಒಳಪಟ್ಟವರಿಂದ ಅಂಗೀಕಾರ ಪಡೆದ ಸರಕಾರವು ರೂಪುಗೊಳ್ಳಬೇಕು. ಯಾವುದೇ ಸರಕಾರವು ಈ ಗುರಿಗಳನ್ನು ನಾಶ ಮಾಡುವ ರೀತಿಯಲ್ಲಿ ಕಾರ್ಯನಿರ್ವಹಿಸುವುದಾದರೆ ಅದನ್ನು ಬದಲಾಯಿಸುವ ಅಥವಾ ರದ್ದುಗೊಳಿಸುವ ಹಕ್ಕು ಜನರಿಗಿದೆ."

ಇದು 18 ನೇ ಶತಮಾನದಲ್ಲಿ ಅಮೇರಿಕಾದ ಜನರು ತಯಾರಿಸಿದ ಸ್ವಾತಂತ್ರ್ಯ ಘೋಷಣೆಯ ಒಂದು ಭಾಗವಾಗಿದೆ.

ಇದರಲ್ಲಿ ಯಾವ ಯಾವ ಹಕ್ಕುಗಳ ಕುರಿತು ಉಲ್ಲೇಖಿಸಲಾಗಿದೆ?

- ಜೀವಿಸುವ ಹಕ್ಕು
- ಸ್ವಾತಂತ್ರ್ಯದ ಹಕ್ಕು
- 
- 

ಈ ರೀತಿಯಲ್ಲಿ ಸ್ವಾತಂತ್ರ್ಯ ಘೋಷಣೆಯನ್ನು ಹೊರಡಿಸುವಂತೆ ಅಮೇರಿಕಾದ ಜನರನ್ನು ಪ್ರೇರೇಪಿಸಿದ ಘಟಕಗಳು ಯಾವುವು ಎಂಬುದನ್ನು ಪರಿಶೀಲಿಸೋಣ.

## ವಸಾಹತುಶಾಹಿ ನಿಯಂತ್ರಣ




*ಚಿತ್ರ 13.1 • ಯಾತ್ರಾರ್ಥಿಪಿತರು ಸ್ಥಾಪಿಸಿದ ವಸಾಹತುಗಳು*

ಮೇಫ್ಲವರ್ ಎಂಬ ಹೆಸರಿನ ಹಡಗಿನಲ್ಲಿ ಅಮೇರಿಕಾಕ್ಕೆ ಆಗಮಿಸಿದ ಯಾತ್ರಾರ್ಥಿಪಿತರು (Pilgrim Fathers) ಎಂದು ಕರೆಯಲ್ಪಡುವ ಪ್ಯೂರಿಟನ್‌ಗಳ ಒಂದು ಗುಂಪು ಉತ್ತರ ಅಮೇರಿಕಾದಲ್ಲಿ ಪ್ಲಿಮೌತ್ ಮ್ಯಾಸಚೂಸೆಟ್ಸ್ ಎಂಬ ವಸಾಹತನ್ನು ಸ್ಥಾಪಿಸಿತು. ಅನಂತರದ ಕಾಲದಲ್ಲಿ ಇನ್ನೂ 12 ವಸಾಹತುಗಳು ರೂಪುಗೊಂಡವು. ಈ ವಸಾಹತುಗಳಲ್ಲಿ ವಾಸಿಸುತ್ತಿದ್ದ ಹೆಚ್ಚಿನ ಜನರು ಇಂಗ್ಲಿಷರಾಗಿದ್ದರು. ಮಾತೃ ದೇಶದ ಬೆಂಬಲವಿಲ್ಲದೆ ಅಮೇರಿಕಾಕ್ಕೆ ಆಗಮಿಸಿದ ಇವರನ್ನು ನಿಯಂತ್ರಿಸುವುದಕ್ಕಾಗಿ ಇಂಗ್ಲೆಂಡ್‌ನ ರಾಜನು ವಸಾಹತುಗಳಲ್ಲಿ ಗವರ್ನರ್‌ಗಳನ್ನು ನೇಮಿಸಿದನು. ಇದು ವಸಾಹತುಗಾರರ ಅತೃಪ್ತಿಗೆ ಪ್ರಮುಖ ಕಾರಣವಾಯಿತು.

*ಯಾತ್ರಾರ್ಥಿಪಿತರು ಸ್ಥಾಪಿಸಿದ ವಸಾಹತುಗಳನ್ನು ಚಿತ್ರದಿಂದ ಕಂಡುಹಿಡಿದು ಪಟ್ಟಿ ಮಾಡಿರಿ.*

### ಪ್ಯೂರಿಟನ್ನರು

*ಪ್ಯೂರಿಟನ್ನರು ಇಂಗ್ಲೆಂಡ್‌ನ ಕ್ರೈಸ್ತಸಭೆಯ ಒಂದು ವಿಭಾಗದವರಾಗಿದ್ದರು. ಇವರು ಆರಾಧನಾ ವಿಚಾರಗಳಲ್ಲಿ ಸಂಪ್ರದಾಯವಾದಿ ನಿಲುವುಗಳನ್ನು ಹೊಂದಿದ್ದರು. ಇವರು ದೇಶದ ಇತರ ಕ್ರೈಸ್ತ ವಿಭಾಗಗಳೊಂದಿಗೆ ಸಂಘರ್ಷದಲ್ಲಿ ಏರ್ಪಟ್ಟಿದ್ದರು. ಇದರಿಂದಾಗಿ ಇವರಲ್ಲಿ ಕೆಲವರು ತಮ್ಮ ದೇಶವನ್ನು ತೊರೆದು ಅಮೇರಿಕಾ ಭೂಖಂಡಕ್ಕೆ ವಲಸೆ ಹೋಗಿ ವಸಾಹತುಗಳನ್ನು ಸ್ಥಾಪಿಸಿದರು.*

## ವಾಣಿಜ್ಯ ನಿಯಂತ್ರಣ

ಬ್ರಿಟಿಷ್ ಆಡಳಿತವು ಕಾನೂನು ರಚನೆಗಳ ಮೂಲಕ ವಸಾಹತುಗಳಲ್ಲಿ ವಾಣಿಜ್ಯ ನಿಯಂತ್ರಣಗಳನ್ನು ಜಾರಿಗೊಳಿಸಲು ಪ್ರಯತ್ನಿಸಿತು. ಅವರು ವಸಾಹತುಗಳನ್ನು ಕಚ್ಚಾ ವಸ್ತುಗಳ ಸಂಗ್ರಹ ಮತ್ತು ಸಿದ್ಧ ವಸ್ತುಗಳ ಮಾರಾಟದ ಏಕಸ್ವಾಮ್ಯ ಮಾರುಕಟ್ಟೆಗಳಾಗಿ ಪರಿವರ್ತಿಸಿದರು. ಬ್ರಿಟನ್ ಜಾರಿಗೆ ತಂದ ವಾಣಿಜ್ಯ ಕಾನೂನುಗಳು ಯಾವುವು ಎಂದು ಪರಿಶೀಲಿಸೋಣ.

- ವಸಾಹತುಗಳಿಂದ ವಸಾಹತುಗಳಿಗಿರುವ ಸರಕುಗಳನ್ನು ಬ್ರಿಟಿಷ್ ಹಡಗುಗಳು ಅಥವಾ ವಸಾಹತುಗಳ ಹಡಗುಗಳಲ್ಲಿ ಮಾತ್ರ ಸಾಗಿಸಬೇಕು.
- ಉಣ್ಣೆ, ಹೊಗೆಸೊಪ್ಪು ಮತ್ತು ಹಡಗಿನ ಹಾಯಿಪಟ ಎಂಬೀ ಸರಕುಗಳನ್ನು ಇಂಗ್ಲೆಂಡಿನ ಮೂಲಕ ಮಾತ್ರವೇ ಯುರೋಪಿಗೆ ಕಳುಹಿಸಬೇಕು. ಯುರೋಪಿನಿಂದ ಸರಕುಗಳನ್ನು ಇಂಗ್ಲೆಂಡಿನ ಮೂಲಕ ಮಾತ್ರವೇ ತೆಗೆದುಕೊಂಡು ಬರಬೇಕು.
- 1765 ರ ಮುದ್ರೆ ಪತ್ರ ಕಾನೂನು ಪ್ರಕಾರ ಕರಪತ್ರಗಳು, ಕಾನೂನು ಬದ್ಧವಾದ ದಾಖಲೆಗಳು ಮತ್ತು ಕಿರುಲೇಖನಗಳು ಇತ್ಯಾದಿಗಳಲ್ಲಿ ನಿಗದಿತ ಮೊತ್ತದ ಮುದ್ರೆ ಒತ್ತಬೇಕೆಂದು ತೀರ್ಮಾನಿಸಿದರು. ಫ್ರೆಂಚರ ಆಕ್ರಮಣದಿಂದ ವಸಾಹತುಗಳನ್ನು ರಕ್ಷಿಸಲು ಬ್ರಿಟನ್‌ಗೆ ವೆಚ್ಚವಾದ ಮೊತ್ತವನ್ನು ಮರಳಿ ಸಂಗ್ರಹಿಸುವುದಕ್ಕಾಗಿ ಹೆಚ್ಚುವರಿ ತೆರಿಗೆಯನ್ನು ವಿಧಿಸಿದರು.

ಹೆಚ್ಚುತ್ತಿರುವ ಜನಾಕ್ರೋಶದಿಂದಾಗಿ ಈ ನಿಯಮವನ್ನು 1766 ರಲ್ಲಿ ಹಿಂತೆಗೆದುಕೊಂಡರೂ ವಸಾಹತುಗಳಲ್ಲಿ ತೆರಿಗೆ ವಿಧಿಸಲಿರುವ ಹಕ್ಕು ಬ್ರಿಟಿಷ್ ಸಂಸತ್ತಿನಲ್ಲಿ ನಿಕ್ಷಿಪ್ತವಾಗಿತ್ತು.

ಇಂತಹ ಬ್ರಿಟಿಷ್ ಕ್ರಮಗಳು ಅಮೇರಿಕಾದ ಜನತೆಯನ್ನು ಗಂಭೀರವಾಗಿ ಬಾಧಿಸುತ್ತದೆ ಎಂದು ಅರಿತುಕೊಂಡ ವಸಾಹತಿನ ನಿವಾಸಿಗಳು ದಂಗೆಯೆದ್ದರು.

ಬ್ರಿಟನ್ ವಿರುದ್ಧ ಹೋರಾಡಲು ವಸಾಹತುಗಾರರನ್ನು ಪ್ರೇರೇಪಿಸಿದ ಇತರ ಕೆಲವು ಘಟಕಗಳೂ ಇದ್ದವು. ಅವು ಯಾವುವು ಎಂದು ನೋಡೋಣ.

- ಸಪ್ತವಾರ್ಷಿಕ ಯುದ್ಧಗಳ ಪರಿಣಾಮವಾಗಿ ವಸಾಹತುಗಾರರಿಗೆ ಫ್ರೆಂಚರ ಭೀತಿಯು ಇಲ್ಲದಾಯಿತು.
- ಯುದ್ಧದಲ್ಲಿ ಭಾಗವಹಿಸಿದುದರ ಪರಿಣಾಮವಾಗಿ ಲಭಿಸಿದ ಸೈನಿಕ ಅನುಭವ
- ಸ್ವಂತ ಶಕ್ತಿಯ ಕುರಿತಾದ ಪ್ರಜ್ಞೆ.

### *ಬೋಸ್ಟನ್ ಚಹಾ ಕೂಟ*



*ಚಿತ್ರ 13.2 • ಪ್ರತಿಭಟನೆಗಾರರು ಚಹಾ ಸೊಪ್ಪನ್ನು ಸಮುದ್ರಕ್ಕೆ ಎಸೆಯುತ್ತಿರುವುದು.*

*ಬ್ರಿಟಿಷ್ ಪ್ರಧಾನ ಮಂತ್ರಿಯಾಗಿದ್ದ ನಾರ್ತ್ ಪ್ರಭು 1773 ರಲ್ಲಿ ಚಹಾ ಸೊಪ್ಪು ನಿಯಮವನ್ನು ಜಾರಿಗೆ ತಂದನು. ಈ ನಿಯಮವು ವಸಾಹತು ನಿವಾಸಿಗಳನ್ನು ಈಸ್ಟ್ ಇಂಡಿಯಾ ಕಂಪೆನಿಯ ಚಹಾ ಸೊಪ್ಪನ್ನು ಕೊಂಡುಕೊಳ್ಳುವಂತೆ ನಿರ್ಬಂಧಿಸಿತು. ಬಂದರಿಗೆ ತಲುಪಿದ ಹಡಗುಗಳಿಗೆ ರೆಡ್ ಇಂಡಿಯನರಂತೆ ವೇಷ ಧರಿಸಿ ಹತ್ತಿದ ಪ್ರತಿಭಟನಾಕಾರರು ಚಹಾ ಸೊಪ್ಪಿನ ಪೆಟ್ಟಿಗೆಗಳನ್ನು ಸಮುದ್ರಕ್ಕೆ ಎಸೆದರು. ಈ ಘಟನೆಯನ್ನು ಬೋಸ್ಟನ್ ಚಹಾ ಕೂಟ ಎಂದು ಕರೆಯುತ್ತಾರೆ.*

ವ್ಯಾಪಾರ ನಿಯಮಗಳು ವಸಾಹತುಗಳನ್ನು ಶೋಷಣೆ ಮಾಡಲು ಹೇಗೆ ಸಹಕಾರಿಯಾಯಿತು ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

*ಸಪ್ತ ವಾರ್ಷಿಕ ಯುದ್ಧ*

*ಸಪ್ತ ವಾರ್ಷಿಕ ಯುದ್ಧವು ವ್ಯಾಪಾರದ ಏಕಸ್ವಾಮ್ಯವನ್ನು ದೃಢಗೊಳಿಸಲು ಬ್ರಿಟನ್ ಮತ್ತು ಫ್ರಾನ್ಸ್ ನಡುವೆ ನಡೆದ ಯುದ್ಧವಾಗಿದೆ. 1756 ರಲ್ಲಿ ಪ್ರಾರಂಭವಾದ ಯುದ್ಧವು 1763 ರ ಪ್ಯಾರಿಸ್ ಒಪ್ಪಂದದೊಂದಿಗೆ ಕೊನೆಗೊಂಡಿತು.*

## ವಸಾಹತುಗಳು ಒಂದಾಗುತ್ತಿವೆ

ಬ್ರಿಟಿಷ್ ಸರಕಾರವು ಅಮೇರಿಕಾದ ವಸಾಹತುಗಳಲ್ಲಿ ಜಾರಿಗೊಳಿಸಿದ ನಿಯಮಗಳ ಮೇಲಿನ ವಿರೋಧವು ವಸಾಹತುಗಳ ಮಧ್ಯೆ ಒಗ್ಗಟ್ಟಿನ ಪ್ರಜ್ಞೆ ಬೆಳೆಯಲು ಕಾರಣವಾಯಿತು. ಈ ಏಕತೆಯ ಪರಿಣಾಮವಾಗಿ ವಸಾಹತಿನ ಪ್ರತಿನಿಧಿಗಳು ಫಿಲಡೆಲ್ಫಿಯಾದಲ್ಲಿ ಸಭೆ ಸೇರಿದರು. ಇದನ್ನು ಕೋಂಟಿನೆಂಟಲ್ ಕಾಂಗ್ರೆಸ್ ಎಂದು ಕರೆಯುತ್ತಾರೆ. ಇದರ ಕುರಿತು ಪರಿಶೀಲಿಸೋಣ.

**1774** – ಒಂದನೆಯ ಫಿಲಡೆಲ್ಫಿಯಾ ಕಾಂಗ್ರೆಸ್

- ಜೋರ್ಜಿಯಾವನ್ನು ಹೊರತುಪಡಿಸಿ 12 ವಸಾಹತುಗಳು ಭಾಗವಹಿಸಿದುವು.
- ದೂರುಗಳು ಪರಿಹರಿಸುವವರೆಗೆ ಬ್ರಿಟಿಷರೊಂದಿಗಿನ ವ್ಯಾಪಾರವನ್ನು ನಿಲ್ಲಿಸಲು ತೀರ್ಮಾನಿಸಿದುವು.

**1775** – ಎರಡನೆಯ ಫಿಲಡೆಲ್ಫಿಯಾ ಕಾಂಗ್ರೆಸ್

- ಬ್ರಿಟಿಷ್ ರಾಜನಿಗೆ ಒಲಿವ್ ಬ್ರಾಂಚ್ ಮನವಿಯನ್ನು ನೀಡಿತು.
- ಜೋರ್ಜ್ ವಾಷಿಂಗ್ಟನ್‌ರನ್ನು ಅಮೇರಿಕಾ ಸೈನ್ಯದ ಮುಖ್ಯಸ್ಥನನ್ನಾಗಿ ನೇಮಿಸಿದರು.
- ಬ್ರಿಟನ್‌ನೊಂದಿಗೆ ಯುದ್ಧವು ಆರಂಭವಾಯಿತು.

**1776** – ಮೂರನೆಯ ಫಿಲಡೆಲ್ಫಿಯಾ ಕಾಂಗ್ರೆಸ್

- ಪ್ರಸಿದ್ಧವಾದ ಸ್ವಾತಂತ್ರ್ಯ ಘೋಷಣೆಯನ್ನು ಪ್ರಕಟಿಸಿದರು.
- ಇದನ್ನು ಥೋಮಸ್ ಜೆಫರ್‌ಸನ್ ಬರೆದು ತಯಾರಿಸಿದನು.

### *ಒಲಿವ್ ಬ್ರಾಂಚ್ ಮನವಿ*



ಚಿತ್ರ 13.3 • ಒಲಿವ್ ಬ್ರಾಂಚ್ ಮನವಿ

*ಇದು ಬ್ರಿಟನ್‌ನೊಂದಿಗಿರುವ ಯುದ್ಧವನ್ನು ಕೊನೆಗೊಳಿಸಬೇಕೆಂಬ ಉದ್ದೇಶದೊಂದಿಗೆ ರಾಜನೊಂದಿಗಿರುವ ತಮ್ಮ ನಿಷ್ಠೆಯನ್ನು ಘೋಷಿಸಿಕೊಂಡು ವಸಾಹತಿನ ನಿವಾಸಿಗಳು ಸಲ್ಲಿಸಿದ ಮನವಿಯಾಗಿದೆ. ಇದರ ಮೂಲಕ 1765 ರ ನಂತರ ಜಾರಿಗೆ ತಂದ ಕಾನೂನುಗಳನ್ನು ಹಿಂಪಡೆಯುವಂತೆಯೂ ಅವರು ಬೇಡಿಕೆಯನ್ನಿತ್ತರು.*

## ತತ್ವಚಿಂತನೆ ಹಾಗೂ ಕ್ರಾಂತಿ

ಅಮೇರಿಕಾದ ಜನತೆಯ ಮೇಲೆ ಪ್ರಭಾವ ಬೀರಿದ ತತ್ವ ಚಿಂತಕರು ಹಾಗೂ ಅವರ ಆಶಯಗಳು ಯಾವುವು ಎಂದು ಪರಿಶೀಲಿಸೋಣ.

*'ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ'* - ***ಜೇಮ್ಸ್ ಓಟಿಸ್***

*ಇಂಗ್ಲೆಂಡಿನಿಂದ ಮುಕ್ತಿ ಪಡೆಯುವುದು ಅಮೇರಿಕಾದವರಿಗೆ ಸಂಬಂಧಿಸಿದಂತೆ ಔಚಿತ್ಯಪೂರ್ಣ'* - ***ಥೋಮಸ್ ಪೈನ್***

*'ಮಾನವನಿಗೆ ಕೆಲವು ಮೂಲಭೂತ ಹಕ್ಕುಗಳಿವೆ. ಅವುಗಳನ್ನು ನಿಷೇಧಿಸಲು ಯಾವುದೇ ಸರಕಾರಕ್ಕೂ ಹಕ್ಕಿಲ್ಲ'* – ***ಜೋನ್ ಲೋಕ್***

*ಕೋಂಟಿನೆಂಟಲ್ ಕಾಂಗ್ರೆಸ್ ಗೆ ಸಂಬಂಧಿಸಿದ ಪ್ರಧಾನ ಘಟನೆಗಳನ್ನು ಸೇರಿಸಿಕೊಂಡು ಫ್ಲೋ ಚಾರ್ಟ್ ತಯಾರಿಸಿರಿ.*

## ಸ್ವಾತಂತ್ರ್ಯದೆಡೆಗೆ

1781ರಲ್ಲಿ ಜೋರ್ಜ್ ವಾಷಿಂಗ್ಟನ್ ನೇತೃತ್ವದ ಅಮೇರಿಕಾದ ಸೈನ್ಯವು ಫ್ರಾನ್ಸ್ ಮತ್ತು ಸ್ಪೇನ್ ಎಂಬೀ ದೇಶಗಳ ಸಹಾಯದಿಂದ ಕಾರ್ನ್ ವಾಲಿಸ್‌ನ ನೇತೃತ್ವದಲ್ಲಿರುವ ಇಂಗ್ಲಿಷ್ ಸೈನ್ಯವನ್ನು ಯಾರ್ಕ್ ಟೌನ್‌ನಲ್ಲಿ ಪರಾಜಯಗೊಳಿಸಿತು. ನಂತರ 1783 ರ ಪ್ಯಾರಿಸ್ ಒಪ್ಪಂದದ ಪ್ರಕಾರ ಬ್ರಿಟನ್ 13 ಅಮೇರಿಕಾದ ವಸಾಹತುಗಳ ಸ್ವಾತಂತ್ರ್ಯವನ್ನು ಅಂಗೀಕರಿಸಿತು.

## ನೂತನ ಸಂವಿಧಾನವು ರೂಪುಗೊಳ್ಳುತ್ತಿದೆ

ಯುದ್ಧದ ನಂತರ ವಸಾಹತುಗಳು ಒಟ್ಟು ಸೇರಿ ಆರ್ಟಿಕಲ್ಸ್ ಆಫ್ ಕೋನ್ಫೆಡರೇಷನ್ ಎಂಬ ಹೆಸರಿನಲ್ಲಿ ಸಂವಿಧಾನದ ಚೌಕಟ್ಟನ್ನು ರಚಿಸಿದರು. ಇದರ ಆಧಾರದಲ್ಲಿ ಸಂವಿಧಾನವನ್ನು ಪೂರ್ತಿಗೊಳಿಸುವುದಕ್ಕಾಗಿ ಜೋರ್ಜ್ ವಾಷಿಂಗ್ಟನ್ ನ ನೇತೃತ್ವದಲ್ಲಿ ಫಿಲಡೆಲ್ಫಿಯಾದಲ್ಲಿ ಒಂದು ಸಮಾವೇಶವು ನಡೆಯಿತು. ಈ ಸಮಾವೇಶವು ತಯಾರಿಸಿದ ಸಂವಿಧಾನದ ಪ್ರಕಾರ ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ಪ್ರಥಮ ಅಧ್ಯಕ್ಷರಾಗಿ ಜೋರ್ಜ್ ವಾಷಿಂಗ್ಟನ್ ಆಯ್ಕೆಯಾದರು.

ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ಸಂವಿಧಾನದ ಪ್ರಮುಖ ವಿಶೇಷತೆಗಳು ಯಾವುವು?

- ಅಮೇರಿಕಾವು ಸಂಯುಕ್ತ (ಫೆಡರಲ್) ಮಾದರಿಯಲ್ಲಿರುವ ಲಿಖಿತ ಸಂವಿಧಾನವನ್ನು ಹೊಂದಿದೆ. ಇದರ ಪ್ರಕಾರ ಒಕ್ಕೂಟದಲ್ಲಿ ಸೇರುವ ಪ್ರತಿಯೊಂದು ರಾಜ್ಯಕ್ಕೂ ಸ್ವಂತವಾದ ಕೆಲವು ಅಧಿಕಾರಗಳಿದ್ದುವು.

### *ಜೋರ್ಜ್ ವಾಷಿಂಗ್ಟನ್*



*ಚಿತ್ರ 13.4 • ಜೋರ್ಜ್ ವಾಷಿಂಗ್ಟನ್*

*ಜೋರ್ಜ್ ವಾಷಿಂಗ್ಟನ್ 1732 ರಲ್ಲಿ ಜನಿಸಿದರು. ತಂದೆ ಅಗಸ್ಟಿನ್ ವಾಷಿಂಗ್ಟನ್ ಮತ್ತು ತಾಯಿ ಮೇರಿ ಬಾಲ್ ಆಗಿದ್ದರು. ಅಮೇರಿಕಾದ ಕೋಂಟಿನೆಂಟಲ್ ಸೈನ್ಯದ ಸರ್ವ ಸೈನ್ಯಾಧಿಪತಿ, ಸಂವಿಧಾನ ಸಮಾವೇಶದ ಮುಖ್ಯಸ್ಥ ಮತ್ತು ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ಅಧ್ಯಕ್ಷ ಎಂಬೀ ಪದವಿಗಳನ್ನು ವಹಿಸಿದರು.*

- ವಿಶ್ವದ ಅತ್ಯಂತ ಚಿಕ್ಕ ಸಂವಿಧಾನ
- ವಿದೇಶಾಂಗ ವ್ಯವಹಾರಗಳು, ಯುದ್ಧ, ಅಂತರ್‌ರಾಜ್ಯ ವಾಣಿಜ್ಯ, ಕರೆನ್ಸಿ ಮುಂತಾದವುಗಳಲ್ಲಿ ಕೇಂದ್ರ ಸರಕಾರಕ್ಕೆ ಅಧಿಕಾರ.
- ಕೇಂದ್ರ ಸರಕಾರದಲ್ಲಿ ರಾಜ್ಯ ಸರಕಾರಗಳಿಗೂ ಪ್ರಾತಿನಿಧ್ಯವಿದೆ.
- ಸರಕಾರದ ಮೂರು ಶಾಖೆಗಳಾದ ಕಾಂಗ್ರೆಸ್, ಅಧ್ಯಕ್ಷ, ನ್ಯಾಯಾಲಯ ಎಂಬಿವುಗಳ ಅಧಿಕಾರಗಳನ್ನು ಬೇರ್ಪಡಿಸಲಾಗಿದೆ.

*ಡಯಗ್ರಾಂ ಪೂರ್ತಿಗೊಳಿಸಿರಿ.*

ಲಿಖಿತ ಸಂವಿಧಾನವಾಗಿದೆ

**ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ಸಂವಿಧಾನ**

..............................

..............................

..............................

ಕ್ರಾಂತಿಯ ನಂತರ ಅಮೆರಿಕಾವು ಸಾಧಿಸಿದ ಆರ್ಥಿಕ, ಕೈಗಾರಿಕಾ, ಶೈಕ್ಷಣಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯು ಒಂದು ಕಾಲದಲ್ಲಿ ಸ್ವತಂತ್ರವಾಗಿ ಜೀವಿಸುವುದಕ್ಕಾಗಿ ಹೋರಾಡಿದ ಜನತೆಯನ್ನು ಒಂದು ಪ್ರಮುಖ ವಿಶ್ವಶಕ್ತಿಯಾಗಿ ಹೊರಹೊಮ್ಮಲು ಸಹಾಯಮಾಡಿತು.

ಅಮೇರಿಕಾದ ಸ್ವಾತಂತ್ರ್ಯ ಹೋರಾಟವು ಜಗತ್ತಿಗೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿತು. ಅವು ಯಾವುವು?

**ಅಮೇರಿಕಾದ ಸ್ವಾತಂತ್ರ್ಯ ಹೋರಾಟದ ಪ್ರಾಧಾನ್ಯ**

- ಜಗತ್ತಿನಾದ್ಯಂತ ವಸಾಹತುಶಾಹಿ ವಿರುದ್ಧ ಹೋರಾಟಗಳಿಗೆ ಶಕ್ತಿ ತುಂಬಿತು.
- ಪ್ರಥಮ ಲಿಖಿತ ಸಂವಿಧಾನ ಅಸ್ತಿತ್ವಕ್ಕೆ ಬಂತು.
- ಸಂಯುಕ್ತ ಸರಕಾರ ಎಂಬ ಆಶಯವನ್ನು ಜಗತ್ತಿಗೆ ಪರಿಚಯಿಸಿತು.
- ಆಧುನಿಕ ಗಣರಾಜ್ಯ ಆಡಳಿತ ಎಂಬ ಆಶಯವನ್ನು ಜಗತ್ತಿಗೆ ನೀಡಿತು.

*ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ರೂಪೀಕರಣಕ್ಕೆ ಕಾರಣವಾದ ಘಟನೆಗಳನ್ನು ಸೇರಿಸಿಕೊಂಡು ಒಂದು ಭಿತ್ತಿಪತ್ರಿಕೆಯನ್ನು ತಯಾರಿಸಿರಿ.*

## ಆಂತರಿಕ ದಂಗೆ ಹಾಗೂ ಏಕತೆ

**“ಗುಲಾಮಗಿರಿ ತಪ್ಪಲ್ಲದಿದ್ದರೆ, ಬೇರೆ ಯಾವುದೂ ತಪ್ಪಲ್ಲ”**
*“If slavery is not wrong, then nothing is wrong”*

ಅಮೇರಿಕಾದ ಪ್ರಾಂತ್ಯಗಳ ನಡುವಿನ ಭಿನ್ನತೆಯ ಮೂಲ ಕಾರಣಗಳಲ್ಲಿ ಒಂದರ ಕುರಿತು ಅಬ್ರಹಾಂ ಲಿಂಕನ್‌ರ ಮಾತುಗಳನ್ನು ಗಮನಿಸಿದರಲ್ಲವೇ. ಆಂತರಿಕ ಕಲಹವು ಕ್ರಾಂತಿಯ ನಂತರ ಅಮೇರಿಕಾ ಸಂಯುಕ್ತ ಪ್ರಾಂತ್ಯಗಳು ಎದುರಿಸಿದ ಅತ್ಯಂತ ಸಂಕೀರ್ಣವಾದ ಘಟನೆಯಾಗಿದೆ. ಅದರ ಹಿನ್ನೆಲೆ ಮತ್ತು ಪ್ರಮುಖ ಕಾರಣಗಳನ್ನು ಪರಿಶೀಲಿಸೋಣ.

## ವೈವಿಧ್ಯಮಯವಾದ ರಾಜ್ಯಗಳು

ಸಂಯುಕ್ತ ಅಮೇರಿಕಾದ ರಾಜ್ಯಗಳ ನಡುವೆ ಕೃಷಿ, ಶೈಕ್ಷಣಿಕ, ಆರ್ಥಿಕ ವಲಯಗಳಲ್ಲಿ ಭಿನ್ನತೆಗಳಿದ್ದವು. ಅವು ಯಾವುವು ಎಂಬುದನ್ನು ಪರಿಶೀಲಿಸೋಣ.

| ಉತ್ತರ ಅಮೇರಿಕಾದ ಪ್ರಾಂತ್ಯಗಳು | ದಕ್ಷಿಣ ಅಮೇರಿಕಾದ ಪ್ರಾಂತ್ಯಗಳು |
|---|---|
| • ಕೈಗಾರಿಕೆ ಹಾಗೂ ವಾಣಿಜ್ಯವು ಪ್ರಮುಖ ವಲಯವಾಗಿದ್ದವು | • ಕೃಷಿಯು ಪ್ರಮುಖ ವಲಯವಾಗಿತ್ತು<br>• ಬೃಹತ್ ತೋಟಗಳ ಇರುವಿಕೆ |
| • ಕೈಗಾರಿಕಾ ಉತ್ಪನ್ನಗಳಿಗಾಗಿ ಇತರರನ್ನು ಅವಲಂಬಿಸುತ್ತಿರಲಿಲ್ಲ | • ಅತ್ಯಂತ ಕಡಿಮೆ ಕೈಗಾರಿಕೆಗಳನ್ನು ಹೊಂದಿದ್ದವು<br>• ಕೈಗಾರಿಕಾ ಉತ್ಪನ್ನಗಳಿಗಾಗಿ ಉತ್ತರದ ಪ್ರಾಂತ್ಯಗಳನ್ನು ಹಾಗೂ ಇಂಗ್ಲೆಂಡನ್ನು ಅವಲಂಬಿಸಿದ್ದವು |
| • ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯವನ್ನು ನೀಡಿದ್ದವು<br>• ಪ್ರಾಥಮಿಕ ವಿದ್ಯಾಭ್ಯಾಸವು ಉಚಿತ ಮತ್ತು ಕಡ್ಡಾಯವಾಗಿತ್ತು. | • ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯವನ್ನು ನೀಡಿರಲಿಲ್ಲ<br>• ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿದ್ದವು |

*ಉತ್ತರ ಅಮೇರಿಕಾದ ಪ್ರಾಂತ್ಯಗಳಲ್ಲಿ ಹಾಗೂ ದಕ್ಷಿಣ ಅಮೇರಿಕಾದ ಪ್ರಾಂತ್ಯಗಳಲ್ಲಿ ಅಸ್ತಿತ್ವದಲ್ಲಿದ್ದ ಅಸಮಾನತೆಗಳು ಅವುಗಳ ನಡುವಿನ ಸಂಘರ್ಷಕ್ಕೆ ಹೇಗೆ ಕಾರಣವಾದವು ಎಂದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ಗುಲಾಮಗಿರಿ

ಒಬ್ಬ ವ್ಯಕ್ತಿಯು ಇನ್ನೊಬ್ಬನ ಸಂಪೂರ್ಣ ಅಧಿಕಾರಕ್ಕೆ ಒಳಪಟ್ಟಿರುವ ಸ್ಥಿತಿಯನ್ನು ಗುಲಾಮಗಿರಿ ಎಂದು ಜನಾಂಗ ಸಂಘ (ಲೀಗ್ ಓಫ್ ನೇಶನ್ಸ್) ವು ನಿರ್ವಚಿಸಿದೆ. ಪರಾಜಯಗೊಂಡ ಶತ್ರುಗಳನ್ನು ಸೆರೆಯಾಳುಗಳಾಗಿಯೂ ವ್ಯಕ್ತಿಗಳನ್ನು ಬೆಲೆಗೆ ಖರೀದಿಸಿಯೂ ಗುಲಾಮರನ್ನಾಗಿ ಮಾಡಲಾಗುತ್ತಿತ್ತು. 16 ನೇ ಶತಮಾನದಲ್ಲಿ ಯುರೋಪಿನ ದೇಶಗಳ ವಸಾಹತೀಕರಣ ಪ್ರಕ್ರಿಯೆಯ ಪ್ರಗತಿಯೊಂದಿಗೆ ಆಫ್ರಿಕಾದಿಂದ ದೊಡ್ಡ ಪ್ರಮಾಣದಲ್ಲಿ ಗುಲಾಮರನ್ನು ಅಮೇರಿಕಾಕ್ಕೆ ಕರೆತರಲಾಯಿತು.

## ಗುಲಾಮಗಿರಿ

19ನೇ ಶತಮಾನದ ಆರಂಭದ ವರೆಗೆ, ಯುರೋಪಿಯನ್ನರು ಕೃಷಿ ಅಗತ್ಯಗಳಿಗಾಗಿ ಆಫ್ರಿಕಾದಿಂದ ಗುಲಾಮರನ್ನು ಅಮೇರಿಕಾಕ್ಕೆ ಕರೆತರುತ್ತಿದ್ದರು. ಉತ್ತರದ ಪ್ರಾಂತ್ಯಗಳ ಜನರು ಗುಲಾಮಗಿರಿ ಪದ್ಧತಿಯನ್ನು ನಿರುತ್ಸಾಹಗೊಳಿಸಿದರು. ಗುಲಾಮಗಿರಿ ಪದ್ಧತಿಯನ್ನು ಕೊನೆಗೊಳಿಸುವ ಗುರಿಯೊಂದಿಗೆ ಬಹಳ ಹಿಂದೆಯೇ ಜೋನ್ ವೂಲ್ಮನ್ ನ ನೇತೃತ್ವದಲ್ಲಿ ಚಟುವಟಿಕೆಗಳು ಪ್ರಾರಂಭವಾಗಿದ್ದವು. ಅವರ ಕಾರ್ಯಚಟುವಟಿಕೆಗಳ ಫಲವಾಗಿ 1808 ರಲ್ಲಿ ಗುಲಾಮರನ್ನು ಆಮದು ಮಾಡಿಕೊಳ್ಳುವುದನ್ನು ಅಮೇರಿಕಾದಲ್ಲಿ ನಿಷೇಧಿಸಲಾಯಿತು. ಗುಲಾಮಗಿರಿ ಪದ್ಧತಿಯನ್ನು ಬೆಂಬಲಿಸಿದ ಅಮೇರಿಕಾದ ದಕ್ಷಿಣದ ಪ್ರಾಂತ್ಯಗಳು ತೋಟಗಾರಿಕಾ ಕೃಷಿಯ ಅಸ್ತಿತ್ವಕ್ಕೆ ಗುಲಾಮಗಿರಿಯು ಅಗತ್ಯವೆಂದೂ ಆದುದರಿಂದ ಅವರನ್ನು ಮುಕ್ತಗೊಳಿಸುವುದು ದೇಶಕ್ಕೆ ಅಪಾಯವೆಂದೂ ವಾದಿಸಿದವು. ಆದರೆ, ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಸ್ವಂತ ಆಸ್ತಿಯಾಗಿ ಮಾಡಿಕೊಳ್ಳುವುದು ಅಮೇರಿಕಾದ ಸಂವಿಧಾನದ ಆದರ್ಶಗಳಿಗೆ ವಿರುದ್ಧವಾಗಿದೆ ಎಂದು ಉತ್ತರದ ಪ್ರಾಂತ್ಯಗಳು ಅಭಿಪ್ರಾಯಪಟ್ಟವು.

ಗುಲಾಮಗಿರಿ ವಿರೋಧಿ ಪತ್ರಿಕೆಯಾದ 'ದಿ ಲಿಬರೇಟರ್' ಹಾಗೂ ಮಿಸ್ಸೆಸ್ ಹ್ಯಾರಿಯೆಟ್ ಬೀಚರ್ ಸ್ಟೋವ್ ರವರ 'ಅಂಕಲ್ ಟೋಮ್ಸ್ ಕ್ಯಾಬಿನ್' ಎಂಬ ಪುಸ್ತಕವು ಗುಲಾಮಗಿರಿಯ ವಿರುದ್ಧದ ಜನಾಕ್ರೋಶವನ್ನು ಬಲಪಡಿಸಿತು. ಇದು ಉತ್ತರದ ಪ್ರಾಂತ್ಯಗಳ ಮತ್ತು ದಕ್ಷಿಣದ ಪ್ರಾಂತ್ಯಗಳ ನಡುವಿನ ಉದ್ವಿಗ್ನತೆಯನ್ನು ಹೆಚ್ಚಿಸಿತು.

*'ಅಮೇರಿಕಾದ ಗುಲಾಮಗಿರಿ ಹಾಗೂ ಆಂತರಿಕ ದಂಗೆ' ಎಂಬ ವಿಷಯದ ಆಧಾರದಲ್ಲಿ ಒಂದು ಓಪನ್ ಫಾರಂ ಆಯೋಜಿಸಿರಿ.*



ಚಿತ್ರ 13.5 • ಮಿಸ್ಸೆಸ್ ಹ್ಯಾರಿಯೆಟ್ ಬೀಚರ್ ಸ್ಟೋವ್

## ಬಾಲೆಟ್‌ನಿಂದ ಯುದ್ಧ ಭೂಮಿಯ ಕಡೆಗೆ

ಅಬ್ರಹಾಂ ಲಿಂಕನ್ ಗುಲಾಮಗಿರಿಯನ್ನು ಕೊನೆಗೊಳಿಸಲು ಪ್ರತಿಜ್ಞಾಬದ್ಧರಾಗಿದ್ದ ರಿಪಬ್ಲಿಕನ್ ಪಕ್ಷದ ನಾಯಕರಾಗಿದ್ದರು. ಅವರು 1860 ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದರು. ನಂತರ ದಕ್ಷಿಣ ಕೆರೊಲಿನಾದ ನೇತೃತ್ವದಲ್ಲಿ ಹದಿಮೂರು ಪ್ರಾಂತ್ಯಗಳು ಒಕ್ಕೂಟದೊಂದಿಗಿನ ಸಂಬಂಧವನ್ನು ಕೊನೆಗೊಳಿಸಿದವು. ಅವರು ತಮ್ಮ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ 'ಕಾನ್ಫೆಡರೇಟ್ ಸ್ಟೇಟ್ಸ್ ಆಫ್ ಅಮೇರಿಕಾ' ಎಂಬ ಹೊಸ ಮೈತ್ರಿಕೂಟವನ್ನು ಸ್ಥಾಪಿಸಿದರು. ಆದರೆ ಒಕ್ಕೂಟದಿಂದ ಬೇರ್ಪಡುವ ಹಕ್ಕನ್ನು ಉತ್ತರದ ಪ್ರಾಂತ್ಯಗಳು ಪ್ರಶ್ನಿಸಿದವು. ಇದು ಆಂತರಿಕ ಕಲಹಕ್ಕೆ ಕಾರಣವಾಯಿತು.

## ಒಕ್ಕೂಟ ವಿಜಯದೆಡೆಗೆ

1861 ರಲ್ಲಿ, ಕಾನ್ಫಿಡರೇಟ್ ರಾಜ್ಯಗಳು ಹಾಗೂ ಸಂಯುಕ್ತ ರಾಜ್ಯಗಳ ನಡುವೆ ಯುದ್ಧ ಪ್ರಾರಂಭವಾಯಿತು. 1863 ರಲ್ಲಿ ಗೆಟ್ಟಿಸ್‌ಬರ್ಗ್ ಯುದ್ಧದಲ್ಲಿ ಸಂಯುಕ್ತ ರಾಜ್ಯಗಳು ಅಂತಿಮವಾಗಿ ಜಯ ಗಳಿಸಿದವು. 1863 ಜನವರಿ 1 ರಂದು ಅಮೇರಿಕಾದ ಸಂಯುಕ್ತ

ಪ್ರಾಂತ್ಯಗಳಲ್ಲಿ ಗುಲಾಮಗಿರಿಯನ್ನು ಕೊನೆಗಾಣಿಸುವ ರೀತಿಯಲ್ಲಿ ಅಬ್ರಹಾಂ ಲಿಂಕನ್ ಘೋಷಣೆಯೊಂದನ್ನು ಹೊರಡಿಸಿದನು. ಇದು ವಿಮೋಚನಾ ಘೋಷಣೆ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಪರಾಜಯಗೊಂಡ ದಕ್ಷಿಣದ ರಾಜ್ಯಗಳೊಂದಿಗೆ ಸಹಾನುಭೂತಿಯನ್ನು ಲಿಂಕನ್ ಪ್ರಕಟಪಡಿಸಿದರು. ಅವರು 1865 ಏಪ್ರಿಲ್ 15 ರಂದು ಜೋನ್ ವಿಲ್ಕ್ಸ್ ಬೂತ್ (John Wilkes Booth) ಎಂಬ ಪ್ರತ್ಯೇಕವಾದಿಯಿಂದ ಹತರಾದರು.

*ಅಮೇರಿಕಾದ ಏಕತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಅಬ್ರಹಾಂ ಲಿಂಕನ್ ವಹಿಸಿದ ಪಾತ್ರದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ರಷ್ಯಾದ ಕ್ರಾಂತಿ



*ಚಿತ್ರ 13.7 •*

*"ನಮ್ಮ ಕಾಲದಲ್ಲಿ ಎಲ್ಲಾ ತಂತ್ರಗಳು ಮತ್ತು ಸಾಧನೆಗಳು, ನವೀನ ಸಂಸ್ಕೃತಿಯ ಪ್ರಗತಿಯನ್ನು ಬಳಸಿಕೊಂಡು ಕೃಷಿಕರನ್ನು ಕೊಳ್ಳೆಹೊಡೆಯಲಾಗಿತ್ತ. ಇದರ ಪರಿಣಾಮವಾಗಿ ಅವರು ಹಸಿವಿನಿಂದ ನರಳುವುದು , ಹೆಬ್ಬಾತಿನ ಕಾಲುಗಳನ್ನು ತಿನ್ನುವುದು, ರೊಟ್ಟಿಯ ಬದಲಿಗೆ ಮಣ್ಣಿನ ಉಂಡೆಗಳನ್ನು ತಿನ್ನುವುದು ಮತ್ತು ಅಜೀರ್ಣ ಬಾಧಿಸಿ ಪ್ರಾಣ ವೇದನೆಯಿಂದ ಮರಣಹೊಂದುವುದು ಸಾಮಾನ್ಯವಾಗಿತ್ತು. ಅದೇ ಸಮಯದಲ್ಲಿ ಎರಡನೇ ನಿಕೋಲಸ್‌ನ ನೇತೃತ್ವದಲ್ಲಿ ರಷ್ಯಾದ ಪ್ರಭುಗಳು ಹಾಗೂ ಬಂಡವಾಳಶಾಹಿಗಳು ಸಂಪತ್ತಿನಿಂದ ಮೆರೆಯುತ್ತಿದ್ದರು."*

***ಲೆನಿನ್,** ಸಂಗ್ರಹಿತ ಕೃತಿಗಳು' ಸಂಪುಟ 17, ಪುಟ 527 .*

### *ಅಬ್ರಹಾಂ ಲಿಂಕನ್*



*ಚಿತ್ರ 13.6 • ಅಬ್ರಹಾಂ ಲಿಂಕನ್*

*1809 ಫೆಬ್ರವರಿ 12 ರಂದು ಕೆಂಟುಕಿಯಲ್ಲಿ ಜನಿಸಿದರು. 1859 ರಲ್ಲಿ ಅಮೇರಿಕಾದ 16 ನೇ ಅಧ್ಯಕ್ಷರಾಗಿ ಆಯ್ಕೆಯಾದರು. ಅಮೇರಿಕಾದ ಏಕತೆಯನ್ನು ಉಳಿಸಿಕೊಂಡು ಗುಲಾಮರನ್ನು ವಿಮೋಚನೆ ಮಾಡುವ ತನ್ನ ಉದ್ದೇಶವನ್ನು ಪೂರ್ತಿಗೊಳಿಸಲು ಅವರಿಗೆ ಸಾಧ್ಯವಾಯಿತು. ಅವರು ಗೆಟ್ಟಿಸ್ ಬರ್ಗ್ ಭಾಷಣದಲ್ಲಿ ಪ್ರಜಾಪ್ರಭುತ್ವವನ್ನು 'ಜನರು ಜನರಿಂದ ಜನರಿಗಾಗಿ ನಡೆಸುವ ಆಡಳಿತ' ಎಂದು ನಿರ್ವಚಿಸಿದರು.*

ಮೇಲೆ ನೀಡಲಾದ ಮಾತುಗಳಿಂದ ರಷ್ಯಾದ ಕೃಷಿಕರ ಹಾಗೂ ಜನಸಾಮಾನ್ಯರ ಜೀವನದ ಕುರಿತು ಏನೇನು ತಿಳಿದುಕೊಳ್ಳಬಹುದು. ಈ ಸನ್ನಿವೇಶಗಳು ರಷ್ಯಾದ ಜನರನ್ನು ಕ್ರಾಂತಿಯ ಕಡೆಗೆ ಹೇಗೆ ಕೊಂಡೊಯ್ದವು?

## ಝಾರ್ (Tsar/Czar) ಚಕ್ರವರ್ತಿ ಮತ್ತು ಜನತಾ ಸಭೆ

ರಷ್ಯಾದಲ್ಲಿ ಆಡಳಿತ ನಡೆಸುತ್ತಿದ್ದ ಸ್ವೇಚ್ಛಾಧಿಪತಿಗಳಾದ ಆಡಳಿತಗಾರರನ್ನು ಝಾರ್ ಚಕ್ರವರ್ತಿಗಳು ಎಂದು ಕರೆಯುತ್ತಿದ್ದರು.. ಅಧಿಕಾರಿಗಳನ್ನು ನೇಮಿಸುವ, ವಜಾಗೊಳಿಸುವ ಹಕ್ಕಿನೊಂದಿಗೆ ಯಾರನ್ನು ಬೇಕಾದರೂ ಗಡಿಪಾರು ಮಾಡುವ ಮತ್ತು ಸೆರೆಮನೆಗೆ ತಳ್ಳುವ ಅಧಿಕಾರವು ಚಕ್ರವರ್ತಿಗಿತ್ತು. ಸಂಕಷ್ಟದಿಂದ ಕೂಡಿದ ಉದ್ಯೋಗ ಪರಿಸ್ಥಿತಿಗಳು, ಆರ್ಥಿಕ ಹಿಂಜರಿತ ಮತ್ತು ಜಪಾನ್‌ನೊಂದಿಗೆ ನಡೆಯುತ್ತಿದ್ದ ಯುದ್ಧ ಎಂಬಿವುಗಳಿಂದ ರೋಷಗೊಂಡ ಜನರು ಆರ್ಥಿಕ, ರಾಜಕೀಯ ಸುಧಾರಣೆಗಳಿಗಾಗಿ ಎರಡನೇ ಝಾರ್ ನಿಕೋಲಸ್ ನಲ್ಲಿ ಮನವಿ ಮಾಡಲು ಫಾದರ್ ಗಾಪೋನ್ (Father Gapon) ನ ನೇತೃತ್ವದಲ್ಲಿ ಸೈಂಟ್ ಪೀಟರ್ಸ್‌ಬರ್ಗ್‌ಗೆ ಮೆರವಣಿಗೆ ನಡೆಸಿದರು. ಸೈನ್ಯವು ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಿದುದರಿಂದಾಗಿ ನೂರಕ್ಕಿಂತಲೂ ಅಧಿಕ ಮಂದಿ ಕಾರ್ಮಿಕರು ಮರಣಹೊಂದಿದರು. 1905 ಜನವರಿ 22 ರಂದು ಸೈಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆದ ಈ ಹತ್ಯಾಕಾಂಡವನ್ನು ರಕ್ತಸಿಕ್ತ ರವಿವಾರ (Bloody Sunday) ಎಂದು ಕರೆಯುತ್ತಾರೆ.

ಜನಾಕ್ರೋಶದಿಂದಾಗಿ ಚಕ್ರವರ್ತಿಯು ಡ್ಯೂಮಾ (Duma) ಎಂಬ ಸಂಸತ್ತನ್ನು ರೂಪಿಸಲು ಒಪ್ಪಿಕೊಂಡನು. ಆದರೆ ಡ್ಯೂಮಾವು (Duma) ಪ್ರಸ್ತಾಪಿಸಿದ ಎಲ್ಲಾ ಸುಧಾರಣೆಗಳನ್ನು ಅವನು ತಿರಸ್ಕರಿಸಿದನಲ್ಲದೆ ರಾಜಕೀಯ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಪ್ರಯತ್ನಿಸಿದನು.

## ಕಾರ್ಮಿಕರು ಮತ್ತು ಕ್ರಾಂತಿ

ರಷ್ಯಾದ ಸಮಾಜದಲ್ಲಿ ಎರಡು ವರ್ಗದ ಜನರಿದ್ದರು.ಕಾರ್ಮಿಕರು ಹಾಗೂ ಕೃಷಿಕರನ್ನು ಒಳಗೊಂಡ ಜನಸಾಮಾನ್ಯರು ಮತ್ತು ಪ್ರಭುಗಳು ಹಾಗೂ ಬಂಡವಾಳಶಾಹಿಗಳನ್ನು ಒಳಗೊಂಡ ಶ್ರೀಮಂತ ವರ್ಗ. ಜನಸಾಮಾನ್ಯರಾಗಿದ್ದ ಕೃಷಿಕರು ಹಾಗೂ ಕಾರ್ಮಿಕರನ್ನು ಆಡಳಿತಗಾರರು ಮತ್ತು ಪ್ರಭುಗಳು ತಿರಸ್ಕಾರದಿಂದ ನೋಡುತ್ತಿದ್ದರು. ಕೃಷಿಕರ ಮತ್ತು ಕಾರ್ಮಿಕರ ಶೋಚನೀಯ ಸ್ಥಿತಿಯನ್ನು ಪರಿಶೀಲಿಸೋಣ.

ಕಾರ್ಮಿಕರು ಎದುರಿಸಿದ ಪ್ರಮುಖ ಸಮಸ್ಯೆಗಳು

- ಕಡಿಮೆ ವೇತನ
- ಕಳಪೆ ಜೀವನ ಸನ್ನಿವೇಶಗಳು
- ಹೆಚ್ಚುವರಿ ಕೆಲಸದ ಸಮಯ
- ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳಶಾಹಿಗಳ ಆಧಿಪತ್ಯ

ಕೃಷಿಕರ ಸ್ಥಿತಿಯೂ ಕಾರ್ಮಿಕರ ಸ್ಥಿತಿಯಷ್ಟೇ ಶೋಚನೀಯವಾಗಿತ್ತು. ಅವುಗಳು ಯಾವುವೆಂದು ಪರಿಶೀಲಿಸೋಣ.




- ಕೃಷಿಕರು ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ದಬ್ಬಾಳಿಕೆಗೆ ಒಳಗಾಗಿದ್ದರು
- ಹೆಚ್ಚಿನ ಕೃಷಿ ಭೂಮಿಯೂ ಪ್ರಭುಗಳ ಕೈವಶದಲ್ಲಿತ್ತು
- ಸಣ್ಣ ಒಂದು ವಿಭಾಗದ ಕೃಷಿಕರು ಮಾತ್ರ ಸ್ವಂತ ಭೂಮಿಯನ್ನು ಹೊಂದಿದ್ದರು
- ಕೃಷಿಕರು ಅತ್ಯಧಿಕ ತೆರಿಗೆ ನೀಡಬೇಕಾಗಿತ್ತು

ವಿದೇಶಿ ಬಂಡವಾಳಶಾಹಿಗಳ ಪ್ರಾಬಲ್ಯ ಮತ್ತು ಶೋಷಣೆಯು ಕೃಷಿಕರ ಮತ್ತು ಕಾರ್ಮಿಕರ ಸಂಘಗಳನ್ನು ರೂಪಿಸುವುದಕ್ಕೆ ಕಾರಣವಾದುವು. ಇದು ಅವರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ರೂಪುಗೊಂಡವು. ಅವುಗಳಲ್ಲಿ ಅತಿ ಪ್ರಮುಖವಾದವುಗಳ ಕುರಿತು ಪರಿಶೀಲಿಸೋಣ.

**ಸೋಶ್ಯಲ್ ಡೆಮೊಕ್ರೆಟಿಕ್ ವರ್ಕರ್ಸ್ ಪಾರ್ಟಿ**

- **ಬೋಲ್ಶೆವಿಕ್‌ಗಳು** (Bolshevik)
- **ಮೆನ್ಶೆವಿಕ್‌ಗಳು** (Menshevik)

*ರಷ್ಯಾದಲ್ಲಿ ರಾಜಕೀಯ ಪಕ್ಷಗಳ ಬೆಳವಣಿಗೆಗೆ ಕಾರಣವಾದ ಸನ್ನಿವೇಶಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.*

## ಆಶಯಗಳ ಪ್ರಭಾವ

ಕ್ರಾಂತಿಗೆ ಅನುಕೂಲಕರವಾದ ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ ಸಾಹಿತ್ಯಗಾರರು ಪ್ರಮುಖ ಪಾತ್ರವಹಿಸಿದ್ದಾರೆ. ಲಿಯೋ ಟಾಲ್‌ಸ್ಟಾಯ್, ತುರ್ಗೆನವ್, ಮಾಕ್ಸಿಂ ಗೋರ್ಕಿ ಮುಂತಾದವರ ರಚನೆಗಳು ಜನಸಾಮಾನ್ಯರ ಶೋಚನೀಯಾವಸ್ಥೆಯನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದವು. ಆದರೆ ಕಾರ್ಲ್ ಮಾರ್ಕ್ಸ್‌ನ ಮತ್ತು ಫ್ರೆಡ್ರಿಕ್ ಏಂಗಲ್ಸ್‌ನ ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಒಳಗೊಂಡಿದ್ದ 'ಕಮ್ಯೂನಿಸ್ಟ್ ಮೆನಿಫೆಸ್ಟೋ'ವು ಕ್ರಾಂತಿ ಮತ್ತು ಅದಕ್ಕೆ ಅಗತ್ಯವಾದ ಮಾರ್ಗನಿರ್ದೇಶನಗಳನ್ನು ನೀಡಿತು.

ಏಪ್ರಿಲ್ ತೀಸಿಸ್ಸ್



ಚಿತ್ರ 13.7 • ಕಾರ್ಲ್ ಮಾರ್ಕ್ಸ್, ಫ್ರೆಡ್ರಿಕ್ ಎಂಗೆಲ್ಸ್

## ಮಾರ್ಕ್ಸಿಸ್ಟ್ ಸಿದ್ಧಾಂತ

*ಮಾರ್ಕ್ಸಿಸ್ಟ್ ನ ಸಿದ್ಧಾಂತದ ಪ್ರಕಾರ ಮಾನವ ಜೀವನದಲ್ಲಿನ ರಾಜಕೀಯ, ಸಾಮಾಜಿಕ ಮತ್ತು ಬೌದ್ಧಿಕವಾದ ಎಲ್ಲಾ ಚಟುವಟಿಕೆಗಳು ಸಮಾಜದ ಉತ್ಪಾದನಾ ವಿಧಾನಗಳಿಂದ ನಿರ್ಧರಿಸಲ್ಪಡುತ್ತವೆ. ಕಾರ್ಮಿಕರು ಉತ್ಪಾದನೆಯ ಅಡಿಪಾಯವೆಂದೂ ಆದುದರಿಂದ ಕಾರ್ಮಿಕರ ಆಧಿಪತ್ಯಕ್ಕಾಗಿ ಪ್ರಯತ್ನಿಸಬೇಕೆಂದು ಮಾರ್ಕ್ಸಿಸ್ಟ್ ಆಶಯಕ್ಕೆ ರೂಪು ನೀಡಿದ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ವಾದಿಸಿದರು.*

ಪ್ರಥಮ ಜಾಗತಿಕ ಯುದ್ಧವು ಪ್ರಾರಂಭವಾದಾಗ ಅದರಲ್ಲಿ ರಷ್ಯಾವು ಭಾಗವಹಿಸಿತು. ಆಯುಧಗಳ ಹಾಗೂ ತರಬೇತಿಯ ಕೊರತೆಯಿಂದಾಗಿ ಸಾವಿರಾರು ಸೈನಿಕರು ಕೊಲ್ಲಲ್ಪಟ್ಟರು. ಇದು ಝಾರ್ ಆಡಳಿತಕ್ಕೆದುರಾಗಿ ಜನಸಾಮಾನ್ಯರ ಮಧ್ಯೆ ವಿಮರ್ಶೆಗಳು ಹೊರಹೊಮ್ಮಲು ಕಾರಣವಾಯಿತು. ಈ ಸಮಯದಲ್ಲಿ ರಷ್ಯಾದಲ್ಲಿ ಉಂಟಾದ ಆಹಾರದ ಕೊರತೆಯು ಸಮಸ್ಯೆಗಳನ್ನು ತೀವ್ರಗೊಳಿಸಿತು. ಇದು ಜನರಲ್ಲಿ ಕ್ರಾಂತಿಕಾರಿ ಚಿಂತನೆಗಳು ಬೆಳೆದು ಬರಲು ಕಾರಣವಾಯಿತು.



ಚಿತ್ರ 13.8 • ಪೆಟ್ರೋಗ್ರೇಡ್‌ನ ಮೆರವಣಿಗೆ

## ರಾಜಾಧಿಕಾರವು ಕೊನೆಗೊಳ್ಳುತ್ತಿದೆ

1947 ಮಾರ್ಚ್ 8 ರಂದು 'ಸ್ವೇಚ್ಛಾಧಿಪತ್ಯವು ನಾಶವಾಗಲಿ' ಎಂಬ ಘೋಷಣೆಯೊಂದಿಗೆ ಮಹಿಳಾ ಕಾರ್ಮಿಕರು ಮುಂಚೂಣಿಯಲ್ಲಿದ್ದುಕೊಂಡು ಪೆಟ್ರೋಗ್ರೇಡ್ (Petrograd) ನಲ್ಲಿ ಮುಷ್ಕರ ಹಾಗೂ ಮೆರವಣಿಗೆಯನ್ನು ನಡೆಸಿದರು. ಇದನ್ನು ನಿಯಂತ್ರಿಸಲು ಬಂದ ಸೈನಿಕರು ಕಾರ್ಮಿಕರ ಜೊತೆಗೂಡಿದರು. ಎರಡನೇ ಝಾರ್ ನಿಕೋಲಸ್ಸ್‌ನು 1917 ಮಾರ್ಚ್ 15 ರಂದು ಪದಚ್ಯುತಿಗೊಳಿಸಿ ಮೆನ್ಶೆವಿಕ್ ನಾಯಕ ಅಲೆಕ್ಸಾಂಡರ್ ಕರೆನ್ಸ್ಕಿ (Aleksandr Kerensky) ಯ ನೇತೃತ್ವದ ಒಂದು ತಾತ್ಕಾಲಿಕ ಸರಕಾರವು ರೂಪುಗೊಂಡಿತು. ಈ ಕ್ರಾಂತಿಯನ್ನು 'ಫೆಬ್ರವರಿ ಕ್ರಾಂತಿ' ಎಂದು ಕರೆಯುತ್ತಾರೆ.



ಚಿತ್ರ 13.9 • ಅಲೆಕ್ಸಾಂಡರ್ ಕರೆನ್ಸ್ಕಿ

## ಕಾರ್ಮಿಕ ವರ್ಗವು ಸರ್ವಾಧಿಕಾರದತ್ತ

ಬೊಲ್ಶೆವಿಕ್ ಪಕ್ಷದ ನೇತಾರ ಲೆನಿನ್ ರಷ್ಯಾದ ಕ್ರಾಂತಿಯನ್ನು ಪೂರ್ಣತೆಯ ಕಡೆಗೆ ತಲುಪಿಸಿದನು. ತಾತ್ಕಾಲಿಕ ಸರಕಾರವು ಬಂಡವಾಳಶಾಹಿಗಳದ್ದಾಗಿದೆಯೆಂದೂ ಅದು ಜನರಿಗೆ ಸಮಾಧಾನ, ಆಹಾರ, ಸ್ವಾತಂತ್ರ್ಯ ನೀಡುವುದಿಲ್ಲವೆಂದೂ ಅದಕ್ಕಾಗಿ ಅದರ

ಸ್ಥಾನದಲ್ಲಿ ಸೋವಿಯೆಟ್ (Soviet) ಗಳ ಸರಕಾರವು ಬರಬೇಕೆಂದೂ ಅವನು ವಾದಿಸಿದನು. ಅವನು ಹೊಸ ಆಶಯಗಳನ್ನು ಮುಂದಿಟ್ಟನು. ಅವು ಯಾವುವು ಎಂದು ಪರಿಶೀಲಿಸೋಣ.

**ಲೆನಿನ್**

**ಅಧಿಕಾರ**
*ಕಾರ್ಮಿಕರ ಸಮಿತಿಗಳಿಗೆ (ಸೋವಿಯಟ್‌ಗಳು)*

**ಭೂಮಿ**
*ಕೃಷಿಕರಿಗೆ*

**ಶಾಂತಿ**
*ಎಲ್ಲರಿಗೂ*

**ಆಹಾರ**
*ಹಸಿವಿನಿಂದ ಇರುವವರಿಗೆ*

ಕೆಂಪು ಸೇನೆ (Red Guard) ಯು ಈ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ರೂಪಿಸಿದ ಸೈನಿಕ ವಿಭಾಗವಾಗಿದೆ. ಬೋಲ್ಶೆವಿಕ್‌ರು (Bolshevik) ಟಪಾಲು - ಟೆಲಿಫೋನ್ ಕೇಂದ್ರಗಳು, ರೈಲು ನಿಲ್ದಾಣಗಳು, ಬ್ಯಾಂಕುಗಳು ಸೇರಿದಂತೆ ಪೆಟ್ರೋಗ್ರೇಡ್ ನ ಎಲ್ಲಾ ಪ್ರಮುಖ ಸಂಸ್ಥೆಗಳನ್ನು ವಶಪಡಿಸಿದವು. ನಂತರ ತಾತ್ಕಾಲಿಕ ಸರಕಾರದ ಕೇಂದ್ರವಾದ ಚಳಿಗಾಲದ ರಾಜಧಾನಿಯನ್ನೂ ವಶಪಡಿಸಿಕೊಂಡರು. ಇದರೊಂದಿಗೆ ಅಲೆಕ್ಸಾಂಡರ್ ಕರೆನ್ಸ್ಕಿ ಯ ನೇತೃತ್ವದಲ್ಲಿದ್ದ ತಾತ್ಕಾಲಿಕ ಸರಕಾರ ಪತನಗೊಂಡಿತು. ಈ ಕ್ರಾಂತಿಯನ್ನು ಅಕ್ಟೋಬರ್ ಕ್ರಾಂತಿ (October Revolution) ಎಂದು ಕರೆಯುತ್ತಾರೆ. ನಂತರ ಲೆನಿನ್ ರಷ್ಯಾವನ್ನು ಕಾರ್ಮಿಕರ ಗಣರಾಜ್ಯವಾಗಿ ಘೋಷಿಸಿದನು ಮತ್ತು ಅವನ ನೇತೃತ್ವದಲ್ಲಿ ಒಂದು ಸರಕಾರವನ್ನು ರೂಪೀಕರಿಸಿದನು.

**ರಷ್ಯಾದ ಕ್ಯಾಲೆಂಡರ್**

*ಅಂತಾರಾಷ್ಟ್ರೀಯ ಕ್ಯಾಲೆಂಡರ್ (ಗ್ರಿಗೋರಿಯನ್ ಕ್ಯಾಲೆಂಡರ್) ಗಿಂತ 13 ದಿನ ಹಿಂದಿರುವ ಕಾರಣ ಮಾರ್ಚ್ ನಲ್ಲಿ ನಡೆದ ಕ್ರಾಂತಿಯನ್ನು ಫೆಬ್ರವರಿ ಕ್ರಾಂತಿಯೆಂದು ಕರೆಯಲಾಗುತ್ತದೆ.*

*ಫೆಬ್ರವರಿ ಕ್ರಾಂತಿ ಮತ್ತು ಅಕ್ಟೋಬರ್ ಕ್ರಾಂತಿ ಎಂಬಿವುಗಳಿಗೆ ಕಾರಣವಾದ ವಿವಿಧ ಘಟನೆಗಳನ್ನು ಸೇರಿಸಿಕೊಂಡು ಫ್ಲಿಪ್ ಆಲ್ಬಂ ತಯಾರಿಸಿರಿ.*

*ಲೆನಿನ್ 1870 ರಲ್ಲಿ ಜನಿಸಿದನು. ಸಾಮಾಜಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ರಹಸ್ಯ ಸಂಘಟನೆಗಳಿಂದ ಮಾತ್ರ ಉಂಟುಮಾಡಲು ಸಾಧ್ಯವಿಲ್ಲವೆಂದೂ ಕಾರ್ಮಿಕರನ್ನು ಸಂಘಟಿಸುವ ಮೂಲಕ ಮಾತ್ರವೆ ಅದು ಸಾಧ್ಯ ಎಂದೂ ಅವನಿಗೆ ಮನವರಿಕೆಯಾಯಿತು. ಈ ದೃಷ್ಟಿಕೋನವು ರಷ್ಯಾದಲ್ಲಿ ಕಾರ್ಮಿಕರ ಹಾಗೂ ರೈತರ ಕ್ರಾಂತಿಯನ್ನು ಅನಿವಾರ್ಯಗೊಳಿಸಿತು. ಒಕ್ಟೋಬರ್ ಕ್ರಾಂತಿಯ ನಂತರ ರೂಪುಗೊಂಡ ಕ್ರಾಂತಿಕಾರಿ ಸರಕಾರಕ್ಕೆ ಲೆನಿನ್ ನೇತೃತ್ವವನ್ನು ನೀಡಿದನು.*

ಕ್ರಾಂತಿಯ ನಂತರ ಲೆನಿನ್ ಕೆಲವು ಆಡಳಿತ ಸುಧಾರಣೆಗಳನ್ನು ಜಾರಿಗೊಳಿಸಿದನು. ಅವು ಯಾವುವು?




## ಏಪ್ರಿಲ್ ತೀಸಿಸ್

*ಏಪ್ರಿಲ್ ತೀಸಿಸ್ ಎಂಬುದು ಬೊಲ್ಶೆವಿಕ್ ಪಕ್ಷ ಹಾಗೂ ಸೋವಿಯಟ್‌ಗಳ ಜಂಟಿ ಸಭೆಯಲ್ಲಿ ಲೆನಿನ್ ಮಂಡಿಸಿದ ಪ್ರಬಂಧವಾಗಿದೆ. ಇದು ಬೂರ್ಷ್ವಾ ಪ್ರಜಾಪ್ರಭುತ್ವದಿಂದ ಸಮಾಜವಾದಿ ಕ್ರಾಂತಿಗೆ ಪರಿವರ್ತನೆಗೊಳ್ಳಲು ಸ್ವೀಕರಿಸಬೇಕಾದ ಯೋಜನೆಗಳನ್ನು ವಿವರಿಸುತ್ತದೆ. ಪ್ರಸ್ತುತ ಕಾರ್ಮಿಕರು ಮತ್ತು ಕೃಷಿಕರ ಕೈಗಳಿಗೆ ಅಧಿಕಾರವನ್ನು ಹಸ್ತಾಂತರಿಸುವ ಪರಿಸ್ಥಿತಿಯು ಬಂದೊದಗಿದೆ ಎಂದು ಅವರು ಇದರಲ್ಲಿ ಸ್ಪಷ್ಟಪಡಿಸುತ್ತಾರೆ.*

## ಬದಲಾಗುತ್ತಿರುವ ಆರ್ಥಿಕ ನೀತಿ

ಲೆನಿನ್ ಆರ್ಥಿಕ ವಲಯದಲ್ಲಿ ಹಲವಾರು ಕ್ರಾಂತಿಕಾರಿ ಕ್ರಮಗಳನ್ನು ಸ್ವೀಕರಿಸಿದನು. ಹೊಸ ಆರ್ಥಿಕ ನೀತಿ (New Economic Policy) ಯು 1921 ರಲ್ಲಿ ಲೆನಿನ್ ಜಾರಿಗೊಳಿಸಿದ ಸುಧಾರಣೆಯಾಗಿದೆ. ಖಾಸಗಿ ವಾಣಿಜ್ಯ, ಕೃಷಿ ಎಂಬಿವುಗಳಿಗೆ ಮತ್ತು ಖಾಸಗಿ ಹೂಡಿಕೆಯ ಕಡೆಗೆ ಭಾಗಶಃ ಮರಳುವಿಕೆಯು ಹೊಸ ಆರ್ಥಿಕ ನೀತಿಯ ವಿಶೇಷತೆಯಾಗಿತ್ತು. ಬೃಹತ್ ಕೈಗಾರಿಕೆಗಳನ್ನು ಟ್ರಸ್ಟ್‌ಗಳಾಗಿ ಏಕೀಕರಿಸಿದರು. ಅದರೊಂದಿಗೆ ಸಹಕಾರಿ ವಲಯಕ್ಕೆ ಸರಕಾರವು ಪ್ರೋತ್ಸಾಹವನ್ನು ನೀಡಿತು. ಆದರೆ ಬಂಡವಾಳಶಾಹಿಯು ಮರುಕಳಿಸದಂತೆ ಮಾಡಲು ಸರಕಾರವು ಕಟ್ಟುನಿಟ್ಟಿನ ನಿಯಂತ್ರಣಗಳನ್ನು ಕೈಗೊಂಡಿತು. ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರುವ ಮೂಲಕ ಅವನು ಯೂನಿಯನ್ ಆಫ್ ಸೋವಿಯತ್ ಸೋಶಿಯಲಿಸ್ಟ್ ರಿಪಬ್ಲಿಕ್ಸ್ (USSR) ನ್ನು ಜಗತ್ತಿನ ಬೃಹತ್ ಶಕ್ತಿಯಾಗಿ ಬೆಳೆಸಿದನು.

*ಯೂನಿಯನ್ ಆಫ್ ಸೋವಿಯತ್ ಸೋಷಿಯಲಿಸ್ಟ್ ರಿಪಬ್ಲಿಕ್ ಎಂಬ ರಾಷ್ಟ್ರದ ರೂಪೀಕರಣಕ್ಕೆ ಕಾರಣವಾದ ಸನ್ನಿವೇಶಗಳನ್ನು ಪ್ರಸೆಂಟೇಷನ್ ರೂಪದಲ್ಲಿ ತಯಾರಿಸಲು ಅಗತ್ಯವಾದ ಮಾದರಿ ಸ್ಲೈಡುಗಳನ್ನು ತಯಾರಿಸಿರಿ.*

## ಕ್ರಾಂತಿಯ ಹಾದಿಯಲ್ಲಿ ಚೀನಾ

*"2000 ವರ್ಷದ ಯುದ್ಧಗಳ, ಆಕ್ರಮಣಗಳ ಹಾಗೂ ಕಠಿಣ ಹೋರಾಟದ ನೋವನ್ನು ಅನುಭವಿಸಿದ ಚರಿತ್ರೆಯ ನಂತರ ಚೀನಾವು ಅವಳ ಜನನದ ಹಾಗೂ ಸಾಮಾಜಿಕ ಆಧಾರದ ನ್ಯೂನತೆಗಳನ್ನು ನಿವಾರಿಸಿಕೊಳ್ಳುವ ಲಕ್ಷಣಗಳನ್ನು*

*ತೋರಿಸಲು ಪ್ರಾರಂಭಿಸುತ್ತಿದ್ದಂತೆಯೇ ದೇಶಕ್ಕೆ ಇನ್ನೊಂದು ದುರಾದೃಷ್ಟವು ಎದುರಾಗಿತ್ತು. ಅದು ಚೀನಾದ ಸ್ವಯಂ ಪ್ರಗತಿಯನ್ನು ತಡೆಹಿಡಿದ ಸಾಮ್ರಾಜ್ಯಶಾಹಿ ಮತ್ತು ವಿದೇಶಿ ಬಂಡವಾಳದ ರಂಗ ಪ್ರವೇಶವಾಗಿತ್ತು"*

***ಎಂ.ಎನ್. ರಾಯ್***

*ರೆವಲ್ಯೂಷನ್ ಅಂಡ್ ಕೌಂಟರ್ ರೆವಲ್ಯೂಷನ್ ಇನ್ ಚೈನಾ*



*ಚಿತ್ರ 13.10*

ಇದು 19 ನೇ ಶತಮಾನದಲ್ಲಿ ಚೀನಾಕ್ಕೆ ಯುರೋಪಿಯನ್ನರ ಆಗಮನ ಹಾಗೂ ಅದು ಉಂಟುಮಾಡಿದ ಪರಿಣಾಮವನ್ನು ಸೂಚಿಸುವ ಎಂ.ಎನ್. ರಾಯ್‌ರ ಮಾತುಗಳಾಗಿವೆ. ಈ ಸಮಸ್ಯೆಗಳನ್ನು ಚೀನಾವು ಹೇಗೆ ಎದುರಿಸಿತು ಎಂದು ಪರಿಶೀಲಿಸೋಣ.

## ವ್ಯಾಪಾರದ ಮೂಲಕ ಅಧಿಕಾರಕ್ಕೆ

ಭಾರತಕ್ಕೆ ಯುರೋಪಿಯನ್ ಶಕ್ತಿಗಳ ಆಗಮನ ಮತ್ತು ಅವರ ಆಧಿಪತ್ಯಕ್ಕೆ ಸಂಬಂಧಿಸಿ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ್ದೇವಲ್ಲವೇ. ಇದೇ ರೀತಿ, ವಿದೇಶಿ ಶಕ್ತಿಗಳು ವ್ಯಾಪಾರದ ಉದ್ದೇಶದಿಂದ ಚೀನಾಕ್ಕೆ ಬಂದಿದ್ದವು. ಯುರೋಪಿನ ವರ್ತಕರು ಅಫೀಮು ವ್ಯಾಪಾರದ ಮೂಲಕ ಚೀನಾದಿಂದ ದೊಡ್ಡ ಪ್ರಮಾಣದ ಲಾಭಗಳಿಸಿದರು. ಮಾದಕ ವಸ್ತುವಾದ ಅಫೀಮಿನ ಬಳಕೆಯು ಚೀನಾದಲ್ಲಿ ಬೇಗನೆ ವ್ಯಾಪಿಸಿದುದು ಚೀನಾದ ಜನರ ಆರೋಗ್ಯ ಮತ್ತು ದೇಶದ ಸಂಪತ್ತಿನ ಮೇಲೆ ದುಷ್ಪರಿಣಾಮವನ್ನು ಬೀರಿತು. ಈ ಕಾರಣದಿಂದಾಗಿ ಚೀನಾ ಮತ್ತು ಬ್ರಿಟನಿನ ನಡುವೆ ಉಂಟಾದ ಯುದ್ಧವನ್ನು 'ಅಫೀಮು ಯುದ್ಧ' (Opium War) ಎಂದು ಕರೆಯುತ್ತಾರೆ. ಈ ಯುದ್ಧದಲ್ಲಿ ಚೀನಾವು ಪರಾಜಯಗೊಂಡಿತು. ನಂತರ ನಾಂಕಿಂಗ್ ಒಪ್ಪಂದದ ಪ್ರಕಾರ ಕ್ಯಾಂಟನ್, ಅಮೋಯ್, ನಿಂಗ್ ಪೋ ಮತ್ತು ಶಾಂಘೈ ಮುಂತಾದ ಚೀನಾದ ಪ್ರಮುಖ ಬಂದರುಗಳನ್ನು ವಿದೇಶಿ ವ್ಯಾಪಾರಕ್ಕಾಗಿ ಮುಕ್ತಗೊಳಿಸಲಾಯಿತು.

*ಅಫೀಮು ಯುದ್ಧವು ಚೀನಾದಲ್ಲಿ ಯುರೋಪಿನ ಆಧಿಪತ್ಯವನ್ನು ಬಲಗೊಳಿಸಲು ಹೇಗೆ ಕಾರಣವಾಯಿತು ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.*

## ರಾಜಾಡಳಿತ ಕೊನೆಗೊಳ್ಳುತ್ತಿದೆ

ವಿದೇಶಿ ಶಕ್ತಿಗಳ ಹೆಚ್ಚುತ್ತಿರುವ ಹಸ್ತಕ್ಷೇಪವು ಚೀನಾದ ಜನರಲ್ಲಿ ಅವರೊಂದಿಗಿರುವ ದ್ವೇಷವನ್ನು ಹೆಚ್ಚಿಸಿತು. ಇದರ ಪರಿಣಾಮವಾಗಿ ಚೀನಾದಲ್ಲಿ ಅನೇಕ ರಹಸ್ಯ ಗುಂಪುಗಳು ರೂಪುಗೊಂಡವು. ಬಾಕ್ಸರ್‌ಗಳು (Boxers) ಆ ರೀತಿಯಲ್ಲಿ ರೂಪಗೊಂಡ ಒಂದು ರಹಸ್ಯಗುಂಪಾಗಿದೆ. ಬಾಕ್ಸರ್‌ಗಳ ಮುಷ್ಟಿಯು (Boxers Fist) ಅವರ ಚಿಹ್ನೆಯಾಗಿತ್ತು. ಯುರೋಪಿಯನ್ ಆಕ್ರಮಣದ ವಿರುದ್ಧ ಇವರು ನಡೆಸಿದ ಪ್ರತಿರೋಧವನ್ನು 'ಬಾಕ್ಸರ್ ದಂಗೆ' (Boxer Rebellion) ಎಂದು ಕರೆಯುತ್ತಾರೆ.

ಬಾಕ್ಸರ್ ದಂಗೆಯ ನಂತರ ಚಕ್ರವರ್ತಿಯು ಚೀನಾದಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೊಳಿಸಿದನು. ಅವು ಯಾವುವು ಎಂದು ಪರಿಶೀಲಿಸೋಣ.

ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಚೀನಾದಲ್ಲಿ ಜಾರಿಗೊಳಿಸಿದರು.

ಯುರೋಪಿನ ದೇಶಗಳ ರಾಜಕೀಯ ವ್ಯವಸ್ಥೆಗಳ ಕುರಿತು ಅಧ್ಯಯನವನ್ನು ನಡೆಸಲು ಒಂದು ಆಯೋಗವನ್ನು ರೂಪಿಸಿದರು.

ಚಕ್ರವರ್ತಿಯ ಈ ಸುಧಾರಣೆಗಳು ಚೀನಾದ ಜನರನ್ನು ತೃಪ್ತಿಪಡಿಸಲಿಲ್ಲ. ಚೀನಾವನ್ನು ಆಡಳಿತ ಮಾಡುತ್ತಿದ್ದ ಮಾಂಚು ರಾಜವಂಶವನ್ನು ಅಧಿಕಾರದಿಂದ ಕೆಳಗಿಳಿಸಿದರೆ ಮಾತ್ರ ವಿದೇಶಿ ಶಕ್ತಿಗಳಿಂದ ಚೀನಾವನ್ನು ಮುಕ್ತಿಗೊಳಿಸಲು ಸಾಧ್ಯ ಎಂದು ಜನರು ನಂಬಿದರು. ಇವರಿಗೆ ಡಾ. ಸನ್‌ಯಾತ್ ಸೇನ್‌ರು ನೇತೃತ್ವವನ್ನು ನೀಡಿದರು. ಇದಕ್ಕಾಗಿ ಅವರು ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾಜವಾದ ಎಂಬೀ ಆಶಯಗಳನ್ನು ಮುಂದಿಟ್ಟರು.

ಈ ಉದ್ದೇಶವನ್ನು ಸಾಧಿಸಲು ಕುಮಿಂಗ್ ತಾಂಗ್ ಪಕ್ಷವನ್ನು ರೂಪೀಕರಿಸಿದರು. 1911ರ ಕ್ರಾಂತಿಯ ನಂತರ ಮಾಂಚು ರಾಜವಂಶವನ್ನು ಅಧಿಕಾರದಿಂದ ಕಿತ್ತುಹಾಕಿದರಲ್ಲದೆ ಒಂದು ಗಣರಾಜ್ಯ ಸರಕಾರಕ್ಕೆ ರೂಪು ನೀಡಿದರು. ಆದರೆ ನಂತರದ ಕಾಲದಲ್ಲಿ ಸನ್ ಯಾತ್ ಸೇನ್ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿದನು ಮತ್ತು ಯುವಾನ್ ಶಿ ಕೆಯ್ ಅಧಿಕಾರಕ್ಕೆ ಬಂದನು. 1916 ರಲ್ಲಿ ಇವನ ಮರಣದ ನಂತರ ಸನ್ ಯಾತ್ ಸೇನ್ ಮರಳಿ ಅಧಿಕಾರಕ್ಕೆ ಬಂದನು.

### *ಡಾ. ಸನ್‌ಯಾತ್ ಸೇನ್*

*ಪಾಶ್ಚಾತ್ಯ ಶಿಕ್ಷಣ ಪಡೆದ ಸನ್‌ಯಾತ್ ಸೇನ್ ವೈದ್ಯಕೀಯ ಅಧ್ಯಯನವನ್ನು ಪೂರ್ಣಗೊಳಿಸಿದರು. ಒಬ್ಬ ಸಮಾಜ ಸುಧಾರಕನಾಗಬೇಕೆಂದು ಅವರು ಬಯಸಿದ್ದರು. ಆದರೆ ಚೀನಾದಲ್ಲಿ ಸಮಾಜ ಸುಧಾರಣೆ ಸಾಧ್ಯವಿಲ್ಲ ಎಂದು ಅರಿತುಕೊಂಡು ಅವರು ಪ್ರಗತಿಪರ ಗಣರಾಜ್ಯವನ್ನು ಸ್ಥಾಪಿಸುವುದಕ್ಕೋಸ್ಕರ 'ಚೀನಾ ಪುನರುಜ್ಜೀವನ ಸಂಘ' ವನ್ನು ಸ್ಥಾಪಿಸಿದರು. ಇದು ನಂತರ 'ಕುಮಿಂಗ್ ತಾಂಗ್' ಪಕ್ಷವಾಗಿ ಬದಲಾಯಿತು. ಅವರನ್ನು ಚೀನಾದ ಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ.*

*ಚೀನಾದಲ್ಲಿ ರಾಜಾಡಳಿತವನ್ನು ಕೊನೆಗೊಳಿಸುವುದಕ್ಕಾಗಿ ಸನ್ ಯಾತ್ ಸೇನ್ ಮತ್ತು ಆತನ ಆಶಯಗಳು ಬೀರಿದ ಪ್ರಭಾವದ ಕುರಿತು ಚರ್ಚಿಸಿ ಕಿರುಲೇಖನ ತಯಾರಿಸಿರಿ.*

## ಜನತಾ ಚೀನಾ

ರಷ್ಯಾದ ಕಮ್ಯೂನಿಸ್ಟ್ ಕ್ರಾಂತಿಯ ಕುರಿತು ನಾವು ಚರ್ಚಿಸಿದ್ದೇವಲ್ಲವೇ. ರಷ್ಯಾದ ಕಮ್ಯುನಿಸ್ಟ್ ಆಶಯಗಳು ಚೀನಾದಲ್ಲಿಯೂ ಪ್ರಚಾರಗೊಳ್ಳಲು ಪ್ರಾರಂಭವಾದವು. 1921 ರಲ್ಲಿ ಮಾವೋ ತ್ಸೆ ತುಂಗ್‌ನ ನೇತೃತ್ವದಲ್ಲಿ ರೂಪೀಕರಿಸಿದ ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ ಕೃಷಿಕರ ಮತ್ತು ಕಾರ್ಮಿಕರ ಮೇಲೆ ಪ್ರಭಾವ ಬೀರಲು ಸಾಧ್ಯವಾಯಿತು. ರಷ್ಯಾವು ಚೀನಾದ ವಿವಿಧ ವಲಯಗಳ ಪ್ರಗತಿಗಾಗಿ ಕುಮಿಂಗ್ ತಾಂಗ್ ಗಣರಾಜ್ಯಕ್ಕೆ ಸಹಾಯ ಮಾಡಿತು. ಕಮ್ಯೂನಿಸ್ಟರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ಸನ್ ಯಾತ್ ಸೇನ್ 1925 ರಲ್ಲಿ ಮರಣಹೊಂದಿದರು.

ಸನ್‌ಯಾತ್ ಸೇನ್‌ರ ಮರಣಾನಂತರ ಅಧಿಕಾರಕ್ಕೆ ಬಂದ ಚಿಯಾಂಗ್ ಕೈಶೇಕ್ ಕಲ್ಲಿದ್ದಲು, ಕಬ್ಬಿಣ ಎಂಬಿವುಗಳ ಉತ್ಪಾದನೆ, ಬ್ಯಾಂಕಿಂಗ್, ವಿಮೆ ಮತ್ತು ವಿದೇಶಿ ವ್ಯಾಪಾರವನ್ನು ವಿದೇಶಿ ಶಕ್ತಿಗಳಿಗೆ ತೆರೆದಿಟ್ಟರು. ಪರಿಣಾಮವಾಗಿ ಎಲ್ಲಾ ವಲಯಗಳನ್ನು ವಿದೇಶಿ ಶಕ್ತಿಗಳು ನಿಯಂತ್ರಿಸಿದವು. ಇದರ ಮೂಲಕ ಅವರು ಚೀನಾದಿಂದ ಅಪಾರ ಪ್ರಮಾಣದ ಹಣವನ್ನು ಕೈವಶಮಾಡಿದರು. ಈ ನೀತಿಗಳನ್ನು ಮಾವೋ ತ್ಸೆ ತುಂಗ್ ನೇತೃತ್ವದಲ್ಲಿರುವ ಕಮ್ಯೂನಿಸ್ಟ್ ಪಕ್ಷವು ವಿರೋಧಿಸಿತು. ಕೆಂಪು ಸೇನೆ (Red Army) ಯು ಇಂತಹ ಪ್ರತಿರೋಧಗಳಿಗೆ ನೇತೃತ್ವ ನೀಡಿತು. 1934 ರಲ್ಲಿ ಕೃಷಿಕರು ಮತ್ತು ಕಾರ್ಮಿಕರನ್ನು ಸಂಘಟಿಸಿ ಮಾವೋ ತ್ಸೆ ತುಂಗ್ ತನ್ನ ಪ್ರಸಿದ್ಧ 'ಲೋಂಗ್ ಮಾರ್ಚ್' ನ್ನು ಆಯೋಜಿಸಿದನು. ಚಿತ್ರವನ್ನು ನಿರೀಕ್ಷಿಸಿ ಇದರ ವಿಶೇಷತೆಗಳು ಯಾವುವು ಎಂದು ಕಂಡುಕೊಳ್ಳಿರಿ.



*ಚಿತ್ರ 13.11 • ಮಾವೋ ತ್ಸೆ ತುಂಗ್*

*1893 ಡಿಸೆಂಬರ್ 26ರಂದು ಮಾವೋ ಯಿಚ್ಚಾಂಗ್ ಮತ್ತು ಪೆನ್ ಕ್ವಿ ಮೇಯಿಯ ಮಗನಾಗಿ ಶಾವೊಶನ್ ನಲ್ಲಿ ಜನಿಸಿದರು. ಅವರು ಚೈನೀಸ್ ಕಮ್ಯೂನಿಸ್ಟ್ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಲೋಂಗ್ ಮಾರ್ಚ್ ಗೆ ನೇತೃತ್ವ ನೀಡಿದ ಇವರು ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಸ್ಥಾಪಕರು. ಸಾಕ್ಷರತೆ, ಮಹಿಳೆಯರ ಹಕ್ಕುಗಳು ಮತ್ತು ಆರೋಗ್ಯ ಸಂರಕ್ಷಣೆ ಇತ್ಯಾದಿಗಳನ್ನು ಉತ್ತಮಪಡಿಸಿಕೊಂಡು ಚೀನಾವನ್ನು ವಿಶ್ವ ರಾಷ್ಟ್ರಗಳಲ್ಲೇ ಮುಂಚೂಣಿಗೆ ತಲುಪಿಸಲು ಇವರಿಗೆ ಸಾಧ್ಯವಾಯಿತು.*

## ಲೋಂಗ್ ಮಾರ್ಚ್ ಹಾದುಹೋದ ದಾರಿಗಳು (8000 ಮೈಲು)




*ಚಿತ್ರ 13.13 • ಲೋಂಗ್ ಮಾರ್ಚ್ ಹಾದುಹೋದ ದಾರಿಗಳು*

- ಲೋಂಗ್ ಮಾರ್ಚ್ ಎಲ್ಲಿಂದ ಆರಂಭವಾಯಿತು?
- ಲೋಂಗ್ ಮಾರ್ಚ್ ಎಲ್ಲಿ ಕೊನೆಗೊಂಡಿತು?
- ಒಟ್ಟು ಎಷ್ಟು ರಾಜ್ಯಗಳ ಮೂಲಕ ಹಾದು ಹೋಯಿತು?

1949 ಏಪ್ರಿಲ್ 21ರಂದು ಕುಮಿಂಗ್ ತಾಂಗ್ ಸರಕಾರದ ರಾಜಧಾನಿಯಾಗಿದ್ದ ನಾಂಕಿಂಗ್ ನ್ನು ಕೆಂಪು ಸೇನೆಯು ವಶಪಡಿಸಿತು. ನಂತರ ಅಕ್ಟೋಬರ್ 1 ರಂದು ಮಾವೋ ತ್ಸೆ ತುಂಗ್‌ನ ನೇತೃತ್ವದಲ್ಲಿ ಚೀನಾವನ್ನು ಜನತಾ ಗಣರಾಜ್ಯವಾಗಿ ಘೋಷಿಸಿತು.

*ಜನತಾ ಗಣರಾಜ್ಯದ ರೂಪೀಕರಣದಲ್ಲಿ ಮಾವೋ ತ್ಸೆ ತುಂಗ್‌ನ ಪಾತ್ರದ ಕುರಿತು ಚರ್ಚಿಸಿ ಪ್ರೊಫೈಲ್ ಆಲ್ಬಂ ತಯಾರಿಸಿರಿ.*

ಮಾವೋ ತ್ಸೆ ತುಂಗ್ ನ ನೇತೃತ್ವದಲ್ಲಿ ಹಲವು ಆರ್ಥಿಕ ಸುಧಾರಣೆಗಳು ಚೀನಾದಲ್ಲಿ ಜಾರಿಗೊಂಡವು. ಅವು ಮಹತ್ತರವಾದ ಮುಂದಕ್ಕಿರುವ ಜಿಗಿತ (The Great Leap Forward) ಎಂದು ಪ್ರಖ್ಯಾತವಾಗಿವೆ. ಈ ರೀತಿಯ ಕ್ರಮಗಳ ಮೂಲಕ ಚೀನಾವು ಜಗತ್ತಿನ ದೇಶಗಳ ಮಧ್ಯೆ ಪ್ರಧಾನ ಶಕ್ತಿಯಾಗಿ ಬೆಳೆಯಿತು.

**ಕ್ರಾಂತಿಯ ಪರಿಣಾಮಗಳು**

- ಚೀನಾವು ಜನತಾ ಗಣರಾಜ್ಯವಾಯಿತು
- ಚೀನಾದಲ್ಲಿ ವಿದೇಶಿ ಆಧಿಪತ್ಯ ಕೊನೆಗೊಂಡಿತು.
- ಕೃಷಿ ಭೂಮಿ ಕೃಷಿಕರಿಗೆ ಲಭಿಸಿತು.
- ಜಗತ್ತಿನ ದೇಶಗಳ ನಡುವೆ ಸಮಾಜವಾದಿ ಆಶಯಗಳು ವ್ಯಾಪಿಸಲು ಕಾರಣವಾಯಿತು.

ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳು ಜಗತ್ತಿನ ದೇಶಗಳ ನಡುವೆ ನಡೆಸಿದ ಹಸ್ತಕ್ಷೇಪದ ಭಾಗವಾಗಿ ಸ್ವಾತಂತ್ರ್ಯ ನಿಷೇಧಿಸಲ್ಪಟ್ಟ ಜನರು ನಡೆಸಿದ ಪ್ರತಿರೋಧಗಳ ಕುರಿತು ಈ ಅಧ್ಯಾಯದಲ್ಲಿ ನಾವು ಚರ್ಚಿಸಿದೆವು. ಈ ಕ್ರಾಂತಿಗಳು ಪ್ರಜಾಪ್ರಭುತ್ವ ಸಮಾಜವಾದ ಎಂಬೀ ಆಶಯಗಳು ಜಗತ್ತಿನ ದೇಶಗಳ ನಡುವೆ ಆಳವಾಗಿ ಬೇರೂರಲು ಸಹಾಯಕವಾದವು. ಕ್ರಾಂತಿಯ ಕಾಲದಲ್ಲಿ ಮೂಡಿಬಂದ ಆಶಯಗಳು ಮತ್ತು ಚಿಂತನೆಗಳು ಆಧುನಿಕ ಜಗತ್ತಿನ ಬೆಳವಣಿಗೆಗೆ ಕಾರಣವಾದವು.

## ಮುಂದುವರಿದ ಚಟುವಟಿಕೆಗಳು

- ಅಮೆರಿಕಾದ ಸ್ವಾತಂತ್ರ್ಯ ಹೋರಾಟಕ್ಕೆ ಕಾರಣವಾದ ಘಟನೆಗಳನ್ನು ಸೇರಿಸಿ ಒಂದು ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿರಿ.
- ರಷ್ಯಾದ ಕ್ರಾಂತಿಯ ನಂತರ ಯು.ಎಸ್.ಎಸ್.ಆರ್. ನಲ್ಲಿ ಸೇರಿಸಲಾದ ಪ್ರದೇಶಗಳ ಪಟ್ಟಿ ತಯಾರಿಸಿರಿ.
- ಜಗತ್ತಿನಲ್ಲಿ ನಡೆದ ಪ್ರಮುಖ ಕ್ರಾಂತಿಗಳ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಡಿಜಿಟಲ್ ಲೇಖನ ತಯಾರಿಸಿರಿ.
- ರಷ್ಯಾದ ಕ್ರಾಂತಿ, ಚೀನಾದ ಕ್ರಾಂತಿ ಎಂಬಿವುಗಳಿಗೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ಮೈಂಡ್ ಮ್ಯಾಪಿಂಗ್ ನ ಮೂಲಕ ಪ್ರಸ್ತುತಪಡಿಸಿರಿ.

## ಟಿಪ್ಪಣಿಗಳು

# ಟಿಪ್ಪಣಿಗಳು

# ಭಾರತದ ಸಂವಿಧಾನ

ಭಾಗ IV ಕ

## ಮೂಲಭೂತ ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ. ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ:**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

*online* ***R.T.E Monitoring : www.nireekshana.org.in***